ನೆಲ-ಮುಗಿಲು

(ಕವನಸಂಗ್ರಹ)

ಚೆನ್ನವೀರ ಕಣವಿ

VEC, Library
003517

ಪ್ರಕಾಶಕರು
ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು-4

3517

VEC, Library
003517

647

ಠಕ್ಕ VECKAN899

VIJAYA EVENING COLLEGE,
LIBRARY
BANGALORE-4.
ACCN. NO. 3517
SECTION
COST Rs. 5/-
Date 8/9/72 Librarian.

13 OCT 1985

647

ನೆಲ-ಮುಗಿಲು

(ಕವನಸಂಗ್ರಹ)

ಚೆನ್ನವೀರ ಕಣವಿ

ಪ್ರಕಾಶಕರು
ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು-4

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು
H. M. SHANKAR NARAYAN RAO, M.A.
Professor and Head of the Department of Kannada
Sarada Vilas College, Mysore-4

ಮೊದಲ ಮುದ್ರಣ 1965

All rights reserved by the Author

ಬೆಲೆ

ಸಾಧಾರಣ ಪ್ರತಿ ರೂ. 3.00 ಕ್ಯಾಲಿಕೊ ಪ್ರತಿ ರೂ. 5.00

ಮುದ್ರಕರು
ವೆಸ್ಲಿ ಪ್ರೆಸ್, ಮೈಸೂರು

ಪೂಜ್ಯರಾದ ಅತ್ತೆ, ಮಾವಂದಿರು

ಶ್ರೀ ಸಿದ್ಧಬಸಪ್ಪ ಗಿಡ್ನವರ, ಶ್ರೀಮತಿ ಭಾಗೀರಥೀದೇವಿ

ಅವರ

ಸರಸ ಸಜ್ಜನಿಕೆಗೆ ಹಾಗು ಸಾಹಿತ್ಯಪ್ರೇಮಕ್ಕೆ

ಈ ಕೃತಿ ಸಮರ್ಪಿತ

ನಾಲ್ಕು ಮಾತು

'ನೆಲ-ಮುಗಿಲು' ಕವನ ಸಂಗ್ರಹವು ಶ್ರೀ ಚೆನ್ನವೀರ ಕಣವಿಯವರ ಏಳನೆಯ ಕೃತಿ. ಅವರ ಮೊದಲ ಕವನ ಸಂಗ್ರಹ 'ಕಾವ್ಯಾಕ್ಷಿ' ಹುಬ್ಬಳ್ಳಿಯಲ್ಲಿ ಪ್ರಕಟವಾಯಿತು; ನಾನು ಸೊಲ್ಲಾಪುರದಿಂದ ಅದಕ್ಕೆ 'ಮುನ್ನುಡಿ' ಬರೆದು ಕಳುಹಿದೆ. ಅದು ೨೦-೪-೪೯ರ ಮಾತು. ಈಗ ೧೯೬೫ರ ಅಗಸ್ಟ ತಿಂಗಳಲ್ಲಿ ಧಾರವಾಡದಿಂದ 'ನಾಲ್ಕು ಮಾತು' ಬರೆಯುತ್ತಿದ್ದೇನೆ; ಕವನ ಸಂಗ್ರಹವು ಮೈಸೂರಿನಲ್ಲಿ ಪ್ರಕಟವಾಗಲಿದೆ. ಈ ಕವಿ ತನ್ನ 'ಸಪ್ತ-ಪದಿ'ಯಿಂದ ಏಳಿಗೆ ಪಡೆದಿದ್ದಾನೆ ಹದಿನಾರು ವರ್ಷಗಳಲ್ಲಿ. ಈ ಪ್ರೌಢತೆಗೆ ಮುನ್ನುಡಿಯಿರುವುದು ಅನವಶ್ಯಕ. ಆದರೆ ವಿನಯ, ಸಂಪ್ರದಾಯದ ಪ್ರಾರಬ್ಧ ಇದು ಎಂಬಂತೆ 'ನಾಲ್ಕು ಮಾತು' ಸಹೃದಯತೆಯಿಂದ ಸೇರಿಸುತ್ತಿದ್ದೇನೆ-ಕವಿಯ ಪ್ರೀತಿಯ ನಿಮಿತ್ತವೂ ಹೌದು.

ಕಣವಿ ಅವರ ಕಾವ್ಯ-ಶ್ರದ್ಧೆ ಇಲ್ಲಿ ನಿಷ್ಠೆಯ ಕಣ್ಣು ತೆರೆದು ತೋರಿದೆ. ಕಾವ್ಯಾಭ್ಯಾಸಿಗಳು 'ವಿನಾಯಕ-ಅಡಿಗ'ರ ತರುವಾಯ 'ಕಣವಿ-ಶಿವರುದ್ರಪ್ಪ' ಎಂತಲೂ ಹೆಸರಿಸುತ್ತಿದ್ದಾರೆ. ಸ್ವತಃ ಶ್ರೀ ಶಿವರುದ್ರಪ್ಪನವರು 'ನಿಸ್ಸಾರ ಅಹಮ್ಮದ—ಚಂದ್ರಶೇಖರ' ಎಂದು ಮುಂದಿನ ಜೋಡಿ ಸೂಚಿಸಿದ್ದಾರೆ. ಯಾರೋ ಮುಂದೆ ಹೆಜ್ಜೆಯಿಟ್ಟು, 'ಚಿತ್ತಾಳ-ಕಂಬಾರ' ಎಂದೂ ಮಾತು ಪುಟಿಸಿದರು. 'ಶ್ರೀ-ಶ್ರೀನಿವಾಸ' 'ಪೈ-ಪಂಜೆ'ಗಳ ಈ ಕಾವ್ಯರಥಕ್ಕೆ ಎಷ್ಟು ಜೋಡುಗಾಲಿಗಳೋ ಎಣಿಸಿದವರಾರು? 'ನಕ್ಕಳಾ ತಾಯಿ!'

ಶ್ರೀ ಕಣವಿಯವರು ತಮ್ಮ ಗದುಗಿನ ಕವಿ ಸಮ್ಮೇಲನ ಪೀಠದಿಂದ ಮಾಡಿದ ಕಾವ್ಯ ಸಿಂಹಾವಲೋಕನದಲ್ಲಿ ತಮ್ಮನ್ನೂ ವಿಮರ್ಶೆಗೆ ಗುರಿಪಡಿಸಿಕೊಂಡು ತಮ್ಮ ಹಂತ ಹೇಳಿದ್ದಾರೆ. ಶ್ರೀ ವಿನಾಯಕ ಗೋಕಾಕರು ಹಿಂದೆ ಚೆನ್ನಮಲ್ಲ ಹಿಡಿದ ಹಾದಿಯಲ್ಲಿ ಇಂದು ಚೆನ್ನವೀರ ಮುಂದಾಗುತ್ತಾರೆ-ಎಂದು 'ಭಾವಜೀವಿ'ಯ ಸಂದರ್ಭದಲ್ಲಿ ಸೂಚಿಸಿದ್ದರು. ಶ್ರೀ ಕೈಕಿಣಿಯವರು 'ಮಣ್ಣಿನ ಮೆರವಣಿಗೆ' ಎಂಬ ಕವನ ಸಂಗ್ರಹಕ್ಕೆ ಹಿಂದೆ ಮುಂದೆ ಮಶಾಲು ಎತ್ತಿ ಕವಿ ಕಣವಿಯವರು ಸಂಕ ದಾಟುತ್ತಿರುವ ಚಮತ್ಕಾರವನ್ನು ವಿವರಿಸಿದ್ದಾರೆ. ಶ್ರೀ ಕೀರ್ತಿನಾಥ ಕುರ್ತಕೋಟಿಯವರು ನವ್ಯ ಕವಿ ಪರಂಪರೆಯ ಮಣಿಮಾಲೆಯಲ್ಲಿ ಈ ಕವಿಯ ಸ್ಥಾನವನ್ನು ಗುರುತಿಸಿದ್ದಾರೆ. ನಾಳಿನ ಕವಿ

ಗಳು ಕಣವಿಯವರ ಆಶೀರ್ವಾದ ಬಯಸುವ ಹದಕ್ಕೆ ಕಾಲ ಬಂದಿರುವಾಗ ನನ್ನ 'ನಾಲ್ಕು-ಮಾತು' ಯಾವ ಮೀಸಲು ಮುರಿಯಬೇಕು? 'ಕಾವ್ಯಾಕ್ಷಿ'ಯ ಮುನ್ನುಡಿಯಲ್ಲಿ ನಾನು ಹೇಳಿದ ಮಾತು ಇಂದೂ ಹೇಳಬಹುದು; ಜಾತಿ ಅದೇ. ಆದರೆ ಒಗರು-ಪೊಗರು ಕಣ-ಕಣದಲ್ಲಿ ಪಿಂಡಗೊಂಡಿದೆ. ವಿನಯವೂ ಅಷ್ಟೇ ದಿಟವಾಗಿದೆ. ವಿನಯ ಹಳಸುವ ಬದುಕಲ್ಲ, ವಿಶಿಷ್ಟಕ್ಕೆ ತೊಡಕಲ್ಲ, ಇದು ಧಾರವಾಡ ತತ್ವ!

ಧಾರವಾಡ! ಭೂಮಿ ಅಂದರೂ, ಭಾರತ ಅಂದರೂ, ಕರ್ನಾಟಕ ಎಂದರೂ ಅಷ್ಟೆ, ಒಂದು ನೆಲದ ಒಂದು ಮಂದಿ; ಒಂದೇ ತನು-ಮನ-ಧನ ಎಂಬಂತೆ ಒಂದು 'ಜನ' ಆಗುವದು ಅವಸರದ ಅಡಿಗೆ ಅಲ್ಲ; ಕಾಲದ ಪಾಕ. ಹೂಲಿ, ಕಟ್ಟಿ, ರೊದ್ದ, ಅರಟಾಳ, ಕುಮಾರಸ್ವಾಮಿ, ಆರೂಢರು, ಘಾಟಕ, ಸಕ್ಕರಿ, ಶರೀಫ ಸಾಹೇಬ, ಗಳಗನಾಥ, ಕೆರೂರ, ಆಲೂರ ಹೀಗೆ ಹೆಜ್ಜೆ ಇಕ್ಕುತ್ತ, ಪರಾಕ್ರಮಣ ತಟ್ಟು ಮಾಡಿ ಸಕಲ ಸಂಕ್ರಮಣಗಳಿಗೂ ವಿದ್ಯಾಕ್ಷೇತ್ರವನ್ನು ಹದಮಾಡುವದು ಜಿಗುಟು ಶ್ರದ್ಧೆಯ ಕಾರ್ಯ. ಇದು ಬೆವರಿನಿಂದ ಬೆಳೆಸಿದ ಪಯಿರು. ಇರುಳು ಕುಯ್ದುಕೊಂಡು ಬಂಡಿ ಹೇರಿ, ಹಗುರುಗಾಲಿನಿಂದ ಹೊರಟು ಹೋಗುವ ಧೂರ್ತರ ಚಮತ್ಕಾರವಲ್ಲ. ಸುಮ್ಮನೆ ರೂಪಗೊಂಡಿಲ್ಲ ವಿಶ್ವವಿದ್ಯಾಲಯದ ಪಾವಟೆ-ಗಿರಿ; ಮೈಲಾರಲಿಂಗದ ವಿದ್ಯಾಗಿರಿ; ಕೃಷಿಕಾಯಕದ ಎತ್ತಿನ ಗುಡ್ಡ-ವೃಷಭಗಿರಿ. ಅಥಣಿಯ ಪಾದಗಳು ಸದಾಶಿವ ಪೇಟೆ (ಹಾವೇರಿ ಪೇಟೆ)ಯ ಬಯಲಿನಲ್ಲಿ ನಿಲಯ ನೆಲಸಬೇಕಾದರೆ ಅನ್ನದಾನ ಎಷ್ಟು! ವಿದ್ಯಾದಾನ ಎಷ್ಟು! ಶ್ರದ್ಧಾದಾನ ಎಷ್ಟು! ಬೇಂದ್ರೇನ 'ಅಂಬಿಕಾತನಯ'ನಂತೆ ಕಣವಿಯ ಚೆನ್ನವೀರನಿಗೂ ಇವೇ, ಇಂಥವೇ ಮಹಾ ಪ್ರೇರಣೆಗಳು. ಒಬ್ಬ ಸರ್ವಜ್ಞನಿಗಾಗಿ ಒಂದು ಕೊರಡು ತೆಯ್ದು ಸುಗಂಧವಾಗಿ ಹೋಯಿತು. ಒಂದು ವಚನಶಾಸ್ತ್ರ ಕಟ್ಟುವ, ಬಿಚ್ಚುವ ಕಾಯಕದಲ್ಲಿ ಒಂದು ದೇಹ ಮಣ್ಣು-ಭಸ್ಮವಾಗಿ ಹೋಯಿತು. ಮಿಂಚಿನ ಬಳ್ಳಿಯ 'ಸಂಚಿಕೆ,' 'ನಡೆದು ಬಂದ ದಾರಿ'ಯ ಮನ್ವಂತರ, ಬುನಾದಿ ಇಲ್ಲದೆ ಕಟ್ಟಿದ ಕಟ್ಟಡಗಳೆ? ಹಿಂದೆ 'ಪ್ರಭಾತ' ಕಾವ್ಯ ಆಗಿ ಹೋಯಿತು, ಇಂದು 'ಸಂಕ್ರಮಣ' ಕಾವ್ಯ ಬಂದಿದೆ. ಕಾವ್ಯಾನುಭವ ಮಂಟಪ, ಸಾಹಿತ್ಯ ಮಂಟಪಗಳು 'ನಾಡಹಬ್ಬ'ದ ಹಂದರಗಳ ಮರಿ. 'ವಾಗ್ಭೂಷಣ' ನುಂಗಿ ನಿಂತಿರುವ 'ವಿದ್ಯಾವರ್ಧಕ ಸಂಘ'ವು ಬರುವವರಿಗೆ ಹರವು; ಹೋಗುವವರಿಗೆ ತೆರವು. ಇದು ಧಾರವಾಡ.

ಶ್ರೀ ಕಣವಿಯವರನ್ನು ಸುತ್ತಿಕೊಂಡ ಕಾರ್ಯ-ಪ್ರಕಾಶನ, ಪ್ರಚಾರ-ಉಪನ್ಯಾಸ, ಗೆಳೆತನದ ಸಹಕಾರ್ಯದ ಚಟುವಟಿಕೆಗೆ ಮೊದಲು ಒಂದೊಂದಕ್ಕೂ

ಸಾವಿರ ಬಿಸಿ ಉಸಿರು ಆರಿ, ಹಾರಿ ಹೋಗಿವೆ. ಧಾರವಾಡಕ್ಕಿಂತ ಹೆಚ್ಚು ಮಳೆ, ಹುಚ್ಚು ಹಸಿರು, ದಾಂಡೇಲಿಯ ದಂಡಕಾರಣ್ಯದಲ್ಲಿ ರಾಮಾಯಣ ಕಾಲದಿಂದ ಇದ್ದೇ ಇದೆ. ಶಕ್ತಿಮೀರಿ ದುಡಿಯುವ ವ್ಯಕ್ತಿ; ಭಕ್ತಿಸೋಸಿ ನುಡಿಯುವ ಯುಕ್ತಿ; ಎಲ್ಲಿಂದ ತರಬೇಕು? ಬೆಳುದಿಂಗಳ, ಮಲಯಾನಿಲ, ಬೆಲೆಕೊಟ್ಟು ಇಂದಿನ ಯಂತ್ರವಿಜ್ಞಾನ ಯುಗದಲ್ಲಿ ತರಬಹುದೋ ಏನೋ! "ಎಚ್ಚರಿಕೆ ಭಾಗ್ಯ ಯಾರಿಗು ಸ್ಥಿರವಲ್ಲ, ಎಚ್ಚರಿಕೆಚ್ಚರಿಕೆ" ಪಡಿನುಡಿ ಗುಡುಗಿದರು ಮುದುವೀಡು ಕೃಷ್ಣರಾಯರು! ಧಾರವಾಡದ ಹಳೆಕೋಟೆಯ ಮಣ್ಣು ಸಿಡಿದು ಹೋಯಿತು ನಡುಗಿ. 'ವಿನಾಯಕ' ಹಾಡಲಿ, 'ಕಣವಿ' ಹಾಡಲಿ, ಧಾರವಾಡ ತತ್ತ್ವ ಅದು.

ಇಂದು ಹುಬ್ಬಳ್ಳಿಯ ಹೂ, ಧಾರವಾಡದ ದಾರ ಸರಗೊಳಿಸುವ ಕಾಲ ಬಂದಿದೆ. ಸೂಜಿ ಕಾಯಕದ ಕುಶಲ ಕರ್ಮವು ಚುಚ್ಚುಮದ್ದಿಸಂತೆ ಚುಟುಕಿಯ ಕೆಲಸವಲ್ಲ. ಪ್ರಕೃತಿಯನ್ನು ವಿಕೃತಿಗೊಳಿಸುವ ಚೆಂದಗೇಡಿತನವನ್ನು ಚಾತುರ್ಯ ದಿಂದ ಬದಿಗೊತ್ತಿ, ಸಂಸ್ಕೃತಿಯ ಅಧಿಕಾರಕ್ಕೆ ಆಮಂತ್ರಣವೀಯುವದು ಮೈತುಂಬ ಎಚ್ಚರದ ಕೆಲಸ. ಅದು ಶೀಲದ ಚಾರಿತ್ರಿಕ ಸಾಹಿತ್ಯ. ಶೀಲದ ಮೂಲ ಸತ್ವ; ಒಣಹಟ, ಕಟ್ಟೆ ಛಲ ಅಲ್ಲ. ಇಂಥ ಸತ್ವದಲ್ಲಿ ಉನ್ಮುಖ ಶ್ರದ್ಧೆ ಹುಟ್ಟುತ್ತದೆ. ಅಷ್ಟೇ ಬೇರು ನೆಲದೊಡಲಿಗೂ ಬಿಟ್ಟಿರುತ್ತದೆ. ಇದು ಕವಿಜೀವದ ವೀರ್ಯ. ವೀರ್ಯವೇ ನಿಷ್ಠೆಯಿಂದ ಸಾಕಾರವಾಗುತ್ತದೆ, ಹಠದ ತಿಪ್ಪರಲಾಗವಲ್ಲ; ಛಲದ ತಲೆ ತಿರುಕತನವಲ್ಲ. ಇಂಥ ವೀರ್ಯಕ್ಕೆ ಅಖಂಡ ಸ್ಮರಣೆಯ ಸೆಲೆ ಹತ್ತುತ್ತದೆ. ಅಲ್ಲಿಯ ಅವಧಾನ ಮಹಾನಿಧಾನ, ಮಹಾಪ್ರಸಾದ. ಈ ಒಲವು ಕಣವಿ ಯವರ ಕವನಗಳಿಗಿದೆ. ಸಾಹಿತ್ಯ ನೆಲ-ಬಾನುಗಳಿಗೆ ಹೊಂದಿಕೆ ಮಾಡುವ ಮುಗಿಲಿನ ಮಿಂಚಿನಾಟ. ಈ ದ್ಯಾವಾಪೃಥಿವಿಯ ಪೂಜಕ ಇಲ್ಲಿಯ ಕವಿ.

ಇನ್ನು ಸದ್ಯದ ಸಂಗ್ರಹ:

'ನೆಲ-ಮುಗಿಲ'ನ ಕವನಗಳು ಪ್ರೇರಣೆ, ಪ್ರತಿಮೆ, ಪ್ರತಿಬಿಂಬ ಎಂದು ಮೂರು ಮುಖವಾಗಿವೆ. ಮೂರು ಭಾಗಕ್ಕೂ ನಾಕು ಸಾಲಿನ ಬಿರುದು-ಬಾವುಲಿ ಇದೆ. ಪ್ರೇರಣೆಯಲ್ಲಿ ಹಲವು ಅದ್ಭುತ ಪ್ರತಿಮೆಗಳಿವೆ; ಪ್ರತಿಮೆ ಗಳಲ್ಲಿ ಯಾವ ಪ್ರೇರಣೆ ಅಡಕವಾಗಿಲ್ಲ? ಪ್ರತಿಬಿಂಬದಲ್ಲಿ ಕವಿಯ ಕಲ್ಪನೆ ಯಾಡುವ ಗರಡಿಮನೆಯ ಅಂಕಣಗಳಿವೆ. ಎಲ್ಲಿ ನೋಡಿದರೂ ಧಾರವಾಡದ ಹೂರಣ. ಊರೂರಿಗೆ ಹತ್ತಿ ಹರಿಯುವ ಹೊಳೆ ಒಂದೆಯಾದರೂ ಕ್ಷಣ ಕ್ಷಣಕ್ಕೂ ಅದರ ನೀರು ಬೇರೆ. 'ಕಾವ್ಯಾಕ್ಷಿ'ಯಲ್ಲಿ ಇದೇ ನೆಲ ಮುಗಿಲು,

'ನೆಲ-ಮುಗಿಲಿ'ನಲ್ಲಿ ಅದೇ 'ಕಾವ್ಯಾಕ್ಷಿ.' ಆದರೆ ಕೆಚ್ಚು ಹೆಚ್ಚು. 'ವರ್ಣನಾ ನಿಪುಣಃ ಕವಿಃ!'

ಕಣವಿಯವರ ಕವನ ಹತ್ತುಗಡೆ ಹರಿದುಕೊಳ್ಳದೆ, ಸರ್ವಸಮಯಗಳ ಸಮನ್ವಯ ಒಳಗೊಳ್ಳಲು ತವಕಪಡುತ್ತದೆ: ಅದು ಅದರ ಛಂದ.

'ಮೃತ್ಯುಂಜಯ'ರಿಗೆ ಪುಷ್ಪಾಂಜಲಿ ಅರ್ಪಿಸಿದ ಕೈಗಳು ಪಾಂಡಿಚೇರಿಯ ಸಮಾಧಿಗೂ ಮುಗಿದುಕೊಳ್ಳುತ್ತವೆ. 'ಕಾಲ ನಿಲ್ಲುವದಿಲ್ಲ' ಓಡುವದಿಲ್ಲ. ಅದು ನೋಡುತ್ತದೆ; ಸಾಕ್ಷಿ. ಅಕ್ಷಿ ಅಕ್ಷಿಗಳ ಪ್ರತ್ಯಕ್ಷೀಕರಣದಲ್ಲಿ ಮೂಡುವ ಕಿರಣಗಳ ಬೆಳಕೇ ಬೇರೆ. ಈ ತಾಳ್ಮೆಗೂ ವಿಡಂಬನ ಕಲೆ ಗೊತ್ತಿದೆ. 'ಜಗದೇಕಮಲ್ಲ' ಕವನದಂತೆ 'ಕಣ್ಣೀರುವಷ್ಟು ನೋಟ' ಎಂಬ ಸಾನೆಟ್ಟಿನಲ್ಲಿಯೂ ಅದು ಹಣಿಕಿ ಹಾಕಿದೆ. 'ಶೀಲವಂತರ ಓಣಿಯಲ್ಲಿ ಕಣ್ಮರೆ ಕೋಳಿ' ಒಂದೇ ಸಾಲು ಸಾಕು. ಪಂಚಶೀಲವೇ ಬಿಕ್ಕೆ ಬೇಡುತ್ತಿರುವಾಗ ಕೋಳಿಯ ಕೂಗು ಕೇಳುವವರಾರು? ಹುಚ್ಚು ಕುರಿಮರಿ ಇನ್ನು ಜೋಪಾನ ಉಳಿದರೆ, ಅದೇ ಶೀಲ. ಕವಿಯ 'ಮೇಘೋಪಾಸನೆ' ಇಲ್ಲಿಯೂ ಮುಂದೆ ಸಾಗಿದೆ. 'ದೀಪಧಾರಿ'ಯ ಸುಳಿಯು 'ರಂಜನೆ'ಯಾಗಿ ಬಂದಿದೆ. 'ಆಕಾಶವಾಣಿ'ಯ ಪಂಚಾಂಗದ ಕರೆಗೆ ಓಗೊಟ್ಟ ಕಾಲೋಚಿತ ಕವನಗಳೂ ಇಲ್ಲಿ ಬಂದಿರುವವು. 'ನೆಹರು' ಅವರ ಸ್ಮೃತಿಯ ಕವನಗಳು ಬಾಳಿಕೆ ಬರುವಂಥವಾಗಿವೆ. 'ಭೂಮಿ ತೂಕ' ಶ್ರದ್ಧಾ ಪುಂಜ.—'ಧಾರವಾಡದಲ್ಲಿ ಮಳೆಗಾಲ' ಸುಂದರವಾದ ವರ್ಣಕ ಕವಿತ್ವ. 'ಪ್ರೇರಣೆ'ಯ ೨೩ ಕವನಗಳಿಗಿಂತ 'ಪ್ರತಿಮೆ'ಯ ೨೪ ಕವನಗಳು ಬಹಳೇ ಅಡಕವಾಗಿರುವದರಿಂದ ಬಲವಾಗಿವೆ. ಈ ಸಂಗ್ರಹಕ್ಕೆ ಹೆಸರುಗೊಟ್ಟ 'ನೆಲ-ಮುಗಿಲು' ಈ ವಿಭಾಗದ ಮೊದಲ ಕವನ. 'ಆದರೀಗಲೇ ಅದರ ಇತಿವೃತ್ತವನು ಬರೆಯದಿರು' ಎನ್ನುತ್ತಾನೆ ಕವಿ. ಆಗಲಿ, ಆದರೆ ನೆಲ-ಮುಗಿಲುಗಳಾಚೆಗೆ ಇರುವ 'ಬಾನಿನ ಅತೀಂದ್ರಿಯ ಸ್ಪರ್ಶ'ವನ್ನು ಕವಿ ಮರೆತಿಲ್ಲ. ವಾಚಕರೂ ಮರೆಯಬಾರದು. 'ವರ್ತುಳ'ದಲ್ಲಿ ಅತೀಂದ್ರಿಯ ಸ್ಪರ್ಶವಿದೆ. ಅಂತೆಯೇ 'ನಾದದೊಳಗೂ ಪ್ರತಿಮೆ' 'ಪ್ರಣಯ-ಪ್ರೀತಿ'ಯು 'ಪ್ರೀತಿಯ ಪಣತಿ' ಆಗ ಬಹುದಿತ್ತೇನೋ?

> 'ಕತ್ತಲೆಯ ಗರ್ಭದಲಿ ಬಿದ್ದ ಬೆಳಕಿನ ಬೀಜ
> ಬೆಳೆದು ಬ್ರಹ್ಮಾಂಡವನೆ ತಬ್ಬಿಕೊಂಡಿತು ಸಹಜ'

'ದಾಹ'ದ ಕೊನೆಯಲ್ಲಿ ಸಂಕಲ್ಪ-ವಿಕಲ್ಪ ತಾಕಲಾಡಿವೆ. 'ಉಪ್ಪು-ನೀರಿ'ನಲ್ಲಿ ಭುದಿಂಗನೆ 'ಹಿಮಗಿರಿ ತಿಮಿಂಗಲ' ಬಂದು 'ತಪ್ಪು ಯಾರದು?' ಎಂದು

ಕೇಳುವಂತಾಗಿದೆ. 'ಕತ್ತಲೆ-ಬೆಳಕು,' 'ರಾತ್ರಿ'ಗಳಲ್ಲಿ ಕರಂಟು ಆಗೀಗ ಫಕ ಫಕ ಮಾಡುವದು. 'ಕತ್ತಲೆಗೂ ಕಣ್ಣುಂಟು' ಆದರೆ 'ತೆರಬೇಕು ತಕ್ಕ ಬೆಲೆ.' ಕ್ರಮ-ಶ್ರಮಗಳ 'ಹಂಸ-ಕ್ಷೀರ' ನ್ಯಾಯವು ಇನ್ನೊಂದು ಪ್ರತಿಮೆಯಲ್ಲಿ ಮೂಡಿದೆ. ಮೂರು ಸಾನೆಟ್ಟುಗಳು ವಿಶ್ವವಿದ್ಯಾಲಯಕ್ಕೆ ಮುಡಿಪಾಗಿವೆ. 'ಬಿಸಮಿಲ್ಲಾರ ಶಹನಾಯಿವಾದನ ಕೇಳಿ' ಎಂಬ ಸಾನೆಟ್ಟು ಔಚಿತ್ಯ-ಸುಂದರ ವಾಗಿದೆ ಅಭಿವ್ಯಕ್ತಿಯಲ್ಲಿ. ವಿಶ್ವೇಶ್ವರಯ್ಯನವರಿಗೆ ವಂದಿಸಲು ಬಾಗಿದ ತಲೆಯಲ್ಲಿ—ನಮ್ಮ ಮಂದಿಯು ನೆನಪಾಗಿ 'ಜಂಗುತಿಂದವರಿವರು' ಎಂಬ ಮುಕ್ತಾಯವು ಫಡಾರೆಂದು ಕಪಾಳಕ್ಕಪ್ಪಳಿಸುತ್ತದೆ. 'ಉತ್ತಂಗಿ' 'ಗೋವಿಂದ ಪೈ'ಗಳಿಗೆ ತಕ್ಕ ಕಾಣಿಕೆ ಒಪ್ಪಿಸಿ, 'ದ. ಬಾ. ಕು. ಸ್ಮೃತಿ'ಯಲ್ಲಿ ದಿವಂಗತ ಶಿವೇಶ್ವರ ದೊಡ್ಡಮನಿ, ಹಲಸಂಗಿ ಚೆನ್ನಮಲ್ಲಪ್ಪ, ಬಸವನಾಳ ಇವರನ್ನು ಕುರಿತು ಈ ಕವಿ ಈ ಮೊದಲು ಬರೆದ ಕವನಗಳ ನೆನಪು ಮರುಕಳಿ ಸುತ್ತದೆ. 'ಹಳಕಟ್ಟಿ'ಯವರಿಗರ್ಪಿತವಾದ ಸಾನೆಟ್ಟಿನಲ್ಲಿ ವಿಶ್ವೇಶ್ವರಯ್ಯನವರ ಸಾನೆಟ್ಟಿನಂತೆ ಕೊನೆಯ ಸಾಲಿನಲ್ಲಿ ಚೇಳಿನ ಕೊಂಡಿ ಇದೆ.

'ಏಳು ಸಲ ಕರೆದರೂ ಎಚ್ಚರಾಗದು ನಮಗೆ.'

'ಪ್ರತಿಮಾ' ಕವನಗಳಲ್ಲಿ ಅರ್ಥಯತಿಗೆ ತಕ್ಕ ಪ್ರಸ್ತಾರ ರಚನೆ, ಶಿಥಿಲೋಚ್ಚಾರದ ಸ್ವಾಚ್ಛಂದ್ಯ, ಪಾದಾಂತಯತಿಯ ರಾಹಿತ್ಯವು ಶಬ್ದಗಳನ್ನು ಕತ್ತರಿಸುವಂತಾದುದು ನವೀನವಲ್ಲದಿದ್ದರೂ ಗಮನಾರ್ಹವಾಗಿದೆ.

'ಪ್ರೇರಣೆ', 'ಪ್ರತಿಮೆ'ಗಳು ಕವಿಯ ಭಾವಾರ್ಥವಿಸ್ತಾರವನ್ನು ಬಣ್ಣಿಸಿ ದರೆ, 'ಪ್ರತಿಬಿಂಬ'ವು ಯಥಾರ್ಥವಾಗಿ ಅವರು ತೀಡಿರುವ 'ಬಿಂಬ'ಗಳನ್ನು ಪ್ರಕಟಿಸುವದು. ಶೆಕ್ಸಪಿಯರ್, ಬರ್ನ್ಸ್, ಎಲಿಝಬೆಥ್ ಜೆನಿಂಗ್ಸ್, ರವೀಂದ್ರ ಇವರ ಮೂಲಗಳ ಅನುವಾದಗಳಿವೆ ಈ ಭಾಗದಲ್ಲಿ. ರವೀಂದ್ರರವು ಹೆಚ್ಚು, ಮೂಲ ಮಾತ್ರ ಇಂಗ್ಲೀಷು. ಕನ್ನಡದಲ್ಲಿ ರೂಢವಾಗಿರುವ ಭಾವಾನುವಾದ ಗಳ ಉಚಿತವಾದ ಮಾದರಿಗಳಿವೆ ಇಲ್ಲಿ. 'ಆರಿದ ಕುಲುಮೆ'ಯು ಗಾಂಭೀರ್ಯಕ್ಕೂ, 'ನನಗೆ ನನ್ನ ವಳಿ' ಎಂಬುದು ಲಘುವಿಲಾಸಕ್ಕೂ ಮಾದರಿ ಯಾಗಿವೆ.

'ಸೆಲ-ಮುಗಿಲು' ಸಂಗ್ರಹವು ಕವಿಯ ಹಳೆಯ ಗುಣಗಳ ಜತೆಗೆ ಹೊಸ ಬೆಡಗನ್ನೂ ವೈಗೂಡಿಸಿಕೊಂಡಿದೆ. ಸದ್ಭಾವದ ಶ್ರದ್ಧೆಯು ಇಲ್ಲಿ ಗಟ್ಟಿಕಾಳಾ ಗಿದೆ. ಧಾರವಾಡಕ್ಕೆ ಅವರು ಉಪಕೃತರಿರುವಂತೆ ಧಾರವಾಡವೂ ಅವರಿಗೆ ಕವನಗಳಿಗಾಗಿ ಉಪಕೃತ ಎನ್ನಬಹುದು.

'ಕಾವ್ಯಾಕ್ಷಿ'ಗೆ ನಾನು ಮುನ್ನುಡಿ ಬರೆದಾಗ ಕಣವಿಯುವರ ಪರಿಚಯ

ನಸೆಗರಲಿಲ್ಲ. ಕವಿಯನ್ನು ಅವರ ಗೆಳೆಯರೊಂದಿಗೆ ವಿನಾಯಕ ಗೋಕಾಕರೊಂದಿಗೆ ಆ ಮೇಲೆ ಕಂಡೆ. ಮುಂದೆ ಅವರು ಗುಂಪಿನ ಗೆಳೆಯರಾಗಿದ್ದ ಒಂದು ಮನೆತನಕ್ಕೆ ಅಳಿಯಂದಿರಾದರು. ಕೇಳುವದೇನು ? ಈ ಮದಲಿಂಗನ ಮನೆಯ ಕತೆ, ಮಕ್ಕಳ ಕತೆ—'ಮಧುಚಂದ್ರ' ಕೂಡ ಬಂತು.—ಕನ್ನಡ ನಾಡೂ ಬಲ್ಲದು. ಕವಿ 'ನೆಲ-ಮುಗಿಲು' ಸಂಗ್ರಹದಲ್ಲಿ 'ಅಂಬಿಕಾತನಯದತ್ತ'ರನ್ನು ಹಲವು ಕಡೆಗೆ ನೆನೆಸಿದ್ದಾರೆ. ಅವರನ್ನು ರವೀಂದ್ರರ ಬದಿಗೆ ಕುಳ್ಳಿರಿಸಿದ್ದಾರೆ. 'ದ. ರಾ. ಬೇಂದ್ರೆ'ಯವರಿಗೆ ತಮ್ಮ 'ದೀಪಧಾರಿ' ಕವನ ಸಂಗ್ರಹ ಅರ್ಪಿಸಿದ್ದಾರೆ. 'ಅಹೋ ರೂಪಂ ಅಹೋ ಧ್ವನಿಃ' ಎಂದು ವಿಮರ್ಶಕ ಬಂಧುಗಳು ಈ 'ನಾಲ್ಕುಮೂತಿ'ಗೆ ಸದ್ದು ಮಾಡಿದರೆ ಆ ಪ್ರಾಜ್ಞರಲ್ಲಿ ನಾನು ಕ್ಷಮೆ ಬೇಡುತ್ತೇನೆ.

ಸಾಧನಕೇರಿ, ಧಾರವಾಡ
೧೫-೮-೧೯೬೫

ದ. ರಾ. ಬೇಂದ್ರೆ

ನೆನಕೆಯ ನುಡಿ

"'ಮಣ್ಣಿನ ಮೆರವಣಿಗೆ'ಯ ತರುವಾಯ ಈ ನಾಲ್ಕೈದು ವರ್ಷಗಳಲ್ಲಿ ನಿಮ್ಮ ಹೊಸ ಕವನಸಂಕಲನವೊಂದು ಬರಬೇಕಾಗಿತ್ತಲ್ಲವೆ?" ಎಂದು ಗೆಳೆಯರನೇಕರು ಆಗೀಗ ಕೇಳುತ್ತಿದ್ದರು. 'ನಿಮಗೆಲ್ಲರಿಗೂ ಬೇಕೆನಿಸಿದ್ದರೆ ಇಷ್ಟರಲ್ಲಿಯೇ ಬಂದರೂ ಬಂದೀತು' ಎಂದು ನಾನು ತೇಲಿಸಿ ನುಡಿದಿದ್ದೆ. ಆ ಮಾತಿಗೆ ಇನ್ನೂ ದಿನಗಳೆದಿರಲಿಲ್ಲ. ಮೈಸೂರಿನಿಂದ ಶ್ರೀ ಎಚ್. ಎಂ. ಶಂಕರನಾರಾಯಣರಾವ್ ಅವರು ಧಾರವಾಡಕ್ಕೆ ಬಂದಾಗ ಉಭಯ ಸ್ನೇಹಿತರಾದ ಡಾ. ಕೆ. ಕೃಷ್ಣಮೂರ್ತಿಯವರ ಜೊತೆಯಲ್ಲಿ ನನ್ನ ಬಳಿಗೆ ಬಂದು ತಮ್ಮ 'ಕವಿಕಾವ್ಯಮಾಲೆ'ಯಲ್ಲಿ ನನ್ನ ಹೊಸ ಕವನಸಂಗ್ರಹವೊಂದನ್ನು ಸೇರಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ನಾನು ಗೌರವಪೂರ್ವಕವಾಗಿ ಒಪ್ಪಿಕೊಂಡೆ. ಇದರಿಂದ ಸಂತೋಷಗೊಂಡ ಸನ್ಮಿತ್ರ ಗುರುಲಿಂಗ ಕಾಪಸೆಯವರು ನನ್ನ 'ಮಣ್ಣಿನ ಮೆರವಣಿಗೆ'ಯ ಹಿಂದು-ಮುಂದಿನ ಕವಿತೆಗಳನ್ನು ಒಂದೆಡೆಗೆ ಕೂಡಿಸಿ ಅಚ್ಚಿಗೆ ಅಣಿಗೊಳಿಸಿದರು. ಮುಂಬಯಿಯ ಚಿತ್ರಕಲಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ನನ್ನ ಸೋದರಳಿಯ ಚಿ. ಶಂಕರನು 'ನೆಲ-ಮುಗಿಲಿ'ನ ಮುಖಪುಟವನ್ನು ಸುಟಿಯಾಗಿ ರೇಖಿಸಿಕೊಟ್ಟನು. ದಕ್ಷತೆಗೆ ಹೆಸರಾದ ವೆಸ್ಲಿ ಪ್ರೆಸ್ಸಿನವರು ಮುದ್ರಣ ಕಾರ್ಯವನ್ನು ಕೈಗೊಂಡರು—ಹೀಗೆ ಒಂದರಿಂದ ಒಂದು ಕೂಡಿ ಬಂದು 'ನೆಲ-ಮುಗಿಲು' ಆಕಾರ ತಳೆಯಿತು. ಇದಕ್ಕೆ ನೆರವಾದ ಬಂಧು-ಮಿತ್ರ ಪರಿವಾರಕ್ಕೆಲ್ಲ ನನ್ನ ಹಾರ್ದಿಕ ಕೃತಜ್ಞತೆಗಳು.

ನನ್ನ ಮೊದಲ ಕವನ ಸಂಗ್ರಹ 'ಕಾವ್ಯಕ್ಷಿ'ಗೆ ಮುನ್ನುಡಿ ಬರೆದು ಹರಸಿದ ಶ್ರೀ ಬೇಂದ್ರೆಯವರು ಆ ಮೇಲಿನ ನನ್ನ ಕಾವ್ಯರಚನೆಯಲ್ಲಿಯೂ ವಿಶೇಷ ಆಸ್ಥೆ ತಳೆದ ಹಿರಿಯರು. ಈ ಸಂಗ್ರಹಕ್ಕೂ ನಾಲ್ಕು ಮಾತು ಬರೆಯಬೇಕು ಎಂದು ಅಪೇಕ್ಷಿಸಿದಾಗ ತಕ್ಷಣ 'ಆಗಬಹುದು' ಎಂದು ಆಶ್ವಾಸನೆ ನೀಡಿ, ಅತ್ಯಂತ ಆತ್ಮೀಯತೆಯಿಂದ ಅದನ್ನು ಈಡೇರಿಸಿಕೊಟ್ಟಿದ್ದಾರೆ. ಪ್ರಸ್ತುತ ಕಾವ್ಯವನ್ನು ಕುರಿತು ಹೇಳಿರುವ ಮಾತುಗಳ ಜೊತೆಗೆ ಉತ್ತರ ಕರ್ನಾಟಕದ ಕಾವ್ಯಸ್ಫೂರ್ತಿಯ ಸೆಲೆ-ನೆಲೆಗಳ ಬಗ್ಗೆ ಇಲ್ಲಿ ಮೂಡಿಸಿರುವ ಅವರ ಸ್ಮೃತಿಗಳು ಅಮೌಲ್ಯವಾಗಿವೆ. ಅವರ ನಿರಂತರವಾದ ಸಹೃದಯತೆಗೆ ಅನಿರಂತವೂ ಋಣಿಯಾಗಿದ್ದೇನೆ.

ನನ್ನ ನಿತ್ಯದ ಉದ್ಯೋಗದಲ್ಲಿ ಕಾವ್ಯೋದ್ಯೋಗಕ್ಕೆ ದೊರೆಯುವ ಸಮಯ ಅಲ್ಪವಾದರೂ ಅದಕ್ಕೆ ಅನುವು ದೊರಕಿಸಿಕೊಟ್ಟು ಪ್ರೋತ್ಸಾಹ ನೀಡು ತ್ತಿರುವ, ಸ್ವತಃ ಸಾಹಿತ್ಯ-ಸಂಸ್ಕೃತಿಯ ಅಭಿಮಾನಿಗಳಾದ, ಕರ್ನಾಟಕ ವಿಶ್ವ ವಿದ್ಯಾಲಯದ ಉಪಕುಲಪತಿ ಡಾ. ದಾ. ಚಿಂ. ಪಾವಟೆಯವರಿಗೂ, ರಜಿ ಸ್ಟ್ರಾರರಾದ ಶ್ರೀ ಸದಾಶಿವ ಒಡೆಯರ ಅವರಿಗೂ ನನ್ನ ಧನ್ಯವಾದಗಳನ್ನರ್ಪಿ ಸುತ್ತೇನೆ.

ಕವಿತೆ ಬರೆದಾಗೆಲ್ಲ ಅದರ ಮೊದಲ ಪಾಠವನ್ನು ನನ್ನಿಂದ ಒಪ್ಪಿಸಿಕೊಳ್ಳುವ, ಓದಿ, ಹಾಡಿ ಸಂತೋಷಗೊಳ್ಳುವ, ಹಿಡಿಸದಿದ್ದರೆ ಹಾಗೆಂದು ಹೇಳಿಬಿಡುವ ಸಹಧರ್ಮಿಣಿ ಶಾಂತಾದೇವಿಯ ಉಪಕಾರವನ್ನು ಇಲ್ಲಿ ನೆನೆಯದಿರಲಾರೆ.

ಇಂಗ್ಲೀಷಿನಿಂದ ಅನುವಾದಿಸಿದ ರವೀಂದ್ರನಾಥ ಟಾಗೋರ ಅವರ ಕವಿತೆ ಗಳನ್ನು ಈ ಸಂಗ್ರಹದಲ್ಲಿ ಸೇರಿಸಲು ಅನುಮತಿಯಿತ್ತ ಮ್ಯಾಕ್ಮಿಲನ್ ಪ್ರಕಾಶನದವರಿಗೆ (ಲಂಡನ್) ನನ್ನ ಕೃತಜ್ಞತೆ ಸಲ್ಲಬೇಕು.

ಇಲ್ಲಿಯ ಕೆಲ ಕವಿತೆಗಳನ್ನು ಈ ಮೊದಲು ಪ್ರಕಟಿಸಿ ರಸಿಕರಿಗೆ ರುಚಿ ತೋರಿಸಿದ ಪತ್ರಿಕಾ ಸಂಪಾದಕರಿಗೂ, ಆಕಾಶವಾಣಿಯ ಮೂಲಕ ಕೇಳಿಸಿದ ಅದರ ಅಧಿಕಾರಿಗಳಿಗೂ ನಾನು ಉಪಕೃತ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೦-೮-೧೯೬೫

ಚೆನ್ನವೀರ ಕಣವಿ

ಪರಿವಿಡಿ

ಪ್ರೇರಣೆ ಪುಟ

೧. ದೀಪಮಾಲೆಯ ಕಂಬ ೩
೨. ರಂಜನಾ ೫
೩. ಮೊದಲ ಮಳೆ ೭
೪. ಚಿಗುರಿತು ಈ ಹುಲುಗಲ ೯
೫. ಗಗನದಿ ಸಾಗಿವೆ ೧೦
೬. ಧಾರವಾಡದಲ್ಲಿ ಮಳೆಗಾಲ ೧೧
೭. ನೀರು ಹರಿದಿದೆ ನಿರಾತಂಕ ೧೪
೮. ಅಂತೂ ಕೊನೆಗೆ ಬಂತು ಮಳೆ ೧೬
೯. ಹೊಸ ಬಾಳಿನ ಯೋಜನೆ ೧೮
೧೦. ಭಾವಕೇಂದ್ರ ೨೨
೧೧. ಯುಗ ಯುಗದ ಹಾಡು ೨೪
೧೨. ಕಾಲಪುರುಷನಲ್ಲಿ ಕವಿಗಳ ಕೋರಿಕೆ ೨೬
೧೩. ಜಗದೇಕಮಲ್ಲ ೨೮
೧೪. ಕಾಲ ನಿಲ್ಲುವುದಿಲ್ಲ ೩೦
೧೫. ಪುಷ್ಪಾಂಜಲಿ ೩೪
೧೬. ಸಮಾಧಿ ದರ್ಶನ ೩೭
೧೭. ಕೃಷ್ಣಾವತಾರ ೩೯
೧೮. ವಿಶ್ವಗಾನದ ಬೆಳಕು ೪೧
೧೯. ರಾಷ್ಟ್ರದ ಕರೆ ೪೫
೨೦. ಇಂದೆ ಸೀಮೋಲ್ಲಂಘನ ೪೭
೨೧. ಭೂವಿ-ತೂಕ ೪೯
೨೨. ನೆಹರು : ಶ್ರದ್ಧಾಂಜಲಿ ೫೦
೨೩. ಭಾರತ ಸುಪುತ್ರನ ಕೊನೆಯ ಬಯಕೆ ೫೨

ಪ್ರತಿಮೆ

೨೪. ನೆಲ-ಮುಗಿಲು ೫೭
೨೫. ವರ್ತುಳ ೫೮

ಪುಟ

೨೬. ಪ್ರಣಯ-ಪ್ರೀತಿ ೫೯
೨೭. ದಾಹ ೬೦
೨೮. ಉಪ್ಪು ನೀರು ೬೧
೨೯. ದೀಪಾವಳಿ ೬೨
೩೦. ಕತ್ತಲಿ-ಬೆಳಕು ೬೩
೩೧. ರಾತ್ರಿ ೬೪
೩೨. ಕಣ್ಣಿರುವಷ್ಟು ನೋಟ ೬೫
೩೩. ಏನಾಗಬೇಕಿಹುದೊ ೬೬
೩೪. ಹಂಸ-ಕ್ಷೀರ ೬೭
೩೫. ಕಾಣಿಕೆ ೬೮
೩೬. ಅರುವತ್ತರ ಐಸಿರಿ ೬೯
೩೭. ವಿದ್ಯಾಭವನ ೭೦
೩೮. 'ವಿದ್ಯಾಭವನ'ದ ಗೋಪುರದಿಂದ ೭೧
೩೯. ಬಿಸಮಿಲ್ಲಾರ ಶಹನಾಯಿಯನ್ನು ಕೇಳಿ ೭೨
೪೦. ಶತಾಯುಷಿ ವಿಶ್ವೇಶ್ವರಯ್ಯನವರು ೭೩
೪೧. ಉತ್ತಂಗಿಯವರನ್ನು ನೆನೆದು ೭೪
೪೨. ನವಿಸು : ಗೋವಿಂದ ಪೈ ೭೫
೪೩. ದ.ಬಾ.ಕು ಸ್ಮೃತಿ ೭೬
೪೪. ದಿವಂಗತ ಹಳಕಟ್ಟಿಯವರು ೭೭

ಪ್ರತಿಬಿಂಬ

೪೫. ಮುಕ್ಕಿವೊಗೆಯುವೆ ಕಾಲ ! ೮೧
೪೬. ಅಮೃತಶಿಲೆಯಲ್ಲ ೮೨
೪೭. ಒಡಲ ನರಕದ ಭಾಂಡ ೮೩
೪೮. ನನಗೆ ನನ್ನವಳೆ ೮೪
೪೯. ಇರುವ ಅಲ್ಪದರಲ್ಲಿ ತೃಪ್ತಿಯು ೮೫
೫೦. ಆರಿದ ಕುಲಿಮೆ ೮೬
೫೧. ಯಾರವನು ? ೮೭
೫೨. ಮೋಡಗಳು ನಾವು ೮೮
೫೩. ಮೋಡ ಉಸುರಿತು ೮೯

					ಪುಟ
೫೪. ನೆರಳು-ಬೆಳಕು	....	....	....		೯೦
೫೫. ನನ್ನ ಜೀವನದಿಂದ	....	....	....		೯೧
೫೬. ಬೆಳಕು-ಪರದೆಯ ಹಿಂದೆ	....	....	....		೯೨
೫೭. ನೂರು ವರುಷದ ಮೇಲೆ	....	....	....		೯೩
೫೮. ಮೃತ್ಯುವಿಗೆ	....	....	....		೯೪
೫೯. ಮಿಂಚು-ಹುಳ	....	....	....		೯೫
೬೦. ಹೊಸ ವರುಷ	....	....	....		೯೬

ನೆಲ-ಮುಗಿಲು

‘ ಭೂಮಿಯ ಕಠಿಣವನು
ಆಕಾಶದ ಮೃದುವನು
ತಿಳಿವ ಗಮನವಲ್ಲಿಯೆ ನಿಂದಿತ್ತು.
ಉದಕದೊಳಗೆ ಹುಟ್ಟಿದ ತೃಷ್ಣೆ
ಉದಕವನಱಸಿತ್ತಲ್ಲಾ !
ಒಳಗೆ ಸತ್ತು ಹೊಱಗೆ ಆಡುತ್ತದೆ.
ಗುಹೇಶ್ವರ ಬೆಱಗಾಗಿ ಅಲ್ಲಿಯೆ ನಿಂದನು.’’

—ಅಲ್ಲಮಪ್ರಭು

ಪ್ರೇರಣೆ

ಒಳಜೀವದ ಸುತ್ತುಮುತ್ತು
ಮಿದಿವ ಬದುಕು ಪ್ರೇರಣೆ ;
ಹಬ್ಬಕೆ ಹದಗೊಳ್ಳಲೆಂದು
ಈ ಸಾರಣೆ-ಕಾರಣೆ.

ದೀಪವಾಲೆಯ ಕಂಬ

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು"
ಮಿದುವಾಗಿ ಹದಗೊಂಡು ಹರಿವುದೀ ಹಾಡು !
ಗೂಡಿಂದ ಬಾನಿನಂಗಣಕೇರಿ ಕರೆಯುತಿದೆ,
ಸಹ್ಯಾದ್ರಿ ಶಿಖರದಲಿ ನಿಂತು ನೋಡು :

ಮೂಡಪಡುವಲ ತೆಂಕು ಬಡಗು ಕೊಡಗಿನ ನಾಡು
ಎಲ್ಲ ಒಂದೇ ಯಶದ ರಸದ ಬೀಡು,
ಬಾ ಬಂಧು, ಹತ್ತಿರದಿ ನಿಂದು ಸಂತೋಷದಿಂದ ಹಾಡು
ಶತಮಾನಗಳ ನಾಡ ಗತವೈಭವವ ನೆನೆದು,
ಸಣ್ಣತನ ಸ್ವಾರ್ಥ ಸಂಕೋಚಗಳ ರಾಡಿ ಮಡುವನುಳಿದು,
ನಿನ್ನ ಮನಸಿನ ಮೂಲೆಗಂಟಿರುವ ಸಂಶಯದ ಜೇಡ ಬಲೆ ಹರಿದು,
ಶುಭದ ಹಾರೈಕೆಯಲಿ ನಿನ್ನೆದೆಯು ದಾಳಿಂಬವಾಗಿ ಬಿರಿದು,
ನಾಡಿನಂತಃಕರಣದಲ್ಲಿ ಬೆರೆದು.

ಈಸುದಿನ ಹತ್ತಿರಿದ್ದರು ದೂರ
ಕಂಡರೂ ಕೆಂಡಮುಟ್ಟಿದ ತೆರದಿ ಒಂದು ತರಹ
ಗೋಡೆಗೋಡೆಗೆ ಹಾಯ್ದು ತಡಕಾಡುತಿದ್ದವರು
ಈಗ ಒಂದಿದ್ದೇವೆ ಹೊಂಬೆಳಕು ಹರಡಿರುವ
ಹುಲ್ಲುಗಾವಲಕೆ, ಹೂ ಗಾಳಿಗೆ,
ಅಗಲಿ ಕೂಡಿದ್ದೇವೆ ಹೊಸ ಬಾಳಿಗೆ.
ಮೇಲೇರಿದಂತೆ ಕ್ಷಿತಿಜ ವಿಸ್ತಾರಗೊಳ್ಳುವದು, ಬಲ್ಲೆಯ ?
ಅಷ್ಟು ದೂರದ ಮಾತು ಒಲ್ಲೆಯ ?
ಇಲ್ಲೆ ಕಣ್ಣೆದುರು ಅರಳಿದೆ ಸೃಷ್ಟಿ ;
ನೀಲಿ, ಬಿಳಿ, ಹಳದಿ, ಕೆಂಪು, ಕಂಪು ;
ಟುವ್ವಿಡುವ ಕುಕಿಲಿಡುವ ಗಾನದೊಸಪು ;
ವರ್ಣಮಂಡಲ ರಚಿಸಿ ಆಗಸವ ತೊಯ್ಸಿ
ಮಂಜುಹನಿಯಾಗಿಳಿದ ಹಾಡಿಸಿಂಪು,
ಈ ಹಾಡಿಗೆಂದೆ ಶ್ರುತಿ ಮಾಡಿಟ್ಟ ವೀಣೆ—

ಕೃಷ್ಣೆ, ಕಾವೇರಿ, ವರದೆ, ತುಂಗಭದ್ರೆ!
ಜೋಗದಲ್ಲಿಳಿದು ಕಾಮನಬಿಲ್ಲನೊಡಮುರಿದು ಬರೆ ಶರಾವತಿ ಜೇಕಿ-
ಸಮರಾವತಿ,
ಇಲ್ಲಿ ನುಡಿಯುವ, ನಡೆವ, ದುಡಿದು ಪಡೆಯುವ, ಕೊಡುವ
ಇದನುಟ್ಟು ಇದನುಂಡು ಕೊಂಡು ಕೊನೆವ
ಈ ಜನದ ಬದುಕಿನ ಸೊಗಸು ಸಂಸ್ಕೃತಿಯರಳಿ ಪರಿಮಳಿಸಲೆಂದು
ಹೊಸತಿಲಲಿ ಹಚ್ಚಿಟ್ಟ ಹಣತೆ
ಒಳಗು ಹೊರಗೂ ಕೂಡಿ ಬೆಳಗಲೆಂದು.

ಗಡಿಯಾಚೆ ಗಡಿಯೀಚೆ ಒಂದೆ ಕನ್ನಡ ಗುಡಿಯು
ಪೂಜೆಗೊಳ್ಳುವ ತಾಯಿ ಜನಶಂಕರಿ;
ಕಡಲಕರೆ, ಮಲೆನಾಡು, ಬೆಳುವಲ್ಬೆಸಿರಿ ತೆನೆಯು
ಎಲ್ಲ ಹದ ರುಚಿ ಬೆರೆತ ಜೀವ ಲಹರಿ!

ಇಲ್ಲಿ ಕೂಡಲ ಬಾಳು, ಗೊಮ್ಮಟನ ಔನ್ನತ್ಯ
ವೀರ ನಾರಾಯಣನೆ ನುಡಿದ ಕಾವ್ಯ;
ಶಿಲೆಯ ಅಂತಃಪುರದಿ ಕಲೆಯ ಕಿಂಕಿಣಿನಾದ
ಸುಳಿವ ಶಾಸನವಾಗಿ ಮೆರೆದ ಜೀವ!

ಎದ್ದೇಳುತಿದೆ ಮುಂದೆ ದೀಪಮಾಲೆಯ ಕಂಬ
ಉದಯವಾಗಲಿ ಒಳಗೆ ಚೈತ್ಯಬಿಂಬ,
ಒಂದು ದೀಪಕೆ ಲಕ್ಷದೀಪ ಹೊತ್ತಿಸಿ ಹೊಗರಿ
ಬೆಳಗಲಿದೆ ಇನ್ನೇನು ಕಣ್ಣತುಂಬ!

ರಂಜನಾ

ರಂಜನಾ—
ಎಲ್ಲಿ ಕುಳಿತರು ಬಂದು ಕಿವಿಗೆ ಝೇಂಕರಿಸುವುದು
ಮನೆ ತುಂಬ ಹರಿದಾಡಿ ಮರಿದುಂಬಿ ಗುಂಜನ;
ಕಣ್ಣು ನೀಲಾಂಜನ, ಕರಗಿಸಿದ ನಕ್ಷತ್ರ
ಮೂಗು ಹಟಮಾರಿತನಕೊಡೆದ ಮೊಗ್ಗು—
ಗೋಣು ಹೊರಳಿಸಿ ಸೋಗು ಮಾಡಿ ಕುಣಿವೀ ನವಿಲು
ಎತ್ತಿಕೊಂಡರೆ ಮುಗಿಲತನಕ ಹಿಗ್ಗು !

ದಿನದಿನದ ಬೆಳಗು ಹೊಂಗಿರಣದ ಕಿರೀಟ
ನೂರು ಬಣ್ಣದ ಹೂವ ನರುಗಂಪನೊಮ್ಮೆಲೇ ಚಿಮ್ಮಿಸುವ ತೋಟ.
ಇದು ಯಾವ ಹಕ್ಕಿ-ಹಾಡಿನ ಮಧುರ ಸಂಪುಟ?
ಎಲ್ಲ ಸಂತೋಷಕೂ ಕನ್ನಡಿಯ ಹಿಡಿಯುವುದು ಈ ಮುಖದ
ಮುದ್ದು ಮಾಟ.

ಆನಂದ ಬಂದರಿವಳಾಡಿಸುವನು
ಚಂದ್ರ ಬಂದೇ ಸವನೆ ಕಾಡಿಸುವನು
ಮೂವರೂ ಕೂಡಿದರೆ ಮೂರು ಲೋಕಕು ದಾಳಿ
ಯಾವ ದೇವರು ಬಂದು ಬಿಡಿಸುವವನು ?

ಮೂರು ಸಲ ಒಪ್ಪಂದ, ನೂರು ಸಲ ಯುದ್ಧ
ಅವರಿವರ ಸಂಧಾನ ಮೊದಲೇ ನಿಷಿದ್ಧ !
ಪಡುವಣಕೆ ಸಂದ ರವಿ ಮೂಡಣದಿ ಎದ್ದ
ರಂಗ ಭೂಮಿಗೆ ಮತ್ತೆ ರಥ ಕುದುರೆ ಸಿದ್ಧ.

ರಂಜನಾ
ಇವಳ ದೀರ್ಘಸ್ವರದ ನಡುವೆ ಅವರಿಬ್ಬರೂ ಬರಿ ವ್ಯಂಜನ,
ಸೆಡವು ಬಂದರೆ ಸುತ್ತಿ ಬೀಸುವ ಪ್ರಭಂಜನ!
ತಕ್ಷಣವೆ ಕೇಳುವದು ಗುಡುಗು ಮಿಂಚಿನ ತಾನ

ಮರುಚಣದಿ ಮಳೆಬರುವ ಮೇಳಗಾನ,
ಸುತ್ತಿ ಸುಳಿವುದು ಮತ್ತೆ ಮಂದ ಪವನ,
ಮುಗಿಲು ತೆರೆವುದು ತನ್ನ ಕಲೆಯ ಭವನ.
ನೀರಿನೊಳು ಆಡುವವು ಮೂರು ಮೀನ.

ದೇವಲೋಕದ ಸರಕು ಹೊತ್ತು ತಂದಿಹ ಹಡಗು
ಈ ದಡವ ತುಂಬಿರುವದಿದರ ಬೆಡಗು ;
ಕ್ಷಿತಿಜದಂಚಿನವರೆಗೆ ತೆರೆ-ನೊರೆಯ ಕೌತುಕವು
ತೆರೆಯುವದು ದಿನಕೊಂದಮೌಲ್ಯವಸ್ತು.

ಇರುಳ ಮೌನಕೆ ಬೆಳಗು ತೊದಲು ನುಡಿದು,
ಮೂಡ ಪಡುವಣದಲ್ಲಿ ಜೀವ ಒಡನುಡಿದು ;
ಬೆಳಕು-ಬಯಕೆಯ ಬಳ್ಳಿ ನಾಲ್ದೆಸೆಗು ಹಬ್ಬಿ
(ಮರ ಮರವನಾಡಿಸಿವೆ ತರತರದ ಗುಬ್ಬಿ)
ಹೂವ ಸೂಸಿದೆ ಸುತ್ತ ಪಾರಿಜಾತ
ಹಸುಳೆ ನಗೆ, ಹೂ ಬಿಸಿಲು ಓ! ಎಂಥ ಚಿತ್ರ.

ರಂಜನಾ
ರಂಜನಾ
ಕುಹೂ ಕುಹೂ ಕೂಜನ
ವಾತ್ಸಲ್ಯದ ಕೇತನ
ಇಲ್ಲಿ ಬಾ, ಹೆಜ್ಜೆಗಳ ಕುಣಿಸಿ ತೋರಿಸು, ಜಾಣೆ
ನೋಡೋಣ, ಕಾರಂಜಿ ಬೃಂದಾವನ!
ಈ ಸೃಷ್ಟಿ ನೂತನ
ನೀನೆಮ್ಮ ಚೇತನ
ತೃಣಮಪಿ ನ ಚಲತಿ ನಿನ್ನ ವಿನಾ, ನಿನ್ನ ವಿನಾ, ನಿನ್ನ ವಿನಾ.

ಮೊದಲ ಮಳೆ

ಬಿಸಿಲೇರಿತು, ಬಾಯಾರಿತು
   ಹುರುಪಳಿಸಿತು ನೆಲವು,
   ಗುಟುಕರಿಸಿತು ಜಲವು ;
ಬಾನುದ್ದಕು ಧೂಳೆದ್ದಿತು
   ತತ್ತರಿಸಿತು ಬಲವು.

ಮುಚ್ಚಂಜೆಯು ಮೈಚಾಚಿತು,
   ಗರಿಬಿಚ್ಚಿತು ಮೋಡ,
   ಹೊರಬಿದ್ದಿತು ಗೂಢ ;
ಮುಂಗಾರಿನ ಮುಂಗೋಪಕೆ
   ಬಾನೇ ದಿಙ್ಮೂಢ.

ಮಳೆವನಿಗಳ ಖುರಪುಟದಲಿ
   ಮುಗಿಲಂಚನು ಸೀಳಿ
   ಅಗೊ ಮಿಂಚಿನ ದಾಳಿ
ಕಣ್ಮುಚ್ಚಿತು ಕಣ್ ತೆರೆಯಿತು
   ಬಿಗಿದಪ್ಪಿತು ಗಾಳಿ.

ನೆಲ-ಬಾನಿಗೆ ಜಲವೀಣೆಗೆ
   ಪಕ್ಕದೊಳೇ ನಿದ್ದೆ
   ಬೆಳಗಾಯಿತು ಎದ್ದೆ—
ಜಗವೆಲ್ಲವು ಮಿದುಬೆಲ್ಲವು
   ಅಗೊ ಮಲ್ಲಿಗೆ ಮೊಗ್ಗೆ.

ಹಸುರೆಲ್ಲವು ಕುಸುರಾಯಿತು
   ಹೂ ಮುಡಿಯಿತು ಬೇಲಿ
   ತಂಗಾಳಿಗೆ ತೇಲಿ ;
ಸೌಂದರ್ಯವೆ ಮೊಗವೆತ್ತಿತು
   ಮುತ್ತಿಟ್ಟಿತು ನೀಲಿ.

ಒಂದಿರುಳಿನ ಒಡನಾಟದಿ
ನೆಲದಾಳಕೆ ನೀರು
ಚಿಗಿಯಿತು ತಾಯ್‌ಬೇರು
ಇಡಿ ವರುಷದ ಹೊಸಹರುಷಕೆ
ಹೂಗನಸಿನ ತೇರು.

ಚಿಗುರಿತು ಈ ಹುಲುಗಲ

ಚಿಗುರಿತು ಈ ಹುಲುಗಲ--
ಶಿವ-ಪಾರ್ವತಿ ಅಪ್ಪಿದಂತೆ,
ಹೊಸ ಸೃಷ್ಟಿಗೆ ಒಪ್ಪಿದಂತೆ,
ಕೊಟ್ಟಮಾತು ತಪ್ಪದಂತೆ
ಚಿಗುರಿತು ಈ ಹುಲುಗಲ !

ಯಾ ವಿಮಾನದಿಂದ ಬಂದು ಇಳಿದನೇನೊ ಚೈತ್ರ
ಬೇರಿನಿಂದ ತುದಿಯವರೆಗು ಮೂಕ ತಂತಿ ಮಿಡಿತ.
ಒಂದು ಇರುಳು, ಒಂದು ಬೆಳಗು, ಒಂದು ಸಂಜೆ ಕಳೆಯಿತು
ಹೇಗೊ ಒಂದು ಸಸುಕಿನಲ್ಲಿ ಇದರ ಕನಸು ಫಲಿಸಿತು

ಚಿಗುರಿ ಚಿಗುರಿ ಚಿಗುರಿ ಎದೆಯ ರಸವನೆಲ್ಲ ಚಿಮ್ಮಿತು,
ಬೆಳಗು, ಬೈಗು ತೊಳಗೆ ತನ್ನ ಅಂಗೈಯಲಿ ಕುಣಿಸಿತು ;
ಹಸುರು ತೊಂಗಲಲ್ಲಿ ನೆಲವ ತಂಪಾಗಿಸಿ ಬಾಗಿತು,
ಹೂವು-ಮುಳ್ಳು ಹಾದಿಯಲ್ಲಿ 'ಶುಭಕೃತು'ವು ಸಾಗಿತು.

ಅದೇ ರಸ್ತೆ, ಅದೇ ಬಸ್ಸು, ಅದೇ ಧೂಳು ಇಂದಿಗು
ಅದೇ ಕೆರೆಯ ರಾಡಿನೀರು ಹಿತವಾಗಿದೆ ಮಂದೆಗು.
ಉರಿಯುತಿರುವ ಬಿಸಿಲಿನಲ್ಲಿ ತಣ್ಣಗಿಹುದು ಹುಲುಗಲ
ಮೈಯ ತುಂಬ ಹೂವಬಿಟ್ಟು ಕಾಯುತಿಹುದು ಹಂಬಲ.

ಗಾಳಿಯಲ್ಲಿ ಗಿಲಕು ಗಿಲಕು ಕಾಯಿಯಲ್ಲಿ ಬೀಜವು
'ಸಂಭವಾಮಿ ಯುಗೇ ಯುಗೇ' ಒಳಗಿನಮಲ ತೇಜವು
ಈ ಮಣ್ಣಿನ ಮರೆಯೊಳೆಂಥ ಜೀವಸ್ಫೂರ್ತಿಯಡಗಿದೆ
ಇದರ ಒಂದು ಕಣ ಕಣವೂ ಹೊಸಸೃಷ್ಟಿಗೆ ತೊಡಗಿದೆ.

ಗಗನದಿ ಸಾಗಿವೆ

ಗಗನದಿ ಸಾಗಿವೆ, ಬಾಗಿವೆ ಮೋಡ
    ಹೋಗಿವೆ ನೀರಸು ಸುರಿದು;
ಬರುವವು, ಬಂದೇ ಬರುವವು ನೋಡ
    ತುಂಬಿಸಿ ತುಳುಕಿಸಿ ಹರಿದು.

ಇಳೆಗೂ ಬಾನಿಗು ಮಳೆ ಜೋಕಾಲಿ-
    ತೂಗಿದೆ, ತಂಗಿದೆ ಚೆಲುವು,
ಹಸುರೇ ಹಬ್ಬಿದೆ, ಹಸುರೇ ತಬ್ಬಿದೆ
    ಹೆಸರಿಗು ಕಾಣದು ನೆಲವು.

ನಸುಕೋ, ಸಂಜೆಯೊ, ಮಿಸುಕದು ಬೆಳಕು,
    ತಾಯಿಯ ಮೊಲೆಗಿದೆ ಕೂಸು.
ಇರುಳೇ ಹೊರಳಿತು, ಹಗಲೇ ಮರಳಿತು
    ಚಿಗುರೆಲೆ ಹೂವಿಗೆ ಹಾಸು.

ಬೇಸಗೆ ಬಣ ಬಣ, ಚಳಿಗೋ ಬಣ ಬಣ
    ಶ್ರಾವಣ ತಣ್ಣಗೆ ನಡುವೆ;
ಎಲ್ಲಿದೆ ಬೆಂಕಿ? ಎಲ್ಲಿದೆ ಬೆಳಕು?
    ಬೀಸುವ ಗಾಳಿಗೆ ಬಿಡುವೆ?

ನೀರೇ ಹರಿದಿದೆ, ನೀರೇ ಬೆರೆದಿದೆ
    ನೀರೇ ಕರೆದಿದೆ ಮೊರೆದು;
ಯಾರೆ? ಎಂದರು ನೀರೇ ಬರುವದು
    ಬೆನ್ನಿನ ಹಿಂದೆಯೆ ಸರಿದು.

ಬೆಚ್ಚಗೆ ಒಳಗೆ, ಹಚ್ಚಗೆ ಹೊರಗೆ
    ಹುಚ್ಚನು ಬಿಡಿಸಿದೆ ಮಳೆಯು,
ಎಚ್ಚರು ಎಚ್ಚರು ಎನ್ನುತ ಹರಿದಿದೆ
    ತುಂಬಿದ ಬಾಳಿನ ಹೊಳೆಯು.

ಧಾರವಾಡದಲ್ಲಿ ಮಳೆಗಾಲ

ಏನಿದೀ ಹಸಿಹಸಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು !
ಗುಡ್ಡ ಗುಡ್ಡಕೆ ಗೂಡು ಬಡಿಯುತ ಬೇರೆ ಸುಗ್ಗಿಯ ಬಗೆವುದು.
ಸೆಳಸೆಳಕು ಬೆಳೆ ಕೊಯಿದರೂ ಆ ಮೋಡದೊಕ್ಕಲು ತಂಗದು
ಬಾನ ಮೇಟಿಗೆ ಸೋನೆ ತೂರುತ ರಾಶಿಮಾಡದೆ ಹಿಂಗದು.

ಏನು ಬೆಳ್ಳಗೆ ಎಷ್ಟು ತೆಳ್ಳಗೆ ಮಳೆಯ ಮಸ್ಲಿನ್ ಪರದೆಯು !
ಒಳಗೆ ಸುಮ್ಮನೆ ಕುಳಿತು ನೋಡುವಳಾರು ಹೇಳಾ ಮುಗುದೆಯು ?
ಹೂ ಬಿಸಿಲ ಕರವಸ್ತ್ರದಲಿ ತರತರದ ಹೆಣಿಕೆಯ ನಕ್ಷೆಯು
ದೂರ ಹೋದವರಿಂದು ಬರುವರೆ, ಎಂದು ಬರುವ ನಿರೀಕ್ಷೆಯು ?

ನೋಡು, ಮೋಡದ ಬಸ್ಸು ಭರ ಭರ ತುಂಬಿಕೊಂಡೇ ಸಾಗಿವೆ
ಯಾವ ಗಿರಿ ಶಿಖರದಲಿ ಜಾತ್ರೆಯೊ, ಏಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕೆ ಬಂದರು
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

ಏನು ಕಳಕೊಂಡಿರುವೆ ಗಾಳಿಯೆ ಏಕೆ ಈ ಪರಿ ಹುಡುಕುವೆ ?
ಕಿಡಕಿ ಬಾಗಿಲು ಮುಚ್ಚಿರಲು ಕಿರು ಬಿರುಕಿನಲಿ ಬಿಸುಸುಯ್ಯುವೆ.
ಆ ಹಿಮಾಲಯದಿಂದ ನಿನ್ನನು ಬೀಸಿ ಒಗೆದರೆ ಇಲ್ಲಿಗೆ ?
ಸಪ್ತಸಾಗರ ಸುತ್ತಿ ಬಂದೆಯು, ಮತ್ತೆ ಹೋಗುವದೆಲ್ಲಿಗೆ !

ಮೋಡ ನೂತೇ ನೂಲುವದು ಬಿಳಿ ದಾರ ಧಾರಾಕಾರದಿ
ಗುಡ್ಡ ಮರಡಿಗೆ ಸುತ್ತಿ ಕುಕ್ಕಡಿ ಮಾಡಿ ತುಂಬಿದೆ ಕೊಳ್ಳದಿ,
ಹಳ್ಳ–ಹೊಳೆ ಮಗ್ಗದಲಿ ನೇಯುತ ಹೊರಗೆ ಕಳಿಸಿದೆ ಮಾಲನು
ಗದ್ದೆ ಹೊಲ ತೋಟಕ್ಕೆ ಹೊಚ್ಚಿದೆ ಕಂಪು ಖಾದಿಯ ಶಾಲನು.

ಹಗಲು ಇರುಳೂ ಕೆಲಸವೇನಿದೆ ಮಳೆಗೆ ?—ಬಂದೇ ಬರುವದು,
ನಡುವೆ ಚಕ್ಕನೆ ಹಸುರ ಮಧ್ಯಕೆ ಸೂರ್ಯ ಸರ್ಚ್‌ಲೈಟ್ ಕೆಡವಲು

ಹಸುಮನೆದೆಯೊಳು ರಾಮ ಸೀತೆಯರಂತೆ ಕಣ್ಣಿಗೆ ಹೊಳೆವುದು.
ಮರುಜಣವೆ ಆಕಾಶವೆಲ್ಲವು ಹರಿದು ಜಿಡ್ಡೋಲು ಸುರಿವುದು.

ಕಾರಹುಣ್ಣಿವೆ ಕರಿ ಹರಿದು ಮಣ್ಣೆತ್ತು ನೀರನು ಕುಡಿದವು.
ಬಂತು ಪಂಚಮಿ ಬೋಲಬಗರಿಗೆ, ಹೆಣ್ಣುತವರಿಗೆ ಮಿಡಿದವು.
‘ಅರಳು-ಮರಳಿ’ನ ಕವಿಯು ಕರೆದನು ‘ಬಾರೊ ಸಾಧನಕೇರಿಗೆ’
ಬಂತು ಶ್ರಾವಣ ಬಳಗದೊಂದಿಗೆ ‘ಮಳೆಯು ಎಳೆಯುವ ತೇರಿಗೆ’.

ಗಣಪತಿಯು ಇಲಿಯೇರಿ ಭರ್ಜರಿ ವೇಷದಲ್ಲಿಯೆ ಬಂದನು
ಕರಿಕೆ ಪತ್ರಿಯ ಪೂಜೆ ಸಂದಿತು, ಕಡಬು ಹೋಳಿಗೆ ತಿಂದನು.
ಘಟಸ್ಥಾಪನೆಯಾಯ್ತು; ಮೋಡದ ಕೊಡವು ಬುಡಮೇಲಾಯಿತು.
ಸೀಗೆ ಹುಣ್ಣಿವೆಗಾ ಮಸಾರಿಯು ಹಸುರು ಪುಚ್ಛವ ತೆರೆಯಿತು.

ಗೌರಿ ಹುಣ್ಣಿವೆ ಹಾಲ್ಗುಡಿದು ಬಿಳಿಜೋಳ ಧ್ವಜವನ್ನೆತ್ತಿತು,
ಗೋದಿ ಹೊಡೆಗಚ್ಚಿರಲು ಕಡಲೆಯ ಮಡಿಲು ಹೂಮಿಡಿ ತುಂಬಿತು;
ಕುಸುಬೆ ಹೂಗಳ ಜರದ ಪೀತಾಂಬರವ ಹಬ್ಬಕೆ ಉಟ್ಟಿತು
ಮೊದಲೆ ದೀಪಾವಳಿಗೆ ಒಲುಮೆಯ ದೀಪ ಬೆಳಗಿಸಿಕೊಂಡಿತು.

ಏನು ಈ ಗಿಡ ಬಳ್ಳಿ ಮರಗಳಿಗೆಲ್ಲ ಎಂತಹ ಜಳಕವು!
ಹಸುರು ಹಚ್ಚನೆ ನಿಮಿರಿ ನಿಂತಿಹ ನೆಲಕೆ ಹರ್ಷದ ಪುಳಕವು,
ಎಲ್ಲಿಯಾದರು ಕಸರು ಕಡ್ಡಿಯ ಹುಡುಕಿ ತೆಗೆಯಿರಿ ನೋಡುವ
ಕೆಸರೊ ಬೇಕಾದಷ್ಟು—ನಡೆಯಿರಿ ನಗರ ಸಭೆಗೇ ತೂರುವ.

ಕೊಡೆ ಹಿಡಿದು ಕಾಯ್‌ಪಲ್ಲೆ ತಂದರೆ ಪ್ಯಾಂಟು ಕೂಡಲೆ ಪಚಡಿಯು.
ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪು ಗೋದಿಯ ಕಿಚಡಿಯು.
ಮಳೆಯ ಪಂಜರದಲ್ಲಿ ಸೆರೆಯಾಗಿಹೆವು ಸರ್ಕಸ್ ಹುಲಿಗಳು,
ಅಲ್ಲಿ ಹೊಲ ಗದ್ದೆಯಲಿ ಕೊಪ್ಪೆಯ ಹೊತ್ತು ಗೆಯ್ವರೆ ಕಲಿಗಳು.

ಬೂಟು ಚಪ್ಪಲು ಮಾಡದಲ್ಲಿಯೆ ಬುರುಸುಗಟ್ಟಿವೆ ಥಂಡಿಗೆ—
ಕೋಟು ಸ್ವೆಟರಿನ ಮೇಲೆ ಸ್ಕಾರ್ಫನು ಸುತ್ತಿ ಹೊರಟಿರ ದಂಡಿಗೆ?
ಬಿಸಿಲ ಮೋರೆಯ ಕಾಂಬುದಾಯಿತು ಬರಿಯ ಮನಸಿನ ಮುಂದಿಗೆ
ಜೀವ ಬೇಡಿದೆ ಕಾಫಿ ದೋಸೆಯ ಕರಿದ ಹಪ್ಪಳ ಸಂಡಿಗೆ.

ಒಲೆಯ ಬದಿಯಲಿ ತಲೆಯ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ
ಕನಸಿನಲ್ಲಿಯು ಇಲಿಯು ಬಾರದು, ಹಕ್ಕಿ ಗೂಡೊಳು ತೆಪ್ಪಗೆ.
ಮೈಯುಡುಗಿ ನಡುಗುತ್ತ ದನಕರು ಮೇದು ಬರುತಿವೆ ಒಟ್ಟಿಗೆ
ಮನೆಯ ಒಳಗೇ ಕುಳಿತು ಕಾತರಿಸಿಹೆನು ಗೆಳೆಯರ ಭೆಟ್ಟಿಗೆ.

ಬಿಸೇಃಚುರುಮರಿ ಕಡಲೆ ಮಾರುವ ಮುದುಕಿ ಬಂದರೆ ಕರೆಯಿರಿ
ಮಕ್ಕಳೊಂದಿಗೆ ಕುಳಿತು, ಕುರುಕುರು ತಿಂದು ಹೊರಜಗ ಮರೆಯಿರಿ.
ಅಷ್ಟುಮಿಕ್ಕೀ ಬೇಸರಾದರೆ ರೇಡಿಯೊ ಕಿವಿ ತಿರುವಿರಿ.
ರಾತ್ರಿಯಾಗಲು ಊಟ ತೀರಿಸಿ ಜೊತೆಗೆ ಬೆಚ್ಚಗೆ ಮಲಗಿರಿ.

ನೀರು ಹರಿದಿದೆ ನಿರಾತಂಕ

ಆಗಸದ ಆಣೆಕಟ್ಟನು ಒಡೆದು ನುಗ್ಗಿದವು
ನೂರು ನಾಯ್ಗರಾ ತಡಸಲು!
ಕಣ್ಣು ಕಟ್ಟಿ, ಗಿಮಿಗಿಮಿ ಗಾಣವಾಡಿಸಿತು ಗಾಳಿ
ನೆನೆ ನೆನೆದು ನೆಲವೆ ಕುಪ್ಪರಿಸಿತ್ತು,
ಮುಗಿಲು ಹೊಚ್ಚಿತು ಕಪ್ಪು ಕಂಬಳಿಯ ಕತ್ತಲು,
ರಮ್ . . . ರಮ್ . . . ರಮ್ . . .
ರಣ ಹಲಗೆ ಸದ್ದಿನಲಿ ಜಿದ್ದು ಕಟ್ಟಿದ್ದಿರುವ
ಜಡಿಮಳೆಯ ರುದ್ರಾವತಾರ!

"ಯಾ ಆಪೋ ದಿವ್ಯಾ ಉತ ವಾ ಸ್ರವನ್ತಿ ಖನಿತ್ರಿಮಾ
ಉತ ವಾ ಯಾಃ ಸ್ವಯಂ ಜಾಃ
ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ
ಆಪೋ ದೇವೀರಿಹ ಮಾಮವನ್ತು,"

ನೆಲದ ಆಧಾರದಲಿ ನಿಂತು ಹರಿಯುವ ನೀರು
ನೆಲದೊಡಲ ಕೊರೆದು ಮುಕ್ಕಿತು ಒಂದೆ ತೆಕ್ಕೆಯಲಿ
ಇಕ್ಕೆಲದ ಬಾಳು-ಬದುಕು,
(ಇರಬೇಕು ಎಲ್ಲೊ ಯಾರಿಗೋ ಮೈಸೊಕ್ಕು
ನೆಲದ ಮೇಲಿಷ್ಟೆ ಅಲ್ಲ, ಆಕಾಶದಲ್ಲೂ ಇಹುದು
ನಮಗು ನಿಮಗೂ ಹಕ್ಕು.)
ಅಶ್ವಿನೀ, ಭರಣೀ, ಕೃತ್ತಿಕಾ
ರೋಹಿಣೀ, ಮೃಗಶಿರಾ, ಆದ್ರಾ
ಪುನರ್ವಸು, ಪುಷ್ಯ . . .
ಒಬ್ಬೊಬ್ಬರೂ ನುಡಿದು ಹೋದರಯ್ಯ ಇವರು
ಪ್ರಳಯದ ಭವಿಷ್ಯ!
ಹೋದರೋ ?—ಇವರು ಸಾಪತ್ನೆ, ಮುಗಿಲ
ಹಿಂಡಿದರು ಹನಿ ಹೊರಡದಂತೆ—
ಕೆರೆ, ಬಾವಿ, ಹಳ್ಳ, ಹೊಳೆ ಒತ್ತಿ, ಬೆನ್ನಿಗೆ ಹೊಟ್ಟೆ ಹತ್ತಿ

ನೆಲವೆದ್ದು ಬಡಿಯುವಂತೆ!
ಕಾರ ಮಳೆಯೆ, ಕಪ್ಪತ ಮಳೆಯೆ!
ಸುರಿಮಳೆಯೆ! ಸುರಿಮಳೆಯೆ!
ಬಂದರೋ—ಈಗ ಬಂದಂತೆ ದಂಡೆತ್ತಿ, ಇದ್ದು—
ಬಿದ್ದುದನೆಲ್ಲ ಕೊಚ್ಚಿಕೊಂಡೊಯ್ಯುವರು
ತುಂಬುವದು ಕಡಲಿನೊಡಲು.

ಆಕಾಶ, ಪಾತಾಳ—ಎರಡರಲ್ಲೂ ಇಲ್ಲ ತಾಳಮೇಳ.
ಭೂಗೋಳಕ್ಕೆ ಬೆನ್ನು ಹತ್ತಿಹುದು ಬೇತಾಳ—ಆದರೂ
ತಪ್ಪುವಂತಿಲ್ಲ ಕುರುಕ್ಷೇತ್ರದಲಿ ಕುಂಭಮೇಳ.

ಒಮ್ಮೊಮ್ಮೆ—ಮನಸು ತಿಳಿದಾಗೆಲ್ಲ
ನೂರು ಝರಿ ತೊರೆಗಳಲಿ ಬಳುಕಿ ಕಚಕುಳಿಯಿಟ್ಟು
ಹಸುರ ನಗಿಸುತ, ಗದ್ದೆ ಹೊಲಗಳಲಿ ಬಂಗಾರ ಕಳಸವಿಟ್ಟು,
ಆಗಸದ ಗಂಟು ಮೋರೆಯಲಿ ಹೊಂಬಿಸಿಲ ತಂಬು ನಗೆ ಹರಿಸಿ
ಹರಿದಿಹುದು ನೀರು ನೀರೇ ನಿರಾತಂಕ—
ಗಿರಿಶಿಖರದಿಂದ, ನದಿನದಿಯ ಮುಖದಿಂದ
ಮರಳುಗಾಡಿನ ಒಡಲಿನಂತಃಕರಣದಿಂದ—
ನಿಂತದ್ದೆ ನೀರು, ಹರಿದದ್ದೆ ತೀರ್ಥವಾಗಿ.

ನಿಂತಲ್ಲೆ ನಿಲ್ಲುವುದೆ ನೀರು?—ಕೈಚಾಚಿ
ಹರಿಯುವದು, ನೆಲದ ಒಳಸೇರುವದು,
ಕಾದು ಮೇಲೇರುವದು
ದಿಕ್ಕು ದಿಕ್ಕಿಗೆ ಮೋಡ
ಪಕ್ಕ ಬೀಸುವದು.
ಎದುರು ಬಂದುದನಮರಿ ತೆಕ್ಕೆ ಹಾಯುವದು!

ಪೃಥ್ವಿ, ಅಪ್, ತೇಜ, ವಾಯು, ಆಕಾಶ—
ಐದರಾವರಣದಲಿ ತೋರಣವ ಕಟ್ಟಿ
ತೂಗಿರಲು ಮಾನವ ಯಥಾವಕಾಶ,
ನೆರೆಯೇರಿ ನೆರೆಯಿಳಿದು ವರದೆ ಶಾಪವ ತೊರೆದು
ಕೂರಸಿಯ ಕಾರ್ಯ ಪೂರೈಸಿ, ಹರಿದಿಹುದು
ನೀರು ನಿರ್ಮಲ ನಿರಾತಂಕ.

ಹೊಸ ಬಾಳಿನ ಯೋಜನೆ

೧

ಇದು ನೆಲದ ತುಂಡಲ್ಲ
ಇದು ಖಂಡದ ಅಖಂಡ ಜೀವ ಪಿಂಡ.
ಇದರ ಬದುಕಿನ ಮೇರೆ ಭೋರ್ಗರೆವ ಸಾಗರವು
ಜೊಂಡು ಪಾಚಿಯು ಚಿಕ್ಕ ಹೊಂಡವಲ್ಲ.

ವಿಶ್ವದಂಚಿನವರೆಗು ತೇಲಿಬಿಡು ನೌಕೆಗಳ
ಸಪ್ತಸಾಗರಗಳನು ಸುತ್ತಿಬರಲಿ;
ಕಳಿಸಿದರೆ ಕಳಿಸು ಬೆಲೆ ಬಾಳುವಂತಹ ಸರಕು
ಎಲ್ಲ ಬಂದರುಗಳಿಗು ಹಾದು ಬರಲಿ.

ಹಿಮಗಿರಿಗೆ ದಾರಿಯನು ಕೊರೆದು ಏರುವ ವೀರ
ಏರಯ್ಯ ನೂರು ಶಿಖರ-
ಇಳಿದು ಬಾ, ಮತ್ತೆ, ಭಾಗೀರಥಿಯ ತೆರದಲ್ಲಿ
ಆಲ್ಪರಿದು ಹರಿದು ಬೆಂಗಾಡಿನುದ್ದಕು ಸುರಿದು—
ದೂರವಿದೆ ನಮ್ಮ ತೀರ.

ಇಂಚುಪಟ್ಟಿಯ ಹಚ್ಚಿ ನಾಡಿನುದ್ದಗಲಗಳ
ಅಳೆಯುವದು ಬೇಡ ತಮ್ಮ,
ನಡು ನಡುವೆ ಗಡಿ ಕೊರೆದು ಆಡದಿರು 'ಹುಡುತುತು'
ಹೂಡದಿರು ಹೋರಿಗಳ ಸುಮ್ಮ ಸುಮ್ಮ.

ಕಾರ ಹುಣ್ಣಿವೆ ಬರಲಿ, ತೋರಣವ ಕಟ್ಟೋಣ
ಕರಿ ಹರಿದು ಮೆರೆಸೋಣ ಕಹಳೆ ಹಚ್ಚಿ—
ಆವರೆಗು ಈ ಹೊಲದ ಬದುಕು ಹದಗೊಳಿಸೋಣ
ರಂಟೆ ಕುಂಟೆಯ ಹಿಡಿದು ಬೆವರು ಹರಿಸಿ.

ಬಾ ಬಂಧು, ಹೆಗಲು ಕೊಡು, ನಡುದಾರಿಯಲಿ ನಿಂತ
ಈ ರಥವ ಸಾಗಿಸೋಣ.

ವೀಣೆಗೆ ಸಾವಿರ ಕೈಗಳಾದರೂ ಸಾಲದೋ-
'ದಣಿದೆ'ವೆಂದರೆ ಗಾಲಿ ಸಾವಿರ ಮಣ.

ಇದು ನಮ್ಮ ದೇವರ ಜಾತ್ರೆ, ತುಂಬು ಪ್ರಾಣದ ಪಾತ್ರೆ
ಗಂಟೆ ಬಡಿ, ಅಂಗಾರ ಹಣೆಗೆ ಹಚ್ಚಿ
ಹೊರಡು ಪಂಡರಪುರದ ತನಕ ದಿಂಡೀಯಾತ್ರೆ
ಆಸೇತು ಹಿಮಗಿರಿಗೆ ಹಡದಿ ಹಾಸು.

ಏರು ದೇವರಗುಡ್ಡ, ಕೇಳದವನೇ ದಡ್ಡ :
'ಏಳ್ಕೋಟಿಗೇಳ್ಕೋಟಿಗೇಳ್ಕೋಟಿಗೋ'
ಇನ್ನು ಮುನ್ನೂರ್ಕೋಟಿ ಜಾಂಗಟೆಯು ಬಡಿದಿಹವು
ತೆರವಿರುವ ಕಡೆಯಲ್ಲಿ ಬರಮಾಡಿಕೊ.

ಕೊಲ್ಲಾರಿ ಚಕ್ಕಡಿಗಳೆಲ್ಲ 'ನಿನ್ನಾಲ್ಕುಧೋ'
ಏಳು ಕೊಳ್ಳದ ತಾಯಿ ಎಲ್ಲರಮ್ಮ;
ಎಲ್ಲ ಸುಖದುಃಖಗಳ ಹಡಲಿಗೆಯ ಹೊತ್ತೇವು
ಭಾರತದ ಭಂಡಾರ ಬೆಳೆಯಲಮ್ಮ.

೨

ಕಟ್ಟಬೇಕೀನಾಡ ತೊಟ್ಟು ಹೊಸ ದೀಕ್ಷೆಯನು
ಕಷ್ಟಗಳ ಕಂಕಣವ ಕೈಗೆ ಕಟ್ಟಿ,
ಹಳ್ಳಿ ದಿಳ್ಳಿಯುವರೆಗೆ ನೂರು ದಾರಿಯ ಸಮೆದು
ಎಲ್ಲರಿಗು ಹಂಚೋಣ ಬುತ್ತಿ-ರೊಟ್ಟಿ,

ಹೆಣ್ಣು ಗಂಡೂ ಕೂಸುಕುನ್ನಿ ಮುಪ್ಪಿನ ಮುದುಕ
ಅವರವರ ಪಾಲಿಗಿದೆ ಪಂಚಾಮೃತ;
ಮಂತ್ರಿಗಳ ಮಂತ್ರಕ್ಕೆ ಉದುರುವದೆ ಮಾಂಗಾಯಿ?
ಮಂತ್ರಶಕ್ತಿಯು ದೈವ ಪಂಚಾಯತ.

ತಾವು ಬಂದರದಾರು? ನಾಮಾಂಕಿತವದೇನು?
ಒಡನುಡಿವಿರಾ ಸ್ವಾಮಿ,-ಇವ ಸಾರಥಿ.
'ಹೇಳುತ್ತೇನೆ ಕೇಳು,' 'ಅದೇನಿರುವುದು ಹೇಳು'
ಬೆಳತನಕ ಈ ಭೂಪರೊಂದೆ ರೀತಿ.

ಈಗ ಬೆಳಗಾಯಿತೆ? ಬಣ್ಣ ತೊಳೆಯಲಿ ಸೋಗು
ನಿಮ್ಮ ಕೆಲಸಕೆ ನೀವು ನಡೆಯಿರಣ್ಣ,
ರಾಮನಿಗೆ ಆರಾಮವಿದ್ದುದಾವಾಗಯ್ಯ?
ಭೀಮಾರ್ಜುನರು ಕೂಡ ನೊರಗಿ ನಣ್ಣ.

ಈ ಚರಿತ್ರೆಗೆ ನೂರು ಹೋರಾಟಗಳ ನಂಟು
ಪುಟಪುಟವ ಮೂಸೆಯಲಿ ಪುಟವಿಕ್ಕಲು—
ಅಲ್ಲಿ ಚಿನ್ನದ ಜೊತೆಗೆ ಮಣ್ಣು ಕಲ್ಲಿನ ರಾಶಿ
ಸತ್ತ ಎಮ್ಮೆಗೆ ಹತ್ತು ಸೇರು ಹಾಲು.

ಮಧುರ ಕವಿ ಶಾಸನದ ತಾಯಿ ಹಾಲೆರೆವಂದು
ನಾಡಮಕ್ಕಳ ಕಿವಿಯೊಳೊರೆದಳಿಂತು:
"ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾ-
ಗಾರಮಂ ಮಾಡಿಸೆ"ಂಬಿದೆಯು ಮಾತು.

ಬನ್ನಿ ಯೋಚಿಸಿ ಕುಳಿತು, ಸಂಕೋಚ ಬದಿಗಿರಿಸಿ
ನಾಡಿನೇಳ್ಗೆಗೆ ಹುಡುಕಿ ಹಂಚಿಕೆಯನು;
ಧೂಳಿ ಜಾಡಿಸಿ ಸುರುಳಿ ಬಿಚ್ಚಿದ ನಕಾಶದಲಿ
ಮೂಡಿಸಿರಿ ಹೊಸಬಾಳ ಸಂಚಿಕೆಯನು.

೩

ಹರಿವ ಹೊಳೆಗಳು ನಿಂತು ಕಾಲುವೆಯು ಕೈಚಾಚಿ
ಮೇಳದಲಿ ಕರೆಯುತಿವೆ ಹಾಲು ಜೇನು.
ಏಳಿ ಗುದ್ದಲಿ ಹಿಡಿದು ಬಡತನದ ಯುದ್ಧಕ್ಕೆ
ನೋಡಿ ನಾಚಲಿ ಮೋಡ, ತೆರೆದ ಬಾನು.

ನೆಲದೆಲ್ಲ ಹೊಲಹಸಿರು, ಕಾಯಿ ತೆನೆಗಳ ಕುಸುರು
ದುಡಿವ ಬಡವನ ಹೊಟ್ಟೆ ತಣ್ಣಗಿರಲಿ,
ಗಿರಣಿ ಕಾರ್ಖಾನೆಗಳ ಕರ್ಕಶದ ತರ್ಕಕ್ಕೆ
ಗರತಿ ಹಾಡಿನ ಮಧುರ ಸಂಪರ್ಕವಿರಲಿ.

ಊರು ಕೇರಿಗೆ ನಿಲಿಸಿ ಸಾಲು ದೀಪದ ಕಂಬ
ಶಾಲೆಯಂಗಳ ತುಂಬ ನಗೆಮಲ್ಲಿಗೆ-
ಸೊಂಟದಲಿ ಕೊಡವಿಟ್ಟು ತುಂಟಮಗುವನ್ನೆತ್ತಿ
ಹೊಂಟ ಮುತ್ತೈದೆಯುರ ತುಂಬಿದ ಬಗೆ.

ಎತ್ತು, ಚಕ್ಕಡಿ, ಕಾರು, ಬಸ್ಸು, ಟಾಂಗಾ ರೈಲು
ಬೋಟು, ಹಡಗು, ವಿಮಾನ, ಚಂದ್ರಯಾನ;
ಅಂಚೆ, ಬಾನುಲಿ, ತಂತಿ ಇಡಿ ಪ್ರಪಂಚದ ಹಂತಿ—
ನುರಿಸಿ ಹೊಂದಿಸಿಕೊಳಲಿ ನವಜೀವನ.

ಯಂತ್ರ ನಡೆಯಲಿ, ಜನ ಸ್ವತಂತ್ರ ಬುದ್ಧಿಯದಿರಲಿ
ಪಂಚ ವರ್ಷದ ಹೊಸತು ಹಂಚಿಕೆಯಲಿ.
ಮಂತ್ರ ಮಾಟಗಳಿಂದ ಮಾವು ಕಾಯಾಗುವದೆ?
ನೀರು, ಗೊಬ್ಬರ, ಗಾಳಿ ಹೀರಿಕೊಳಲಿ.

ಎಲ್ಲು ಮಿನುಗುವ ತಾರೆ, ಕಲ್ಲುಕಬ್ಬಿಣ ಗಾರೆ
ಕಣ್ಣು ತುಂಬುವ ಹೋರೆ ಬಾನಂಚಿಗೆ,
ಅಜ್ಜ ಬಿತ್ತಿದ ಬೀಜ ಮೊಳಕೆಗಂಡಿವೆ ಈಗ
ಕಸ ಕೀಟಗಳ ಕಿತ್ತು ಗುಡಿಸಿ ಹೊರಗೆ.

ಹೆಜ್ಜೆ ಹೆಜ್ಜೆಗೆ ನಿಧಿಯ ಕೊಪ್ಪರಿಗೆ ಕಾದಿಹುದು
'ಎತ್ತೊ ಕತ್ತೋ' ಎಂದು ಕೂಗಿಕೊಂಡು,
ಎಡವಿ ಬೀಳುವದೊಂದೆ, ಹಿಡಿದು ಅಗೆದವರಿಲ್ಲ
ನಡು ಕಟ್ಟಿ ನಿಂತವರು ಪಡೆಯಬಹುದು.

ವಿಶ್ವದೀ ವರ್ತುಲದ ಮಧ್ಯಬಿಂದುವಿನಲ್ಲಿ
ಕ್ರಿಸ್ತ, ಕೃಷ್ಣನು, ಬುದ್ಧ, ಬಸವ, ಗಾಂಧಿ—
ನೂರು ತೇಜದ ಗೋಲ ತಿರುಗುತಿವೆ ಪರಿಘದಲಿ
ಊರುಗೋಲಿಗೆ ಸಾಕ್ಷಿ ನಕ್ಷತ್ರವೀಧಿ.

ಕೂಡಿ ಬಾಳುತ ಕೂಡಿ ಬೆಳೆಯೋಣ ಕಾಂತಿಯಲಿ
ಸೂರ್ಯಪಾನದ ಹಾಗೆ ವೀರ್ಯ ತಳೆದು,
ಸಕಲ ಜೀವದ ಭಾವ ಹಿಗ್ಗಿ ಪರಿಮಳಿಸಿರಲಿ
ಬರುವ ಸುಗ್ಗಿಗೆ ನೂರು ಬೀಜ ಹಿಡಿದು.

ಭಾವಕೇಂದ್ರ

ನೂರು ಹೂಗಳ ಕಂಪು ತೇಲುತಿದೆ ಗಾಳಿಯಲಿ
ಹೀರಿಕೋ ; ಅಲ್ಲಿಳಿದ ಮಳೆಯ ನೀರು
ಇಲ್ಲಿ ಬಾವಿಗೆ ಸೋಸಿ ಬಂದಿಹುದು, ಸೇದಿಕೋ :
ಕಾಣುವುದೆ ಈ ಗಿಡದ ಬುಡದ ಬೇರು ?

ಸುತ್ತು ಭೂಮಿಯ ಸಾರ ಇದರ ಆಹಾರ ; ಹೂ
ಕಾಯಿ, ಹಣ್ಣಿನಲಿ ಬಗೆ ಬಗರು, ತಿಗುರು.
ಬಯಲ ಬಣ್ಣಿಸಿ, ಮುಗಿಲ ಹಣ್ಣಿಸುವ ಈ ಕೊರಡು
ಗಾಲಿಯಾಗಲು ಹೊರಟು ಬಂತು ತೇರು.

ಅವರವರ ತಾಯಿ-ನುಡಿ ಮೊಲೆವಾಲಿನಿಂಗಡಲು
ಬೆಳೆದಾಗ ಬೇರೆಡೆಯ ಧಾನ್ಯದವಸ.
“ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ
ನ ಭವತಿ”—ಸರಸತಿಗೆ ಏಕೆ ವಿರಸ ?

ಎಲ್ಲೆಲ್ಲಿ ಏನು ಕಸುವಿನಲಿ ಬೆಳೆವುದೊ ಬೆಳೆದು
ಆ ಬದುಕು ಹಸಗೊಂಡು ರಸವಾಗಲಿ,
ಹತ್ತು ತರಹದ ಪಲ್ಲೆ ಕೂಡಿಕುದಿಸಿದ ಅಡಿಗೆ
ರುಚಿಯೆಂದು ಹೇಳುವರು ಅಟ್ಟುಣ್ಣಲಿ.

ಹಬ್ಬಿ ಹರಡಿದೆ ತೋಟ ; ಇದೊ ಪುರಾತನ ಬಾವಿ
ನೂರು ಮಡಿಗಳ ತಣಿಸಿ ಹರಿವ ನೀರು.
ಎಂಥ ಬೀಜಕು ಇಲ್ಲಿ ಮೊಳಕೆ ನಾಟುವ ಭಾಗ್ಯ
ಕಾಡಮಿಕ, ನರಿ ನುಸುಳಿ ಆರು-ಪಾರು.

ಕಟ್ಟು ಬೇಲಿಯ ಭದ್ರ, ಮೊಟ್ಟೆಹೊಡೆ ದಿನದಿನವು,
ಒಟ್ಟಿರುವ ಕಸಕಳೆಯ ಕಿತ್ತುಬಿಸುಡು ;
ಹಾಕು ಗೊಬ್ಬರ ಬೆಳೆಗೆ ಕ್ರಿಮಿನಾಶಕವ ತೊಡೆದು
ಎಲ್ಲರನು ಕರೆಕರೆದು ಹಬ್ಬಮಾಡು.

ನಿನ್ನ ತೋಟದಿ ನವಿಲು ಗರಿಗೆದರಿ ಕುಣಿಯುವದು
ತೋಪಿನಲಿ ಕೋಗಿಲೆಯು ಕೂಜಿಸುವದು ;
ನೋಯಿಸದೆ ಅಳಿ ಬಂದು ಹೂವ ರಸ ಹೀರುವದು
ಗಿಳಿ ಹಣ್ಣ ಕದುಕಿ ನುಡಿ ಹದಗೊಡುವದು.

ಮನಮನವು ಮುಸುಕಿನೊಳಗಿನ ದೊಣ್ಣೆ, ಮಾತಿನಲಿ
ಜಾತಿ ಮಲ್ಲಿಗೆ, ಕೃತಿಯು ತೂತು ಮಡಕೆ—
ಇದರಪಶ್ರುತಿ ತಿದ್ದಿ ಅಪರಾಧಿ ಎನಿಸಿದರು—
ತಪವ ಕೆಡಿಸಲು ಸಿದ್ಧ ರತಿ, ಮೇನಕೆ.

ಹರಿದು ಚೆಲ್ಲಾಪಿಲ್ಲಿ ಎದೆಯ ಮುತ್ತಿನ ಸರವು
ದೊರೆಯಲೊಲ್ಲದು ಎಲ್ಲು ಮೊದಲ ಸೂತ್ರ ;
ಕಣ್ಣಿದ್ದವರು ಮುತ್ತು ಹುಡುಕಿ, ಹಸುವಿದ್ದವರು
ಹೊಸ ಎಳೆಯ ಹುರಿಗೊಳಿಸಿ, ನೋಡಿ ಗಾತ್ರ.

ಮಧ್ಯಬಿಂದುವ ಮರೆತು ತಿರುಗದಿರಲೀ ಚಕ್ರ
ಕುರುಡಾಗಿ ಕಂಡಕಡೆ ಉರುಳದಿರಲಿ ;
ಶಿಶುಪಾಲವಧೆಗಿರಲಿ ; ಸೂರ್ಯಾಸ್ತ ಒದಗಿರಲಿ-
ಪಾರ್ಥಪ್ರತಿಜ್ಞೆಗಿದು ಮರುಗದಿರಲಿ.

ಪಂಚಶೀಲದ ಮರೆಗೆ ಹಂಚಿಕೊಳ್ಳುವರುಂಟು
ಹಾಲು ಬಟ್ಟಲವಿಲ್ಲ ಬರಿಯ ಗುಟುಕು.
ಶೀಲವಂತರ ಓಣಿಯಲ್ಲಿ ಕಣ್ಮರೆ ಕೋಳಿ—
ಮಗ್ಗ ಹೂಡುವ ಮುನ್ನ ತೊಡಕು ಬಿಡಿಸು.

ಎಂಟಲ್ಲ, ಹದಿನೆಂಟು ಸ್ಥಾಯಿಭಾವಗಳುಂಟು
ಇದರೊಳಗೆ ; ನೂರೆಂಟು ಉದ್ದೀಪನೆ—
ಸಂಚಾರಿ, ನಿನ್ನ ರಸಸಿದ್ಧಿಯೆಡೆ ಹೆಜ್ಜೆಯಿಡು
ಅನುಭಾವದಂಚಿನಲಿ ಮಿಂಚಿನ ಗೊನೆ.

ಯುಗ ಯುಗದ ಹಾಡು

ಯುಗ ಯುಗಕೂ ಉರುಳುತಿಹುದು
ಜಗದ ರಥದ ಗಾಲಿ,
ಹಗಲು ಇರುಳು ಮರಳಿ ಮಸೆದು
ಸಾಹಸ ಮೈತಾಳಿ.

ಕಾಡು–ನಾಡು, ದೇಶ–ಕೋಶ
ಭಾಷೆ–ಭಾವ ದಾಟಿ,
ಭೂಮಿ–ಬಾನು, ಬೆಂಕಿ–ನೀರು
ಗಾಳಿ, ರಾಟಿ–ಧಾಟಿ.

ನವ ಜನಾಂಗ ಮೂಡಿ, ಮೊಳಗಿ
ಬದುಕು ತಿದ್ದಿ ತೀಡಿವೆ;
ಸೂರ್ಯ, ಚಂದ್ರ, ಚಿಕ್ಕೆ ಕೋಟಿ
ಕಣ್ಣರಳಿಸಿ ನೋಡಿವೆ.

ಊರು–ಕೇರಿ, ಭೂಮಿ–ಸೀಮಿ
ಮೀರಿ ಬೆಳೆದ ಮಾನವ,
ನೂರು ತಾರೆಗಳಲಿ ಹುಡುಕು-
ತಿಹನು ವಿಶ್ವಗಾನವ.

ಸತ್ತು ಮುತ್ತು ಭಯ, ಸಂಶಯ
ಕೊಳ್ಳಿ ದೆವ್ವ ಕುಣಿದಿವೆ;
ಮನ ಮನಗಳ ಮುಳ್ಳುಬೇಲಿ
ಮಮತೆ ದೂರ ತಳ್ಳಿವೆ.

ಯುಗಪುರುಷರ ಜಗುಲಿಗಿರಿಸಿ
ಕೈಯ ತೊಳೆದುಕೊಂಡೆವು.
ಬಯಲಾಟದ ವೇಷ ಕುಣಿದು
ಬೆಳಗು ಬರಲು ದಣಿದೆವು.

ಪ್ರತಿಪದವೂ ಪ್ರಗತಿಗೆಂದು
ಹದವಿಲ್ಲದೆ ಮಿದಿದೆವು ;
ಕುದಿಯಿಲ್ಲದೆ ಎಸರಿಲ್ಲದೆ
ಕಸುಕಿಗೆ ಬಾಯ್ದೆರೆದೆವು.

ನಿನಗೆ ಬೇವು, ನನಗೆ ಬೆಲ್ಲ—
ನವಯುಗಾದಿ ಗಾದೆಯು ;
ಕೂಡಿ, ಕುಟ್ಟಿ ಸವಿಯಲಿಲ್ಲ
ಯುಗ ಯುಗಗಳ ಹಾಡಿದು.

ದೂರ ದೂರ ಬೇರು ಚಾಚಿ
ಟೊಂಗೆ, ಟಿಸಿಲು ಮನುಕುಲ ;
ತಾಯಿ ಬೇರು ಕಾಯಬೇಕು
ಹಣ್ಣಾಗಲಿ ಹಂಬಲ.

ಶುಭಾಶುಭದ ಫಲವ ಹೊತ್ತು
'ಶೋಭನ'ವಿದೊ ಬಂದಿದೆ,
ಇಳುಹಿಕೊಳ್ಳಿ ತಲೆಯ ಭಾರ
ಲಾಭ-ಹಾನಿ ಮುಂದಿದೆ.

ಕಾಲಪುರುಷನಲ್ಲಿ ಕವಿಗಳ ಕೋರಿಕೆ

ಏನಯ್ಯ, ಕಾಲಪುರುಷ
ನಿನ್ನ ಮುಖದರುಶನವನೊಮ್ಮೆ ದಯಪಾಲಿಸಯ್ಯ.
ಕಣ್ತುಂಬ ನೋಡಿ, ನಿನ್ನ ರೂಪವನೊಮ್ಮೆ ಅಚ್ಚೊತ್ತಿಕೊಳ್ಳುವೆವು
ಹಣೆಯ ಪಾದಕೆ ಹಚ್ಚಿ ನಮಿಸುವೆವು
ಸಾಷ್ಟಾಂಗವೆರಗುವೆವು, ಆಯಿತೋ ?

ಈ ಸೃಷ್ಟಿ ಜೊತೆಗೇ ನಿನ್ನ ರಥವೂ ಹೊರಟು ಬಂದಿಹುದು—
(ಉರುಳುತಿದೆ ಕುರುಡು ಚಕ್ರ)
ನಮ್ಮಜ್ಜ ಮುತ್ತಜ್ಜರ ಕೈಗೆ ಕೋಲು ಕೊಟ್ಟು
ಕಣ್ಗೆ ಕನ್ನಡಕ ಹಚ್ಚಿ,
ಬೆನ್ನಿನಲಿ ಹೆಣಭಾರವಿಟ್ಟು
ಈಗ ನಮ್ಮ ಹೆಗಲಿಗೇ ಕೈಹಾಕಿ ನಡೆದಿರುವೆಯಲ್ಲ,
ಏನಯ್ಯ ಸಮಾಚಾರ ?
ಇನ್ನೂ ಎಷ್ಟು ದೂರವಿದೆಯೋ ನಿನ್ನ ಪಾದಗಟ್ಟಿ ?

ನೀನೇನು ತುಳಿದೆಯೋ, ಏನೇನು ಬೆಳೆದೆಯೋ
ಏನೆಲ್ಲ ಕೂಡಿಸಿ ಕಳೆದೆಯೊ
ಯಾರು ಎಲ್ಲ ಲೆಕ್ಕವ ಬರೆದು ಇಟ್ಟವರು ?
ಹೊಳೆವ ನಕ್ಷತ್ರಗಳ ಕಣ್‌ಬೆಳಕಿನಲ್ಲಿ
ನೀನಿಟ್ಟ ಖಾತೆ-ಕಿರ್ದಿಯನೊಮ್ಮೆ ತೆರೆಯಬೇಕು :
ಎಷ್ಟೊ ತಾರಗೆ ಇದ್ದಕಿದ್ದಂತೆ ಆರಿದವು,
ಇನ್ನೆಷ್ಟೊ ತಮ್ಮ ಬೆಳಕನು ಇಳೆಗೆ ಮುಟ್ಟಿಸಲು ಪಣತೊಟ್ಟವು.
ಆಕಾಶಗಂಗೆಯಲಿ ಕಿಕ್ಕಿರಿದು ತಿಕ್ಕಿ ಮುಕ್ಕಿದವು ಕೆಲವು.
ಇಂಥದರಲ್ಲಿ—
ನಮ್ಮ ಕೃತಿಗಳು ನಿನ್ನ ಒರೆಗಲ್ಲಿನಲಿ ನಿಂತು ಬದುಕಬೇಕಂತೆ !
ಎಲ್ಲಾ ವಿಮರ್ಶಕರ ತಲೆ ಮೇಲೆ ಹತ್ತಿ
'ಅತ್ಯತಿಷ್ಠದ್ದಶಾಂಗುಲಂ' ಆಗಿರುವೆಯಂತೆ.
ಬೇಡ ಮಹರಾಯಾ

ನಿನ್ನ ಒರೆಗಲ್ಲನ್ನು ಹೊರಗೆ ತೆಗೆಯಬೇಡ.
'ಕಾಲಪುರುಷಂಗೆ ಗುಣಮಣಮಿಲ್ಲಂಗಡ!'
ಎಂದು ನಮ್ಮಜ್ಜ ಮೊದಲೇ ಹೆದರಿಸಿದ್ದಾನೆ.
ಅದ ಕೇಳಿ ನಮ್ಮೊಡಲೊಳೂ 'ಗುಡುಗುಟ್ಟುಗುಂ ಗಡ'!

ಚೊಕ್ಕ ಬಂಗಾರವೇ ಬೇಕೆಂಬ ಹಟವೇಕೆ ನಿನಗೆ
ಈ ಲೋಕದಲಿ ನಾನಾ ನಮೂನೆ ಲೋಹವಿರುವಾಗ?
ಗಟ್ಟಿ ಕಾಳುಗಳನ್ನೆ ಮುಟ್ಟಿಗೆಯಲ್ಲಿ ಹಿಡಿಯಬೇಕೆಂದೇಕೆ ಚಪಲ
ಎಲ್ಲವೂ ಹೊಟ್ಟೆಗೇ ಹೋಗುವಾಗ?

ಇಗೋ
ನಮ್ಮ ಮನದಂಗಳದಿ ಬೆಳೆದಷ್ಟು ಕವಿತೆಗಳ
'ನಿನ್ನ ಮಡಿಲೊಳಗಿಡಲು ತಂದಿರುವೆವು'—
ತುಂಬಿ ಹರಿಯುವ ಹೊಳೆಯ ನೀರಿನಲಿ
ಇವುಗಳನು ಹಾಯಾಗಿ ತೇಲಿಸಪ್ಪ
ಸ್ವಾಮಿ ನಮ್ಮಪ್ಪ.
ನಮ್ಮ ಕಣ್ಮರೆಯಲ್ಲಿ ಬೇಕಾದ್ದು ಮಾಡಿಕೊ
ನಾವಂತು ಪಾರಾದೆವು.
ಸರಿ, ನೀನಿಷ್ಟು ಮಾಡಿದರೆ, ನಿನ್ನ ಮೇಲೊಂದು
ಪದ್ಯವ ಬರೆದು, ಕನ್ನಡಿ ಕಟ್ಟು ಹಾಕಿ
ತುಂಬು ಸಭೆಯೊಳು ಮಾನಪತ್ರ ಸಲಿಸುವೆವು.
ಇಲ್ಲದಿದ್ದರೆ ವೃಥಾ ತಲೆದಂಡ
ಅಲ್ಲವೆ? ಅದಕಾಗಿ ಆಯುಷ್ಯದುದ್ದಕೂ ಚಿಂತೆ ಬೇಡ.
ಕಾಲಾಯ ತುಭ್ಯಂ ನಮಃ.

ಜಗದೇಕಮಲ್ಲ

ಯಾವುದಕ್ಕೂ ಇವಗೆ ಸಂಪೂರ್ಣ ಸ್ವಾತಂತ್ರ್ಯ—
ಬೇಕಾದಷ್ಟು ಉದ್ದ ನಾಲಗೆಯ ಹರಿಬಿಡಬಲ್ಲ,
ಯಾರೆಷ್ಟು ಒದರಿಕೊಂಡರೂ ಕೇಳಿಸದ ಲಂಬಕರ್ಣ.
ರಸ್ತೆಯಲಿ ಬದಿಗೆ ನಡೆದವರ ಮೇಲೆಯೇ
ಕಾರು ಹಾಯಿಸಬಲ್ಲ;
ಅದಕೆ ಬ್ರೇಕಿಲ್ಲ.
ಸೀದಾರಸ್ತೆ ಇವನೆಂದೂ ಕಂಡುದಿಲ್ಲ.
ಬೇಕಾದವರನೆತ್ತಿ ಮುಗಿಲಿಗೆ ತಲೆಯ ತಾಗಿಸಬಲ್ಲ
ಬೇಡಾದವರನೊತ್ತಿ ಪಾತಾಳಕ್ಕೆ,—
ಪದ್ಮಾಸನವ ಹಾಕಿ ಕೂಡಬಲ್ಲ.

'ಜನತೆ ಜನತಾ' ಎಂದು ಬುಡುಬುಡಿಕೆ ಬಾರಿಸುತ
ದೇಶದ ಭವಿಷ್ಯವನು ಸಾರಬಲ್ಲ.
ಓಡುವವರಿಗೆ ಅಡ್ಡಗಾಲು ಹಾಕುತ ಮುಂದೆ
ಮುಗ್ಗರಿಸಿ ಬೀಳುವದ ನೋಡಬಲ್ಲ.
ಬೆನ್ನು ಚಪ್ಪರಿಸಿದರೆ ಬೆಳತನಕ ಬೇಸೂರು ಹಾಡಬಲ್ಲ.
ಎಮ್ಮೆಗಳ ಜೊತೆಯಲ್ಲಿ ರಾಡಿ ನೀರೊಳು
ಸಲೀಸ್ಲು ಈಜಾಡಬಲ್ಲ.
ಕೊಂಬೆ ಕೊಂಬೆಗೆ ಜಿಗಿದು ಚಿಗುರು, ಹೂ, ಕಾಯಿಗಳ
ಕಡಿ ಕಡಿದು ಹಾಕಬಲ್ಲ.
ಗಿಳಿಗಿಂತ ಚೆನ್ನಾಗಿ ಮಾತಾಡಬಲ್ಲ.
ದೊಡ್ಡವರ ಬಾಲಕ್ಕೆ ಜೋತಾಡಬಲ್ಲ.
ಎಲ್ಲಿ ಏನಾದರೂ ಅನರ್ಥ ಸಂಭವಿಸಿದರೆ
ಅದರ ಅಡಿಗಲ್ಲಿವನ ಅಮೃತಹಸ್ತ.
(ಎಲ್ಲದಕ್ಕೂ ಬರಿಯ ಹಲ್ಲುಕಿಸ್ತ.)

ದಿನದ ಇಪ್ಪತ್ನಾಲ್ಕು ತಾಸು ಪಿರಿಪಿರಿ ತಿರುಗಿ
ದೇಶದುದ್ಧಾರಕ್ಕೆ ದೇಹವನು ತೇಯಬಲ್ಲ;

ಮಂದಿ ಹೊಲಗಳ ನುಗ್ಗಿ ಮೇಯಬಲ್ಲ.
ಇವನಿಲ್ಲದೆಯೆ ಯಾವ ಸಭೆ ಸಮಾರಂಭಕ್ಕು
ಶೋಭೆಯಿಲ್ಲ.
ಇಲ್ಲ, ಪುರಸೊತ್ತಿಲ್ಲ,
ಪಂಚೇತಿಯಿಂದ ಆ ವಿಧಾನಸೌಧದವರೆಗು
ಬಲೆ ಬೀಸಿ, ಬಕನಂತೆ ಕಾಯಬಲ್ಲ.
'ಎಲ್ಲ ಬಲ್ಲವರಿಲ್ಲ'
'ಬಲ್ಲಿದರು ಬಹಳಿಲ್ಲ'
ಏಕಿಲ್ಲ? ಇವನಿಲ್ಲವೇ ನಮ್ಮ ಜಗದೇಕಮಲ್ಲ?
ಕಳಿಸಿರಿವನನು ಮೊದಲು ದೂರದ ಹಿಮಾಲಯಕೆ
ಅಲ್ಲಿಯೇ ಹಿಡಿದಿರಲಿ ಜಯಪತಾಕೆ.

ಕಾಲ ನಿಲ್ಲುವುದಿಲ್ಲ

೧

ಈ ಕಾಲನೆಂಬುವ ಪ್ರಾಣಿ
ಕೈಗೆ ಸಿಕ್ಕರೆ ಚೆನ್ನಾಗಿ ಥಳಿಸಬೇಕೆಂದಿದ್ದೆ ;
ಎಲ್ಲೋ ತಲೆಮರೆಸಿಕೊಂಡು ಓಡಾಡುತಿದ್ದಾನೆ.
ಆಕಾಶದಲ್ಲಿ ಮಿಂಚಿ,
ಭೂಕಂಪದಲ್ಲಿ ಗದಗದ ನಡುಗಿ,
ಜ್ವಾಲಾಮುಖಿಯೊಳಗೆ ಸಿಡಿದು ನುಚ್ಚುನೂರಾಗಿ,
ನದಿನದಿಯ ಗರ್ಭವ ಹೊಕ್ಕು, ಮಹಾಪೂರದಲಿ ಹೊರಬಂದು
ನಮ್ಮೆದೆಯಲ್ಲಿ ತುಡಿವ ತಬಲವಾಗಿದ್ದಾನೆ.
ಹಿಡಿಯಿರೋ ಅವನ.........

ಗಡಿಯಾರದಲ್ಲವನ ಹಿಡಿದು ಗಾಣವಾಡಿಸಲು
ಹೆಣಗಿದ್ದೇವೆ.
ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿದು
ಒದೆಸಿಕೊಂಡಿದ್ದೇವೆ.
ತುಡಿವೆದೆಗೆ ಕಿವಿಗೊಟ್ಟು, ಮಿಡಿವ ನಾಡಿಯ
ಹಿಡಿದು ನೋಡಿದ್ದೇವೆ:
ಒಳಹೊರಗೆ ಉಸಿರು ಆಡುತ್ತಿದೆ ನಿರಾಯಾಸ.
'ಬಯಲು ಆಲಯದೊಳಗೊ? ಆಲಯವು ಬಯಲೊಳಗೊ?'
ಕೊನೆಗೊಮ್ಮೆ ಅವನೇ ಎಲ್ಲ ಬಗೆಹರಿಸುತ್ತಾನೆ,
ಯಾರಿಗೂ ಅವಸರವಿಲ್ಲ ತಾನೆ?

ಈ ಕುದುರೆಯೇರಿ, ಲಗಾಮು ಬಿಗಿ ಹಿಡಿದು
ಸವಾರಿ ಮಾಡುವುದಷ್ಟು ಸುಲಭವಲ್ಲ.
ನಮ್ಮೆದೆಯ ಮೇಲೆಯೇ ಕಾಲಿಟ್ಟು ಓಡಿಹೋಗುವುದ
ನಾವೆಷ್ಟು ಸಲ ಅನುಭವಿಸಿಲ್ಲ?
ಸೆಕಂದು, ಮಿನಿಟು, ತಾಸುಗಳ ಹಾಸುಹೊಕ್ಕಿನಲಿ
ಅಲ್ಲೊಂದು ಇಲ್ಲೊಂದು ಬಣ್ಣದ ನೂಲು

ಬೆತ್ತಲೆ ಬದುಕ ಸುತ್ತಿ ತೋರಿಸುತ್ತಿದೆ ಡೌಲು.
ಹೆಜ್ಜೆಯಿಟ್ಟಲ್ಲೆಲ್ಲ ಜೋಲಿಹಿಡಿದಿದೆ ಮಣ್ಣು
ಧುಮುಕುತಿದೆ ನೀರು,
ಮೈಸುತ್ತಿ ಒಳಹೊಕ್ಕು ನೋಡಿದೆ ಗಾಳಿ,
ಹದ್ದು ಮೀರಿದೆ ಬಂಬಲು—
ಬೆಳಕು–ಕತ್ತಲೆ ಕುಂಡದಲ್ಲಿ ಮುಳುಗೇಳುತಿಹೆವು ದಿನವೊಂದಕ್ಕು
ನಿದ್ದೆ ತಿಳಿದೆದ್ದಾಗ ಭೂಮಿಯಾಕಾಶಕ್ಕೆ ದೊಡ್ಡ ಬಿರುಕು.

೨

ಸದಾ ಅದೇ ಸೂರ್ಯಚಂದ್ರರ ಸುಪರಿಚಿತ ಮೋರೆ,
ನಮ್ಮಂತೆಯೇ ಅವರಿಗೂ ತಿರುಗುವದೊಂದೆ ಹೋರೆ.
ಆದರೂ ಆಗೀಗ ಈಚೆಯ ದಡಕ್ಕು ಹಾಯುವದು ಬೆಳಕಿನ ತೆರೆ.
ಒಡಮುರಿದೆದ್ದು ನಾಲ್ಕೂ ಕಡೆಗೆ ಕೈಚಾಚಿ
ನಿಂತಲ್ಲೆ ಬೇರು ಬಿಟ್ಟಿವೆ ವೃಕ್ಷ.
[ಅಗೆದು ನೋಡಲೆ ಬೇಕೆ?]
ಹರಡಿಕೊಂಡಿದೆ ಹಸಿರು ಸಂಸಾರ
ನಮಗು ಅದಕೂ ನಿತ್ಯ ಹೊಕ್ಕು ಬಳಕೆ.
ಆರು ಋತುಗಳು ಬಂದು ಆರೈಕೆ ಮಾಡುವವು
ಯಾವುದೋ ಹಾರೈಕೆ ಎದೆಯೊಳಿಟ್ಟು;
ತತ್ತಿಯೊಡೆದು ರೆಕ್ಕೆಬಲಿತಾಗ ಹಾರುವವು ಗೂಡುಬಿಟ್ಟು.
ದೂರದಲ್ಲಿಯೆ ಸಾಲು ನಿಂತ ಪರ್ವತ ಶಿಖರ
ಆಗಿಲ್ಲ ಭೂಮಿಗೆ ಭಾರ.
ತೇಲುತಿವೆ ಅಂತರಾಳದಲಿ ನೂರು ಗೋಲ.
ಸೋತು ತಲೆಬಾಗಿಲ್ಲ ಆಕಾಶ,
ಮೂಲೆ ಹಿಡಿದು ತೂಕಡಿಸಿಲ್ಲ ಗಾಳಿ,
ಒಳಗು ಹೊರಗೂ ಹರಿದು ಸ್ವಚ್ಛವಾಗಿದೆ ನೀರು
ಅಣೆಕಟ್ಟೆಗೂ ಕೆಳಗೆ ಆರುಪಾರು.
ಎತ್ತಿನ ಬಂಡಿಯಿಳಿದು, ಬಸ್ಸಿನ ದಾರಿ ಕಾಯ್ದು, ಕಾರಿನಲಿ ತೂರಿ,
ಹಡಗ ಬಿಟ್ಟು ವಿಮಾನದಲಿ ಹಾರಿ
ಗೋಲಗಳ ಮೇಲೆ ದಾಳಿ ಮಾಡಿದ್ದೇವೆ.

ಮೈಕಿಸಲಿ ಕೊಕ್ಕೊಕ್ಕೋ ಕೂಗಿ, ತುರಾಯಿ ಕುಣಿಸಿ
ಬೆಳಗಾಯಿತೆಂದು ಭ್ರಮಿಸಿದ್ದೇವೆ.
ಹೊಸದಾಗಿ ಹೂಡಿದ ಮೂಡಲ ಹೋರಿ ಮುಸುಗರೆದು
ಅಡ್ಡಾದಿಡ್ಡಿ ಜಗ್ಗುತಿದೆ,
ಜೊತೆಗಿರುವ ಸಾದು ಎತ್ತಿನ ಕೂಡ ಕಾದಾಟ.
ಹೌದು, ನಾವೆಲ್ಲ ಹೊಸಬರೆ:
ಅಜ್ಜ, ಮುತ್ತಜ್ಜರಿಗೆ ಮಂಗಳಾರತಿ ಮಾಡಿ
ಕೈಯಲ್ಲಿ ಗಂಟೆ ಹಿಡಿದಿದ್ದೇವೆ.
ನೈವೇದ್ಯಕ್ಕೆ ಪಾಕವೇ ಸಿದ್ಧವಾಗಿಲ್ಲ, ಆಗಲೇ
ಪ್ರಸಾದ ಹಂಚಿದ್ದೇವೆ.
ಎದುರಿಗಿದ್ದದ್ದೆಲ್ಲ ಅದಲು ಬದಲು ಕಂಚೀಬದಲು
ಹುಡುಕುತಿದ್ದೇವೆ ಕಣ್ಮುಚ್ಚಿ: ಇವರ ಬಿಟ್ಟವರಾರು?

೩

ದಿನವು ಬಿಸಿ ಬಿಸಿ ಅನ್ನ ದೇಹಕ್ಕೆ ಹಿತ.
ಮುಂಜಾವದಡಿಗೆ ಸಂಜೆಗಾಗಲೇ ತಂಗೂಳು.
ಹಳಸಿದನ್ನವ ನಾಯಿ ಕೂಡ ಮೂಸುವದಿಲ್ಲ. ಅದೆ
ಅಕ್ಕಿ, ಜೋಳ, ಗೋಧಿಗಳಿಂದ ವಿಧವಿಧದ ಪಕ್ವಾನ್ನ
ಗಮಗಮಿಸುವದು. ಉಪ್ಪು, ಕಾರ, ಹುಳಿ, ಸಿಹಿ
ತಕ್ಕಷ್ಟು. ಬದಲಾವಣೆಯೇ ಬಾಳಿನೊಗ್ಗರಣೆ.
ಬಾಡಿಸಿಕೊಳ್ಳಲೆಂದೆ ಉಪ್ಪಿನಕಾಯಿ.
[ಕದ ತಿನ್ನುವವಗೆ ಹಪ್ಪಳ ಈಡೆ?]
ಮಿತಿಮೀರಿದರೆ ಎಂಥ ಸುಗ್ರಾಸವೂ ಅಜೀರ್ಣ.
ಕುದಿಯುವದು, ಮಿದಿಯುವದು, ಹೊಂದಿ
ಹದಗೊಳ್ಳುವದು: ಬದುಕಿನಲಿ ಎಲ್ಲರಿಗು ತೆರೆದ ದಾರಿ.
ಶ್ರುತಿಗೂಡಿದಾಗ ಹೊಮ್ಮುವದು ಹಾಡಿನ ಲಹರಿ
ಗಾಳಿಯ ಬೆನ್ನಮೇಲೆ ಮೋಡದ ಸವಾರಿ.

ಗುಡುಗಿರಲಿ, ಮಿಂಚಿರಲಿ, ಮುಂಗಾರಿಗಾರು ಕಾತರಿಸಿಲ್ಲ?
ಉರಿವ ಬೇಸಗೆ ಚಿಗುರು ಚಿಣ್ಣರನು ಎತ್ತಿ ಆಡಿಸಿಲ್ಲ?

ಥಂಡಿಯ ಮುಸುಗಿನಲ್ಲು ಬೆಚ್ಚಗೆ ಕನಸು ಕಂಡಿಲ್ಲ ?
ಬೆಂಗಾಡಿನಂಗಾಂಗದಲ್ಲು ತುಂಗಭದ್ರೆಯು ತುಂಬಿ ಹರಿದಿಲ್ಲ ?

ವರ್ತನೆಯ ನರ್ತನಕೆ ಪರಿವರ್ತನೆಯು ಸೊಬಗು.
ಕಂದ, ವೃತ್ತಗಳ ಝುರಿ ತೊರೆಯ ನಡುವೆ
ಹಸುರಿಗೆ ಗದ್ಯದುದ್ಯಾನ ;
ಹದಿನೆಂಟು ಬಣ್ಣನೆಯ ಹುಲ್ಲುಗದ್ದೆಯ ನಡುವೆ
ಚಂಪುವಿನ ತಂಪುಕೊಳ.
ನಿಬ್ಬಣಕೆ ಹೊರಟಂತೆ ಹಾಡುಗಬ್ಬಗಳ ಕೊಲ್ಲಾರಿ ಬಂಡಿ.
ಭಾವ–ಗೀತ ಒಪ್ಪಿದರೆ ಚೆಂದ ವಧೂವರ ಜೋಡಿ.
ಒಲೆ ಹೂಡಿದ ಮೇಲೆ ಅದರ ಬಿಸಿ ತಾಗುವದು
ಕುದ್ದು ಹಣ್ಣಾಗುವದು ನೂರು ಅನುಭವದ ನವ್ಯಪಾಕ.

ಬಗಲಗಸೆ ಅಂಗಿಯಿಂದ ಬುಶ್‌ಕೋಟಿನವರೆಗು
ತೊಟ್ಟು ಕಳಚಿದ್ದೇವೆ.
ಮಾಡಿ ಉಂಡಿದ್ದೇವೆ ನಮನಮಗೆ ಸೇರಿದ ಅಡಿಗೆ.
ಇರಬಹುದು ಇದರಲ್ಲಿ ಕೆಲಭಾಗ ಜೀವನಸತ್ವ ಕಡಮೆ.
ಇದ್ದ ಶಕ್ತಿಯಲಿ ತುಸು ದೂರ ನಡೆದಿದ್ದೇವೆ.
ರೂಢಿಯಾಗಿದೆ ಒಬ್ಬೊಬ್ಬರಿಗು ಒಂದೊಂದು ಬಗೆಯ ನಡಿಗೆ.
ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ.

ಕಾಲ ನಿಲ್ಲುವದಿಲ್ಲ; ನಾವು ಕೂಡುವದಿಲ್ಲ.
ಮಳೆಬಂದರೂ ಕಾಮನಬಿಲ್ಲು ಮೂಡುವದೆಂಬ ನಿಯಮವಿಲ್ಲ.
ಹಗಲಿರುಳ ಗಾಲಿಯಲಿ ಸೋಲು–ಗೆಲವಿನ ಕೀಲು ಭದ್ರ.
ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು
ನಿಂತವರಿಗೂ ಉಂಟು ನೋಡಿ ಸಂತಸ ಪಡುವ ಭಾಗ್ಯ.
ಗೆದ್ದವರಿಗಿದ್ದೆಯಿದೆ ಬೆಳ್ಳಿಯ ಥಾಲು.
ಸೋತವರ ಸೊತ್ತು
ಗೆದ್ದವರನಳೆವ ಜಗದೆಲ್ಲ ಅನುಭವದ ಪಾಲು.

*ಪುಷ್ಪಾಂಜಲಿ

ಸ್ವಾಮಿಯಡಿಗೆ ಶಿರಬಾಗಿ ಬಂದೆವಿದೊ ಎಲ್ಲ ಸೀಮೆಯಿಂದ,
ಅರಿವು-ಮರೆವು ಕಣ್ದೆರೆದು ಕರೆದ ಆ ಪೂರ್ವಸ್ಮರಣೆಯಿಂದ.
ನೀಲದಲ್ಲಿ ತೇಲಾಡೆ ಗಾಳಿಪಟ ಕೃಪಾಸೂತ್ರದಿಂದ
ಕಂಡೆವೇನೊ ನೆಲ-ಜಲದ ಚೆಲುವ ನೀವಿತ್ತ ನೇತ್ರದಿಂದ.

ಎತ್ತರೆತ್ತರಕೆ ಹಾರಿ ಏರಿದರು ಕೋತಿ ಹೊಡೆಯದಂತೆ,
ದಿಕ್ಕು ದಿಕ್ಕುಗಳ ಗಾಳಿ ಜಗ್ಗಿದರು ಬಿಲ್ಲು ಮಣಿಯದಂತೆ,
ನೂರುಸೊಲ್ಲು ಗುಲ್ಲಿನಲು ಎಲ್ಲೊ ಮಿಡಿದಿಹುದು ಏಕನಾದ
ಆ ನಾದ ಹಿಡಿದು ಬಂದೇವು ನಾವು ಕರುಣಿಸಿರಿ ತಮ್ಮ ಪಾದ.

ಶ್ರೀಮದಥಣಿ ಶಿವಯೋಗಿ ಸೇವೆಯಲಿ ಸಮೆದ ಭಾವಶುದ್ಧಿ
ಸಕಲಕೆಲ್ಲ ಶಿವಭಜನೆ, ಜೀವದಾಸೋಹ—ಕಾರ್ಯಸಿದ್ಧಿ.
ಧಾರವಾಡದುತ್ತರದಿ ಬಂದು ಬಿತ್ತರಕೆ ನೋಟ ಹರಿಸಿ
ಎಲ್ಲರನ್ನು ಹತ್ತಿರಕೆ ಕರೆದು ಹರಸಿದಿರಿ ಪರುಷವೆನಿಸಿ.

ಮನವ ನೆನಿಸಿ ಮಡಿಮಾಡಿ ಮತ್ತೆ ಮಾಡಿದಿರಿ ಕಂತಿಭಿಕ್ಷೆ.
ಆಕಾಶವನ್ನೆ ಜೋಳಿಗೆಯ ಮಾಡಿ ಬೇಡುವರೆ ಚಂದ್ರ ಚಿಕ್ಕೆ?
ಬಸವ ಪ್ರಮಥರಾ ಪುರಾತನರು ನೀಡಿರುವ ನೆರಳು-ನಕ್ಷೆ
ಅಲ್ಲೆ ಸಂಜೆ ಮುಂಜಾವಿನಲ್ಲಿ ತಂ ಪ್ರದಕ್ಷಿಣೆಯ ರಕ್ಷೆ.

ಭಕ್ತರಲ್ಲಿ, ನೆರೆ ಮುಕ್ತರಲ್ಲಿ, ಸಲೆ ಪರಿತ್ಯಕ್ತರಲ್ಲು
ಬಂದೆ ಉಕ್ತಿ, ಅವ್ಯಕ್ತ ಭಾವ ತೆರೆದಿಟ್ಟ ಹೃದಯದಲ್ಲು,
ಮುಖವು ಎಲ್ಲಿ? ಬರಿ ಮುಗ್ಧಹಾಸ, ಕಣ್ದೆರೆಯೆ ದುಗ್ಧಸಿಂಧು!
ಸಂಜೆಗಿರಣ ನೆಯ್ದಿರುವ ಕಾವಿ ಆ ಮೇಘಲಿಂಗಕೆಂದು!

---

* ಧಾರವಾಡ ಮುರುಘಾಮಠದ ಲಿಂ. ಮೃತ್ಯುಂಜಯ ಮಹಾಸ್ವಾಮಿಗಳ ೭೦ನೆಯ ವರ್ಧಂತ್ಯುತ್ಸವದ ನಿಮಿತ್ತ.

"ವ್ಯರ್ಥವಲ್ಲ ಶಿವ ಕೊಟ್ಟ ವಸ್ತು ಕಸಬರಿಗಿ ಕಡ್ಡಿ ಕೂಡ.
ಅರ್ತಿಯಿಂದ ಪುಟ ತೆರೆಯಬೇಕು ಅಪನವರ ವಚನ ನೋಡ;
ಮಾವಿನೆಲೆಯ ನೀ ಮಾಡಬಲ್ಲೆಯಾ, ಯಾವ ಬಣ್ಣದಿಂದ?
ನಾನು ನೀನು, ಏನೇನೊ ಮೂಡಿ ಬಂತದೇ ಮಣ್ಣಿನಿಂದ.

"ದುಡಿಯಬೇಕು, ನೆಲ ಕಡಿಯಬೇಕು, ಹೋರಾಡಬೇಕು ಜೀವ
ಪಡೆದು-ಕೊಟ್ಟು ಕೊಂಡಾಡಬೇಕು ಸರ್ವಾಂಗಲಿಂಗ ಜಗವ.
ಕಟಕು ರೊಟ್ಟಿ ಮೆಣಸ್ಹಿಂಡಿ ತಿಂದು ಮೇಲೊಂದು ಗುಟುಕು ನೀರು-
ಕಟೆದ ಹಾಗೆ ಈ ಮೂರ್ತಿ-ಮಾಟ, ಆ ಮೇಲೆ ಗುಡಿಯು, ತೇರು."

ನಿಮ್ಮ ಮಾತು ದಿಟಪುಟವು ಸ್ಫಟಿಕ, ಅದಕಿಲ್ಲ ಬೇರೆ ತಂತ್ರ,
ತಮ್ಮ ಗೀತ ತಾ ಭಕ್ತಿಸ್ತ್ರೋತ ಚಿನ್ಮಯದ ಸುಪ್ರಭಾತ.
ನಂಬಿ ನಚ್ಚಿ ನಮ್ಮೆದೆಯ ಬಿಚ್ಚಿ ದಯಮಾಡಿಸಿದಿರಿ ಬುದ್ಧಿ
ನಿಮ್ಮ ಕರುಣೆ ಕಂಡರಿಸಿತೆಮ್ಮ, ನಾವೇನು ಮಣ್ಣುಮುದ್ದಿ.

ತೆಂಗುಗರಿಯ ಚಾಮರವು, ಸುತ್ತು ಸಂಪಿಗೆಯ ತಂಪುಗಾಳಿ
ಜೆಂಗುಲಾಬಿ, ಮಲ್ಲಿಗೆಯು, ಬಕುಳ, ಸೇವಂತಿ ರಂಗುತಾಳಿ;
ನಡುವೆ ಬೆಳ್ಳಬೆಳಕಾಗಿ ಮಾಗಿ ಶಿವಯೋಗಿ ಕುಲುಕುಲೆಂದು
ನಗುತಲಿಹನು ಆ ಸೂರ್ಯ ಚಂದ್ರ ಸಾಷ್ಟಾಂಗದಲ್ಲಿ ಮಿಂದು.

ಎಲ್ಲಿ ನೋಡಿದರು ಬಿಲ್ವಪತ್ರಿ ಶಿವಕಳೆಯು ಚಿದ್ವಿಭೂತಿ
ಅಷ್ಟಕೋಟಿ ರೋಮಂಗಳೆಲ್ಲ ಶಿವಲಿಂಗವಾದ ರೀತಿ!
ಕೇಳು, ಪ್ರಾರ್ಥನೆಯ ಗಂಟೆ, ಏಳು ಬರಲಿಹುದು ನಮ್ಮ ಸರತಿ
ಜಾತ್ರೆಮುಗಿದು ಶಿವರಾತ್ರಿಯಾಯ್ತು ಶ್ರಾವಣಕೆ ತುಂಬುಭರತಿ.

ನಿಮ್ಮ ಬಯಕೆ ಬಂಗಾರ ಖಣಿಯು ಅಸರಂತ ಗ್ರಂಥಮಾಲೆ
ತೋಡಿದಷ್ಟು ಹೊರಮೂಡಿಬಂತು ಅದು ನಿಮಗೆ ಬಾಲಲೀಲೆ.
ಬೇರೆಯಲ್ಲ, ಶಿವಯೋಗಿ ಪ್ರೇರಣಾಭರಣ ಶರಣಸತಿಗೆ
ಪ್ರಣವರೂಪಕರ್ಪಣವು ಸರ್ವಸಮರಸವು ಲಿಂಗಪತಿಗೆ.

ದೊರೆಯುಬಹುದೆ ದರುಶನವು ದಿವ್ಯಸ್ಪರ್ಶನದ ಜೀವನಾದ ?
ಎರೆದು, ಹೊಚ್ಚಿ ಎದೆ ಹಾಲು ತೊರೆವ ಪಾದೋದಕ ಪ್ರಸಾದ ?
ಇರವಿನಲ್ಲಿ ಆ ತೆರವು ತುಂಬಿ ತೆರೆಯಾಡುವಂತೆ ಕಡಲು
ಅರಿವಿನೊಂದು ಹೊಸ ಬರವಿಗಾಗಿ ಹಾತೊರೆಯುತಿಹುದು ಒಡಲು.

ಹೋದರತ್ತ, ಇದು ಬಂದರಿತ್ತ, ಇದಕೆಲ್ಲಿ ಗಟ್ಟಿ ನೆಲೆಯು ?
ಬುಟ್ಟಿಹೊತ್ತು ಮಾರುವರ ಕರೆದು ಕೇಳಿದರೆ ತುಟ್ಟಿಬೆಲೆಯು !
ಹರಗಿ ಬಿತ್ತಿ ಹಂತಿಯಲಿ ತಿರುಗಿ ನೀ ಸ್ವಂತ ರಾಶಿಮಾಡು,
ಇಷ್ಟುದಿವಸ ಕಡಮಾಡಿ ಇನ್ನು ತಡಮಾಡಬಹುದೆ ಹೇಳು.

ಮರ್ತ್ಯವನ್ನೆ ಮಹಮನೆಯು ಗೈದ ಮೃತ್ಯುಂಜಯನ ಚರಣ
ಶರಣಭಾವದಲಿ ಕಿರಣಿಸಿಹುದು ಪುಷ್ಪಾಂಜಲಿಯ ಸ್ಮರಣ.
ಇರುಳ ಮೌನ ತಿಳಿಗೊಂಡು ಅರಳಿ ನರಗಂಪು ನಸುಕು ಹರಿದು
ಕಿವಿಯೊಳಿಂತು ಉಚ್ಚರಿಸಿತಣ್ಣ ಎಚ್ಚರಿಸಿ ದೂರ ಕರೆದು.

ಆದಿ, ಮಧ್ಯ ಮಂಗಳವು ಸರ್ವಮಂಗಳಕು ನೀವೆ ಮುಂದು
ಹಿಂದೆ ಎಂದು ಕಂಡಿರದ ಹೊಚ್ಚಹೊಸ ಪರ್ವಕಾಲವಿಂದು :
ತಂದೆ ಬಂದೆವಿದೊ ತುಂಬುನಂಬಿಗೆಯ ಹಡಗದಲ್ಲಿ ಕುಳಿತು
ಜಯಾಜಯ ನಮಃಪಾರ್ವತೀಪತೇ ಮಹಾದೇವ ಜಯತು.

*ಸಮಾಧಿ ದರ್ಶನ

ಆ ಕೋಣೆಯಿಂದ ಕೆಳಗಿಳಿದು ಬಂದು ಈ ವೇಣೆಯಲ್ಲಿ ಕುಳಿತು
ಎಲ್ಲ ವೀಣೆದನಿ ಹಿಂದೆ ಇರುವ ಓಂಕಾರದಲ್ಲಿ ಬೆರೆತು,
ಸ್ವಪ್ರಕಾಶದಲಿ ಇರುಳ ಬೆಳಗಿ, ಬೆಳಗಿನಲಿ ಶಾಂತವಾಯ್ತು
ನೂರು ಚಿಕ್ಕೆ ಚಂದ್ರಮರ ಪಕ್ಕದಲಿ ಚೊಕ್ಕ ಬೆಳ್ಳಿ ಬೆಳಕು.

ಅಲ್ಲಿ ಕಡಲ ತೆರೆತೆರೆಗಳೆದ್ದು ಬರಿ ನೊರೆಯ ಚೆಲ್ಲುತಿಹವು
ಇಲ್ಲಿ ಮೌನ ಮಹದಾಳಕಿಳಿದು ಮುತ್ತುಗಳ ಹುಡುಕುತಿಹುದು.
ಅಲ್ಲಿ ಏರಿ ಮುಗಿಲಲ್ಲಿ ತೂರಿ, ಹಗಲಿರುಳು ಸುತ್ತುತಿಹರು—
ಇದರ ಬಳಿಗೆ ಬಲವಂದು ಬೆಳಕು—ಹೆಜ್ಜೆಗಳ ಕಾಂಬ ಹಲರು.

ಅಲ್ಲಿ ಉಸಿರ ಕಟ್ಟಿಸುವ ಹೊಗೆಯು, ಧಗಧಗಿಸುವುರಿಯು ಒಳಗೆ,
ಇಲ್ಲಿ ಜೀವದುಸಿರಿನಲಿ ಬಸಿರು ಮಗಮಗಿಸುತಿಹುದು ಮರೆಗೆ.
ಅಲ್ಲಿ ಗಾಳಿ ಭೋರ್ಗರೆದು ಕಣ್ಣು, ಕಿವಿ, ಮೂಗಿನಲ್ಲಿ ಧೂಳಿ
ಇಲ್ಲಿ ಮಂದ ಸೌಗಂಧದೆಲರು ವಸುಧೈವ ದೈವಕೇಳಿ.

ಅಲ್ಲಿ ಗಿರಣಿ ಬಂಬುಗಳ ಧೂಮ ಬಾನೆಲ್ಲ ಕಪ್ಪು ಕಲೆಯು,
ಇಲ್ಲಿ ಊದುಬತ್ತಿಯಲಿ ಊರ್ಧ್ವಮತಿ ನೀಲವೊಂದೆ ನೆಲೆಯು.
ಅಲ್ಲಿ ಕೆರೆಯ ನೀರೆಲ್ಲ ಕಲಕಿ ಹೂಗಿಡಕೆ ಸಿಡಿವ ಕೆಸರು,
ಇಲ್ಲಿ ತೊರೆಯು ಜಲಜಲನೆ ಹರಿದು ಹೂ ಹೂವಿಗೊಂದು ಹೆಸರು.

ಅಲ್ಲಿ ಹೊಸ್ತಿಲಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜವು ತುಂಬಿ
ಮನೆಯು ಒಳಗೆ ಮನೆಯೊಡೆಯನಿಲ್ಲ, ನೀ ಹೌದೊ ಅಲ್ಲೊ ಎಂಬಿ,
ಇಲ್ಲಿ ನೆಲವು ಕನ್ನಡಿಯು, ಮೆಲ್ಲನಡೆ ಅಚ್ಚಹೊಸತು ಗುಡಿಯು.
ಎಲ್ಲಿ ಆಡಿದರು, ಬಳಲಿ ಬಾಡಿದರು ಒಂದೆ ತಾಯ ತೊಡೆಯು.

---

* ಪಾಂಡಿಚೆರಿಯಲ್ಲಿ ಶ್ರೀ ಅರವಿಂದರ ಸಮಾಧಿ ದರ್ಶನ ಪಡೆದು.

'ಅಂಬೆ' 'ಅಂಬೆ' ಎಂದೊರಲಿ ಬರುವವ್ರೋ ಇಲ್ಲಿ ನೂರು ಕರುವು.
ನಂಬಿದವಗೆ ತಂಬಿಗೆಯ ತುಂಬ ನೊರೆವಾಲು ಕರುಣೆ ಕುರುಹು.
ಮನದ ಒಳಗೆ ಮಲಗಿರುವ ತೆರೆಯ ತುತ್ತೂರಿ ಬರುವ ಸೂರ್ಯ,
ಮೋಡದೊಳಗೆ ತಂಗಾಳಿ ಸುಳಿದು ಹನಿಯಾಗಿ ಇಳಿವ ಕಾರ್ಯ.

ಇಲ್ಲಿ ಲೌಕಿಕವು ಪಾರಮಾರ್ಥದೊಳಗಲೌಕಿಕವ ತೆರೆದು
ತನ್ನದೊಂದು ಹೊಸಲೋಕ ಕಟ್ಟಿ ಸಂಪೂರ್ಣಯೋಗ ಬೆರೆದು.
ಅಲ್ಲಿ ಕಡಲು ಅಪ್ಪಳಿಸುತಿರಲು ಒಡಲಿಲ್ಲಿ ಸಪ್ಪಳಿಲ್ಲ
ತಪ್ಪು-ನೆಪ್ಪುಗಳ ಚಿಪ್ಪನೊಡೆದು ತೆಗೆದಪ್ಪಿದವನೆ ಬಲ್ಲ.

ಕೃಷ್ಣಾವತಾರ

ವಸುದೇವ–ದೇವಕಿಯುರಂತರ್ಭಾವದಿ ಭಗವಜ್ಜ್ಯೋತಿಯು ಹೊತ್ತಿರಲು
ಗಾಳಿಮಳೆಯು, ಕಾರ್ಗತ್ತಲು, ಕಾರಾಗೃಹವೇ ಬಾಗಿಲು ತೆರೆದಿರಲು,
ತುಂಬಿದ ಯಮುನೆಯು ಇಂಬಾದಳು, ಬಾ, ಅಂಬಾ ಎಂದಿತು ಗೋಕುಲವು,
ಶಂಖ, ಚಕ್ರ, ಗದೆ, ಪದ್ಮಧಾರಿ ಕೂಸಾಗಲು ಹರಿಯಿತು ವ್ಯಾಕುಲವು.

ಬೆಣ್ಣೆ ಮೊಸರು ತಿಂದಣ್ಣೆವಾಲು ಕುಡಿದಾಡಿದ ಗೋಪಾಲ
ಚಿಣ್ಣರ ಬಡಿಯುತ, ಹೆಣ್ಣನು ಕಾಡಿದ ಯಾರಿಗು ಇವ ಸೋಲ.
ಹಿಡಿ ಹಿಡಿಯೆಂದರೆ ಹಿಡಿಯಲಿ ಸಿಗುವನೆ ಬ್ರಹ್ಮಾಂಡವೆ ಆತ.
ನವಿಲುಗರಿಯ ನವನೀತ ಚೋರನಾಬಾಲವೃದ್ಧಪ್ರೀತ.

ಹತ್ತಿ ತುಳಿದ ಕಾಳಿಂಗನ ಹೆಡೆಗಳ ಅಹಂಕಾರ ಹಿಳಿದು,
ಎತ್ತಿದ ಗೋವರ್ಧನ ಗಿರಿಯನು ಆ ಇಂದ್ರನ ಮುಖದೆದುರು.
ಕಾಮಧೇನು ಅಭಿಷೇಕಿಸೆ ಗೋಕುಲಕಧಿಪತಿ ಗೋವಿಂದ.
ಇಲ್ಲಿ ಹುಡುಕಿದರೆ ಅಲ್ಲಿ ತೋರುವನು ಎಲ್ಲೆಡೆ ಸ್ವಚ್ಛಂದ.

ದೈತ್ಯಬಾಹು ಮುಗ್ಧತೆಯನು ಹಿಸುಕಲು ಚಾಚಿತು ಹಲಬಾರಿ
ಪೂತನಿ, ಶಕಟಾಸುರ, ಯಮಳಾರ್ಜುನ, ಧೇನು ಪ್ರಲಂಬರ ತೋರಿ;
ರಾಕ್ಷಸರೂಪದ ಭೌತಿಕ ಶಕ್ತಿಯ ಗೋಪುರ ನೆಲಕುರುಳಿ
ಕಂಸಾಸುರನೆದೆ ಕುಸಿಯಿತು ಧರ್ಮದ ಕೃಷ್ಣಶಕ್ತಿ ಕೆರಳಿ.

ಬೃಂದಾವನದೆದೆಯ ಮಿಡಿದು
ಬಂತು ಕೊಳಲ ಮೆಲ್ಲುಲಿ
'ಕೈಯೊಳಿದ್ದುದಲ್ಲೆ ಬಿಟ್ಟೆ
ಮೈಯನೆಲ್ಲಿ ಚೆಲ್ಲಲಿ?'
ಝಣ್ ಝಣ್ ಝಣ ಝಣಿರು ಕುಣಿವ
ಗೋಪಿಕೆಯರು ಸುತ್ತಲು
ಕೃಷ್ಣ-ರಾಸಕ್ರೀಡೆ-ಹಾಸ
ರಮಿಸಿ ನಮಿಸಿ ಮುಕ್ತರು.

ಕೊಳಲೂದಿದ ತುಟಿಗಳಲ್ಲಿ
        ಪಾಂಚಜನ್ಯ ಪುಟಿಯಿತು.
ಕುರು-ಪಾಂಡವ-ಕುರುಕ್ಷೇತ್ರ
        ಧರ್ಮಕೆ ಜಯವೆಂದಿತು.
ಆಯುಧವನು ಹೂಡದೇನೆ
        ಆದ ಪಾರ್ಥಸಾರಥಿ
ಯುದ್ಧವೆ ಸ್ಥಿರವಾದರೂನು
        ಶಾಂತಿಗಾಗಿ ಧಾವತಿ.

ಭೀಷ್ಮ, ದ್ರೋಣ, ವ್ಯಾಸ, ವಿದುರ
        ಭೀಮಾರ್ಜುನ, ಯುಧಿಷ್ಠಿರ
ದುರ್ಯೋಧನ, ಜರಾಸಂಧ
        ಶಿಶುಪಾಲ ವಿಶಿಷ್ಟರ–
ಗುಣಶಕ್ತಿಯ ರಂಗದಲ್ಲಿ
        ಕೃಷ್ಣಪ್ರಭೆಯ ಬೆರಗದೋ
ಪುಣ್ಯ ಪಾಪದೆಲ್ಲೆಗೆಟುಕ-
        ದಂತೆ ನಿಂತ ನಿಲವದೋ.

ಶ್ರೀಕೃಷ್ಣನು ಸೂತ್ರಧಾರ
        ನೂರು ಪಾತ್ರ ಕುಣಿದವು ;
ಯಾರುಳಿದರು, ಯಾರು ಇಲ್ಲ ?
        ಯಾರ ಹೊಟ್ಟೆ ತಣಿದವು ?
ಎಂತಾದರು ಈ ದುರಂತ-
        ಕಿಹುದೆ ಕೊನೆಯ ಅಂಕವು ?
' ಸಂಭವಾಮಿ ಯುಗೇ ಯುಗೇ '
        ಅಗೋ ಧರ್ಮಚಕ್ರವು.

*ವಿಶ್ವಗಾನದ ಬೆಳಕು

ಗಾಳಿ-ಚಿರಳುಗಳಿಂದ ಆ ಮಹಾಕಾಶವಿದೊ
ಸೋಕುತಿದೆ ನೆಲದ ಮೈಯ-
ಪುಟ್ಟ ಎದೆ ಜಗದಗಲ ಬಾಯ್ ಬಿಟ್ಟು ನೋಡುತಿದೆ
ಆಕಾಶಕೊಡ್ಡಿ ಕೈಯ !
ಜಗದ ಪಾತ್ರೆಯು ಮತ್ತೆ ತೆರವಾಗಿ ತುಂಬುತಿದೆ
ವಿಶ್ವಗಾನದನಂತ ಸೆಲೆಗಳಿಂದ ;
ಗಿರಿ, ಕೊಳ್ಳ, ಕಾನುಗಳ ಬಾಯಿ ನುಡಿಸಿದೆ ಕೊಳಲು
ಹೊಳಲುಗೊಟ್ಟಿಹುದದಕೆ ಮೌನದಳಲು ;
ಸಂಜೆಗೆಂಪಿನ ಹಿಂದೆ ತುಡಿವ ತಾರೆಗಳಿಣುಕು
ಗಿಡಗಂಟಿ ಮೈಮನಕೆ ಹೊನ್ನ ಹುಳಗಳ ಮಿಣುಕು-
ಚಲಿಸುತಿಹ ದೀಪಾವಳಿ.
ಕೊನೆಯಿರದ ನೀಲಿಮೆಗೆ ತೇಲುತಿವೆ ನೂರೆಂಟು
ಕನಸು ಮೋಡದ ತುಂಡು ಮುಕ್ತಾವಳಿ.

ಗರಿ ಬಿಚ್ಚಿ ಹಾರಿತಾರಾಧನೆಯ ಪಕ್ಷಿ
ಬಿತ್ತರದ ಕಡಲು ದಾಟಿ,
ಬಿರುಸು ನೆಲ, ತುರುಸು ಜಲ, ವಿರಸ ವಕ್ರತೆಯ ಬಲ
ಕರಗಿದಂತಃಕರಣದೆರಕವಾಗಿ,
ಬದುಕು ತೇಲಿತು ಬಾನ ಬೆಳ್ಳಕ್ಕಿ ಮಾಲೆಯಲಿ
ಚಿಕ್ಕೆ ನುಡಿಸುವ ಮಂತ್ರ-ಗೀತವಾಗಿ.

ನಿನ್ನ ಗಾನದ ಬೆಳಕು
ನೆಲಬಾನುಗಳ ತಿಕ್ಕಿ ತೀಡುತಿದೆ
ಚಿಮ್ಮುತಿದೆ ನರನರದಿ ಜೀವದುಸಿರು—
ಕಲ್ಲುಬಂಡೆಯ ಕೊರೆದು, ಮರುಭೂಮಿಯಲಿ
ಹರಿದು, ಜಗದಹಂಕಾರಕ್ಕೆ ಜಲಪಾತವಾಗಿ ಸುರಿದು,

* ರವೀಂದ್ರನಾಥ ಠಾಕೂರರ ಶತಾಬ್ದಿಯ ಸ್ಮರಣೆ.

ಎಲ್ಲ ಗಿಡಗಳ ಬೀಜದಲ್ಲಿ ಅಡಗಿದ ತೇಜ
ಮೊಗ್ಗೆಯಲಿ ಕೈಮುಗಿದು, ಹೂವಿನಲಿ ಕಣ್ಣು ತೆರೆದು.
ಬೇಸಗೆಯ ನಿಟ್ಟುಸಿರು, ಮಳೆವನಿಯ ಪೈಜಣಕೆ
ಕುಣಿದು ಕೊನರುವ ಹಸಿರು—
ಮಿಡಿ, ಕಾಯಿ, ಹಣ್ಣುಗಳ ಹಂಪುಗಾಲದ ಸೊಂಪು
ಋತುಋತುಗಳಾಡಿಸಿದ ಸೂರು ಚದುರು—
ಎದೆಯ ಮಿಡಿತಕೆ ನುಡಿದು ತುಡಿವ ಲಯ ಸಂಗೀತ
ಸಹಜ ಶ್ವಾಸೋಚ್ಛ್ವಾಸ—
ಹೊಂಬಿಸಿಲಿಗರಳಿ, ತುಂಬಿ ಸೂಸಿತು ಆತ್ಮದುಲ್ಲಾಸ
ಹಿಮಗಿರಿಯ ಮಂದಹಾಸ!

ಕಾದು ಕಾಯ್ದಿರುವೆದೆಗೆ ಬೇಸಗೆಯ ಮೊದಲ ಮಳೆ
ಜೀವನದಿ ಬದಿಯ ಭಾವಬನದಲಿ ಕ್ಷೋಭೆ ರೆಕ್ಕೆ ಬಡಿದು
ಬಿರುಗಾಳಿ ಮೈದುಂಬಿ, ಆಗಸದ ಮೂಲೆಮೂಲೆಯಲಿ
ಸಿಡಿಲು ಮಿಂಚಿನ ಬಾರುಕೋಲು ಬೀಸಿ—
ಮಧುರ ಯಾತನೆ ಬಾಳ ಸುತ್ತುವರಿಯಿತು ಮೊರೆದು
ಪ್ರಕ್ಷುಬ್ಧ ಸಾಗರದೊಲು,
ಮರುಚಣದ ಹೊಬಿಸಿಲ ಪ್ರೇಮದಾನಂದದಲಿ
ಬನಬನವು ತೊನೆದು ತೂಗಿತು, ಹಕ್ಕಿಯುಕ್ಕಿಸಿತು ಹಾಡು-ಹೊನಲು.

ಜಡದ ಪರ್ವತವರಳಿ ಗುಡ್ಡಗುಡ್ಡದ ಪಕಳೆ
ಹೀರುತಿವೆ ಸೂರ್ಯ ಬಿಂಬ,
ಯಾವ ಹಾಡನು ಹಾಡಬಂದೆಯೋ ತುಂಬಿಸಿದೆ
ಈ ಜಗದ ಅಮೃತ ಕುಂಭ.
ತಾರೆಗಣ್ಣನು ತೆರೆದು ಎಚ್ಚರದಿ ಕಾರಿರುಳು
ತಾಳ್ಮೆಯಲಿ ತಲೆ ಬಾಗಲು
ಬಂದ ರವಿ ರಥವೇರಿ, ಆಕಾಶವನು ತೂರಿ
'ಬಂಗಾರ ನೀರ ಕಡಲು'.
ಕನಸಿನಿಂದೆಚ್ಚೆತ್ತ ಕಾರಂಜಿ
ಬಯಲ ಬಣ್ಣವ ತುಂಬಿ, ನೆಳಲ ಸಿಂಗರಿಸಿ
ನೆಲದಭೀಪ್ಸೆಯನೆತ್ತಿ ನಿಲ್ಲಿಸಿತು ಉತ್ತುಂಗ

ಶಿಖರ ಸಿಂಹಾಸನಕೆ ಬೆಳಕು ಹರಿಸಿ.
"Ages pass, and still thou pourest,
and still there is room to fill."

೨

ನೆಳಲು, ಬೆಳಕಿನ ಹಿಂದೆ ಸುಳಿವು ಹಿಡಿಯುತ ಬಂತು
ಕೊಳಲ ಕಣ್ಣಿಗೆ ತಾಗಿ ಮಿಂಚುವೆರಳು—
ಯಾರು ಹಾಯದ ಹಾದಿಯಲ್ಲಿ ಕಾಯುತ ನಿಂತೆ
ಮುಂಜಾವು ಮಂಜಿನಲಿ, ಸಂಜೆಯುರಳು.
ಒಮ್ಮೆದೊಮ್ಮೆಲೆ ಹೊಮ್ಮಿ ಬರುವ ಸೊಗ ಚಿಮ್ಮಿಸುವ
ಆ ಒಂದು ಗಳಿಗೆ ಜೋಡು.
ನೂರು ಭಾವದ ಲಹರಿ ಸಾವಿರದ ಹಾಡು.
ಒಡೆದು ಹೋಯಿತು ಹತ್ತು ದಿಕ್ಕುಗಳ ಸುತ್ತಿರುವ
ಶಬ್ದಗಳ ಕಟ್ಟುಪಾಡು.
ಹಗಲೆಲ್ಲ ಧಗಧಗಿಸಿ, ಇರುಳು ಮಗಮಗಿಸಿ
ಬೆಳಗು ಬಂದಿತು ದುಃಖ ದುಮ್ಮಾನಗಳ ಕುಡಿದು
ಸುಖದ ಸುಮ್ಮಾನಗಳ ಹೆಜ್ಜೆಯಿರಿಸಿ.
ಅವನ ಪಾದಸ್ಪರ್ಶಕೆದೆಯು ಹಿಗ್ಗಿತು, ಪಂಚ ಕರಣಗಳ ಪಕಳೆ ಬಿರಿದು.

ನೀರಡಿಸಿ ಬಂದನವನಾಜಗದ ದಾರಿಕಾರ,
ಹಗಲುಗನಸನು ಕೊಡವಿ ಅವನ ಕೈ ಬೊಗಸೆಯಲಿ
ಸುರಿದೆ ನೀನೀ ಜಗದ ಅಮೃತಪೂರ.
ತುಂಬಿ ತುಳುಕಿತು ಬೆಳಕು
ಕಣ್ಣು ಚುಂಬಿಸಿ ಎದೆಯನಿನಿದಾಗಿಸಿತು ಹೊಸತು-
ಹರುಷದ ಜೀವ ಕೇಂದ್ರ ಬಿಂದು.
ಬಾನು ಬಗೆ ತೆರೆದು ಭರವಸೆಯ ನರುಗಂಪಿನಲಿ
ನಗೆ ಸಾಗಿ ಹೋಯಿತೀ ಬುವಿಗೆ ಬಂದು.
ಬೆಳಕು ಕಡಲಲಿ ಹಾಯಿದೋಣಿಗಳ ಹರಹಿದವು
ಚಿಟ್ಟೆ, ಬಣ್ಣದ ತಟ್ಟೆ; ಅಂಚಿನಲಿ ತೇಲಿದವು
ಅಂಜೆ, ಮಿರಿ ಮಿರಿ ಮಿಂಚೆ ನೈದಿಲೆಯು ಜಾಜಿ ಹೂವು.

ಮೋಡ ಮೋಡಗಳಲ್ಲಿ ಬೆಳಕು ಬಂಗಾರ ಹುಡಿ
ನೋಡನೋಡುತ ಸುರಿಯಿತೆಲ್ಲ ಕಡೆಗು.

೩

ಅತ್ತಿತ್ತ ಜಗ್ಗಿದಾನಂದದೆಳೆಗಳ ಹಿಡಿದು
ಒಂದೆಡೆಗೆ ಸುತ್ತಿರುವ ಕೊನೆಯ ಹಾಡು :
ಹುಲ್ಲುಗರಿ ಬಿಚ್ಚಿದಾನಂದದಲಿ ಮೈಮರೆತು
ಬುಗುರಿಯಾಡಿರುವ ಭೂಮಿ.
ಜೀವ ಸಾವಿನ ಆವಳಿ ಜವಳಿ ಗಿರಿಗಿರಿ ಗಿಂಡಿ-
ಬಾಳ ಬೇರನು ಹಿಡಿದು ಅಲ್ಲಾಡಿಸಿತು ಎಚ್ಚರಿಸಿ
ಬೀಸಿರುವ ಗಾಳಿ ಸ್ವಾತಂತ್ರ್ಯ ಧಮನಿ!
ನೋವು-ಕೆಂದಾವರೆಯ ದಳದಳದಿ ಸಂತೋಷ ಸವಿಗಂಬನಿ.

ಪ್ರೀತಿ ಮುಡಿಯಿತು ಹೂವು
ಪ್ರಕೃತಿ ರಿಂಗಣಗುಣಿದು ಮುಂದೆ ಚಾಚಿತು ಬಾಹು
ಬಾಳ ಬಟ್ಟಲು ತುಂಬಿ ಸೂಸಿರಲು 'ಬಾ' ಎಂದು ಕರೆದೆ ಸಾವು.
ಹಗಲಿರುಳು ತಿರುಗಿದವು ಜಗದ ಛಂದೋಗತಿಗೆ
ಅವನ ಬೆಳಕಿನ ಕುಡಿಗೆ ಹೊತ್ತಿಸಿದ ದೀಪಗಳು
ಹಳ್ಳ-ಹೊಳೆ, ಹೂವು-ತೊಳೆ, ಹಕ್ಕಿ ಕೊರಳು.
ಗಾಳಿಯಲಿ ಹೆಜ್ಜೆದನಿ—
"Have you not heard his silent steps
He comes, comes, ever comes"
ಬಾನ ಗಾಜಿಗೆ ಕೊರೆದ ನಕ್ಷತ್ರ ಚಿತ್ರಗಳು
ನೆಳಲು ಹಿಡಿದಿಟ್ಟ ಬೆಳಕಿನ ನೆನಪು ಬೆಳುದಿಂಗಳು.
"Every moment and every age
every day and every night
he comes, comes, ever comes".

ರಾಷ್ಟ್ರದ ಕರೆ

ಹಸುರಿನ ಹೂವಿನ ಹೊದರಿನ ಒಳಗೆ
ಬುಸುಗುಟ್ಟಿದೆ ಘನ ಘಟಸರ್ಪ,
ನುಸುಳುತ ಕಾಲಿನ ಕೆಳಗೇ ಬಂದಿದೆ
ಹಿಮಗಿರಿ ಕೊಡವಿತು ದೀರ್ಘತಪ.

'ಬರಿ ಮೈ ತಣ್ಣಗೆ, ಮನದಲಿ ಬಿಸಿ ಹಗೆ'
ಉಸಿರೋ ಮೋಸದ ಬೆಂಕಿ ಬಲೆ!
'ಹೊಸನಾತೆ' ನ್ನುತ ಹಸುವನು ನುಂಗಿದೆ
ಬೀಸಿರಿ ಎಲ್ಲಿದೆ ಭೀಮಗದೆ!

ಹಿಮಾಲಯದ ದರಿ ಕಂದರ ಕೂಗಿವೆ
ಉತ್ತರ ಕೊಡು ಓ! ಸಹ್ಯಾದ್ರಿ,
ನೆತ್ತರು ಕೊಡು ಓ! ಸಮಸ್ತ ಭಾರತ
ಸೊತ್ತಿಡು ತಾಯಿಯ ಪದತಲದಿ.

ಬಿಡುಗಡೆಯೆಂದರೆ ಹುಡುಗಾಟವೆ ಮಗು?
ಗಡಿಯಲಿ ಗಿಡುಗವು, ತುಡುಗು ದನ—
ಬೆಳೆಯುವ ತೋಟಕೆ ಭದ್ರವೆ ಬೇಲಿ?
ನಿದ್ದೆಗೆ ಸಾಯ್ವರು ನಮ್ಮ ಜನ.

ಮರವೆಯ ಮಬ್ಬಿನ ಹಳೆಯ ಬಾವಿಯಲಿ
ಗೂಡು ಕಟ್ಟಿ ಸೀವ್ ಕೊಳೆಯದಿರಿ.
ಇಂದಿನ ಬೆಳಕಿಗೆ ಕಣ್ಣು ತೆರೆದು, ಧ್ವಜ–
ವೆತ್ತಿ ಹಿಡಿಯಲಿವೆ ಧವಳ ಗಿರಿ!

ಎಲ್ಲ ಮರೆತು ಮೇಲೆದ್ದಿದೆ ಭಾರತ
ಬಿಡುಗಡೆ ಕಾಯ್ದಿವೆ ವೀರಪಡೆ;
ನೆತ್ತರು ಹೊತ್ತಿಸಿ ಎತ್ತಿವೆ ಪಂಜು
ಮಡಿದವರಿಗೆ ತಲೆಬಾಗಿ ನಡೆ.

ಕೋಟಿ ಕೋಟಿ ಕೈ ಬಿಗಿದರೆ ಮುಷ್ಟಿ
ದಾಟಿ ಬರುವ ಎದೆ ಯಾರಿಗಿದೆ?
ನಮ್ಮ ತಾಯಿ-ನೆಲ ಬೆಟ್ಟ ಘಟ್ಟ ನದಿ
ಅದರ ಹೆಸರೆ ನಮ್ಮುಸಿರಿಗಿದೆ.

ಸಮತಾವಾದದ ಬುಲ್‌ಡೋಜರಿನಡಿ
ಅಳಿದಿವೆ ಆಶಾಂಕುರ ನೂರು;
ಗಾಳಿ, ನೀರು, ಬೆಳಕಿನಲಿ ತೂಗಿ
ತಲೆಯೆತ್ತಿ ನಿಂತವರೆ ಮಾನವರು.

ಸಾಗಲಿ ನೇಗಿಲು, ಕೂಗಲಿ ಗಿರಣಿ
ಮುನ್ನಡೆಯಲಿ ಆ ಯೋಧಪಡೆ;
ರಾಷ್ಟ್ರಪುರುಷನಲಿ ಸಮಷ್ಟಿಗೊಂಡಿದೆ
ಶಾಂತಿ, ಮಾನವತೆ ನಮ್ಮ ಕಡೆ.

ಇಂದೆ ಸೀಮೋಲ್ಲಂಘನ

ಯುದ್ಧ ಬಂದಿತು ಸಿದ್ಧರಾಗಿರಿ
ಇಂದೆ ಸೀಮೋಲ್ಲಂಘನ!
ಪೂರ್ವ-ಪಶ್ಚಿಮ, ದಕ್ಷಿಣೋತ್ತರ
ನೀಡಿ ಹಸ್ತಾಂದೋಲನ.

'ಮಾಡು ಇಲ್ಲವೆ ಮಡಿಯಿರೆ'ನ್ನುತ
ಎಂತು ಬಿಡುಗಡೆ ಪಡೆದೆವು,
ನಾಡ ಕಟ್ಟುತ ಬೆವರು ಹರಿಯಿಸಿ
ದೂರ ಗುರಿಯೆಡೆ ನಡೆದೆವು.

ಬಂತು ಉತ್ತರದಿಂದ ಹತ್ತಿರ
ಹಳದಿ ಮಿಡಿತೆಯ ಹಾವಳಿ.
ಏಳಿ ಎಚ್ಚರಿ, ಬೆಂಕಿ ಹಚ್ಚಿರಿ
ತಿಂದು ದಕ್ಕಿಸಿಕೊಳ್ಳಲಿ.

ದೂರ ದಿಕ್ಕಿನ ಅಂಚಿಗಿದೆ ಹೊಸ
ಹೊಂಚು ಹಾಕಿದ ಜೇಡವು;
ಮಿಂಚುತಿದೆ ಆಗೀಗ, ಇರುಳಿಗೆ
ಏರಿ ಬರಲಿವೆ ಮೋಡವು.

ಇರುವೆ-ಗುದ್ದನು ಮೆಟ್ಟಿ, ಮಾಳಿಗೆ
ಸೋರದಂತೆಯೆ ತಡೆಯಿರಿ.
ಆ ಹಿಮಾಲಯ ಕೋಟೆಬಾಗಿಲು
ಅಲ್ಲಿ ಬಾವುಟ ಹಿಡಿಯಿರಿ.

ನಮ್ಮ ನೆಲವಿದು, ನಮ್ಮ ಹೊಲವಿದು
ನಮ್ಮ ನೆತ್ತರು ಬಿಡುಗಡೆ;
ನಮ್ಮ ತಾಯಿಯ ಪಾದಧೂಳಿಯು
ನಮ್ಮ ಪ್ರಾಣದ ನಿಲುಗಡೆ.

ಹಿಡಿದ ಕಾಯಕ ನಿಷ್ಠೆ ನಡತೆಗೆ
ಒಟ್ಟು ನಾಡಿನ ಒಕ್ಕಲು,
ಎಲ್ಲ ಶಕ್ತಿಯ ಝುರಿ ತೊರೆಗಳಾ-
ಭ್ರ್ಯಟಿಸಿ ಸಾಗರವುಕ್ಕಲು,

ಆಕ್ರಮಣ! ಮೈಸೊಕ್ಕು ಮುರಿಯಲು
ಒಕ್ಕೊರಲು ಒಂದಾಗಿರಿ;
ಕೊನೆಯ ರಕ್ತದ ಹನಿಯವರೆಗೂ
ಹೋರಿ ಗೆಲ್ಲುವೆವೆನ್ನಿರಿ.

ಶಿವನ ತಪಸಿಗೆ ಭಂಗ ಬಂದರು
ನವ ಕುಮಾರನ ಸಂಭವ—
ತಾರಕಾಸುರ ವಧೆಯು ಕಾದಿದೆ
ಭರತಕುಲ ವಿಜಯೀಭವ.

ಭೂಮಿ-ತೂಕ

ಮಾತು-ಬೆಳ್ಳಿ, ಕತ್ತಲೆಯ ತಳ್ಳಿ ಸುತ್ತೆಲ್ಲ ಮಿನುಗುತಿರಲು
ಮೌನ-ಧ್ಯಾನ ಬಂಗಾರ ಕೃತಿಯು ಮೂಡಲಕೆ ಮೂಡಿ ಬರಲು
ಜಗದ ಅಂಗಳವ ದಾಟಿ ಒಳಗೆ ಭಾರತದ ಗರ್ಭಗುಡಿಗೆ
ಸೂರ್ಯಕಿರಣ ಶಿವಲಿಂಗ ತಾಗೆ ಹೂವಾಗಿ ಎಲ್ಲರೆದೆಗೆ.

ಹೊರಗೆ ಬರಲಿ ಬಂಗಾರ ಬೆಳ್ಳಿ, ಅದಕಿಹುದು ಭೂಮಿತೂಕ,
ತೆರೆಗೆ ಬರಲಿ ತಾದಾತ್ಮ್ಯ ಹೊಂದಿ ನಟ-ನಾಟ್ಯ ಜೀವಪಾಕ ;
ಕುದಿದು ದೇಶ ತಳವಮಳಿಸುತಿರಲು ತಳಕಿಳಿಯೆ ಕ್ಷುದ್ರ ಕಸವು,
ತುಪ್ಪವಾಗಿ ಮನಕೊಪ್ಪವಾಗಿ ಗಮಗಮಿಸಬಹುದು ಯಶವು.

ತೂಗಬೇಕು ಮನದೊಳಗೆ ತೂಕವುಳ್ಳವರ ಮಾತು ಹಿಡಿದು,
ಬಾಗಬೇಕು ಬಿಲ್ಲಾಗಿ, ದೂರ ಗುರಿಯೆಡೆಗೆ ಜೀವ ಮಿಡಿದು,
ಕಾಯಬೇಕು ಹುಳಿಯೊಗರು ಮಾಗಿ ರಸತುಂಬಿ ತೂಗುವರೆಗು
ಇಂದೊ-ನಾಳೆ ಬಂದೀತು ಗೆಳೆಯ ಆ ಅಮೃತಗಳಿಗೆ ಸಮುಗು.

ದೂರ ಸಿಡಿದು ಕಿಡಿಯಂತೆ ಬದುಕು-ಬಣಿವೆಯನು ಉರಿಸಬೇಡ.
ಭಾರತವೆ ಇಹುದು ಕಣ್ಮುಂದೆ, ಹಿಂದೆ ಜಡೆಗಟ್ಟಿ ನಿಂತ ಮೋಡ.
ಯಾರು ಹೇರಿಕೊಂಡೊಯ್ಯುವುದಿಲ್ಲ, ಹೋರಾಟವೊಂದೆ ಕೊಸಗೆ
ತಾಯಿ ನೆಲದ ಈ ಮಣ್ಣು ಗಂಧ-ಕುಂಕುಮವು ನಮ್ಮ ಹಣೆಗೆ.

ನೆಹರು : ಶ್ರದ್ಧಾಂಜಲಿ

ಬಾನ ನೀಲಿಯ ಕುಡಿದು, ನಕ್ಷತ್ರಗಳ ಮುಡಿದು
ಮೋಡ-ಕುಡಿ ಮಿಂಚುಗಳ ಧಾರೆ ಹಿಡಿದು
ನದಿ ನದಿಗೆ ಧುಮುಕಿಸಿದ ಆ ಹಿಮಾದ್ರಿಯ ಶಿಖರ
ನೆಲಕೊರಗಿ ನಿದ್ರಿಸಿತು ; ಏಳ್ವುದೆಂದು ?

ಯಾರು ಬಂದರು ತೆರೆವ ಬಾಗಿಲವು, ಸೋತವರ-
ನೆತ್ತಿಕೊಳ್ಳುವ ಹೆಗಲು, ತುಂಬಿದುಡಿಯು.
ಎಂಥ ಭಾರಕು ಜೋಲಿ ಹೊಡೆಯದಿಹ ತೂಗು-ತೊಲೆ,
ಆ ಮಹಾತ್ಮನು ತೆರೆದ ಗರ್ಭಗುಡಿಯು.

ಒಳ ಹೊರಗು ಸ್ವಚ್ಛ ಬಿಳಿ ; ಹಾಲುಕ್ಕಿದಂತೆ ನಗು
ಪೂರ್ವ-ಪಶ್ಚಿಮ ಬೆರೆತಪೂರ್ವಕಾಂತಿ.
ಪುಟಿ ಪುಟಿವ ಕಾರಂಜಿ ; ಹಳತು-ಹೊಸತನು ಹಿಂಜಿ
ಹೊಸೆದು ಹೊತ್ತಿಸಿ ಹಿಡಿದ ಶಾಂತಿ-ಪಣತಿ.

ತ್ಯಾಗವನು ಬಿತ್ತಿ ಬೆಳೆದಂಥ ಗೊಮ್ಮಟ ನಿಲವು—
ರಸಿಕತೆಯು ಕಂಪೊಗೆವ ಚೆಂಗುಲಾಬಿ.
ಎರಡು ಕೈಯಿಂದಲೂ ಹೊಸ ಭಾರತವ ಮಿದ್ದಿ
ತಿದ್ದಿದನು ತಾನದರ ಕಣ್ಣುಗೊಂಬಿ.

ಈ ನೆಲದ ಮಣ್ಣವಗೆ ಕಸ್ತೂರಿ, ಕೇಸರವು
ಈ ಜನವ ಹೊಟ್ಟೆಯೊಳಗಿಟ್ಟುಕೊಂಡು,
ಕಾಂಗರೂವಿನ ಹಾಗೆ ಜಿಗಿದ ನೂರಡಿ ಮುಂದೆ,
ಹಸಿರು ಹೊಮ್ಮಿತು ತುಂಬು ತೆನೆಯ ಹಿಡಿದು.

ತುಂಬಿದೆಪ್ಪತ್ತೈದು ವರುಷದೀ ಶತಮಾನ-
ದಿತಿಹಾಸ ಸಂಪುಟದ ಹಾಳೆ ತೆರೆದು,
ಓದಿ ಹೋರಾಟಗಳ ಧೀರ ಕಥೆ, ಚಿಮ್ಮಿರುವ
ಮೂರು ಬಣ್ಣದ ಗುಡಿಯ ಭೇರಿ ಹೊಡೆದು !

VIJAYA EVENING COLLEGE LIBRARY
BANGALORE-4
3517

ನಿನ್ನೆ ನಿರುಳೇ ಅವನು ಎಲ್ಲ ಕೆಲಸವ ಮುಗಿಸಿ
ಮಲಗಿದನು, ನಾಳೆಯನು ನಮಗೆ ಬಿಟ್ಟು ;
ಅಲಸಿಗರು ನಾವು, ನಮಗೊಟ್ಟಿಕೊಂಡಿವೆ ಬೆಟ್ಟ
ಹಗಲಿರುಳು ಕಡಿದರೂ ತೀರದಷ್ಟು.

ಯಾವುದನು ಬರಬಾರದೆಂದು ನೆನೆದಿದ್ದೆವೊ
ಬಂದೆ ಬಿಟ್ಟಿತು ಕೊನೆಗೆ, ಹೊಸತಿಲೊಳಗೆ.
ಈಗ ತಾಕಿತು ತಲೆಗೆ ಅವನು ಹೊತ್ತಿಹ ಭಾರ
ಎತ್ತು ಭಾರತ ಮಹಾರಥವ ಮೇಲೆ.

ಕಣ್ಣೀರು ತೊಳೆಯೆ ಕಲ್ಮಷ, ಪರಂಪರೆ ತೈಲ
ಹೀರಿ, ಹೊಸಬತ್ತಿಯಲಿ ಸ್ವಂತ ಬೆಳಕು
ಹಿಡಿದು ಎದೆ ಹಣತೆಯಲಿ ಸಲಿಸು ಶ್ರದ್ಧಾಂಜಲಿಯ
ಅವನ ಹೊಂಗನಸುಗಳ ದೀಕ್ಷೆ ಪಡೆದು.

*ಭಾರತ ಸುಪುತ್ರನ ಕೊನೆಯ ಬಯಕೆ

ಭಾರತದ ನಾಲ್ವತ್ತು ಕೋಟಿಯ ನೆನೆದು ಎತ್ತಿಹೆ ಲೇಖನಿ,
ಸ್ವಚ್ಛ ಬಿಳಿ ಕಾಗದದಿ ಮೂಡಿದೆ ಹಾಡಿದೊಲು ನನ್ನೊಳದನಿ.
ಮೃತ್ಯುಪತ್ರವನೀಗಲೇ ನಾನೇಕೆ ಬರೆದೆನೊ ತಿಳಿಯದು
ವರ್ತಮಾನವು ಭೂತವಾಗದೆ ಆ ಭವಿಷ್ಯವು ತೆರೆಯದು.

ಇರುವ ಪ್ರೀತಿಯ ಧಾರೆಯೆರೆದಿರಿ, ಮಮತೆ ಹೂಗಳ ಸುರಿದಿರಿ.
ಹೊರದೆ ಹೊರಲಾರದೆಯೆ ಜಾಗಿದೆ, ನೀವೆ ಶಕ್ತಿಯನಿತ್ತಿರಿ.
ನಿಮ್ಮೆದೆಯ ಅಭಿಮಾನ ಧ್ವಜವನು ಎತ್ತಿ ಜಾನಿಗೆ ಹಿಡಿದಿರಿ.
ನಿಮ್ಮ ನಂಬಿಗೆಗೆರಡು ಬಗೆಯದೆ ತುಂಬುವದೆ ನನ್ನೊಳಗುರಿ.

ಕರಗಿದಂತಃಕರಣದಲ್ಲಿಯೆ ಎರಕಹೊಯ್ದಿರಿ ನನ್ನನೆ
ಹೋದ ಹೋದೆಡೆ ಲಕ್ಷ ಲಕ್ಷದಿ ಲಕ್ಷ್ಯಗೊಟ್ಟಿರಿ ಸುಮ್ಮನೆ.
ನಿಮ್ಮ ಕಂಡರೆ ಉಬ್ಬುವದು ಮೈ, ಹಬ್ಬಿ ಪ್ರೀತಿಯ ದಾಂಗುಡಿ
ನಿಮ್ಮ ಸುಖ-ದುಃಖದಲಿ ಮೀಯುತ ಪಡೆದ ಚೇತನವಿಮ್ಮಡಿ.

ನನ್ನ ಹೆಗಲಿಗೆ ಹೆಗಲು ಕೊಟ್ಟಿರಿ, ಹಿಂದೆ ಬೆಂಬಲವಾದಿರಿ.
ಮುಗಿಲು ಮುಟ್ಟುವವರೆಗೆ ಜಯಜಯಕಾರಗೈಯುತ ನಡೆದಿರಿ.
ಜಗದ ಜೀವನ ರಥವು ಮುಂದಿರೆ ಹಿಂದೆ ಬೀಳದು ಭಾರತ
ಬಡವ-ಬಲ್ಲಿದ, ರೈತ-ಕಾರ್ಮಿಕ ಎಲ್ಲರಿಗು ಒಂದೇ ವ್ರತ.

ಆ ಹಿಮಾಲಯ ಕರೆವುದೆನ್ನನು ಮೊರೆವುದೇನೋ ಕಿವಿಯಲಿ,
ನಾನು ಕೊಟ್ಟಿಹ ವಚನ ತೀರಿಸದೆಂತು ಉಳಿದುದ ನೆನೆಯಲಿ?
ನಡೆಯ ತೊಡಗಿಹ ದಾರಿ ಮುಗಿಯದೆ ಎಲ್ಲಿ ಮನಸಿಗೆ ನೆಮ್ಮದಿ?
ನನ್ನ ದಿನಚರಿಯಲ್ಲಿ ಮೂಡಿದೆ ಕವಿಯು ಹಾಡಿದ ಚೌಪದಿ.

ಸಾವು ಬರುವದು ಎಲ್ಲರಿಗು ಸಮನಾಗಿ ಸಂಧ್ಯಾರಾಗದಿ
ಜೀವ ಹೋರಾಡುವದು ತನ್ನಯ ಗುರಿಯ ಮುಟ್ಟುವ ಜಾವದಿ.
ಸತ್ತನಂತರ ಏಕೆ ಧಾರ್ಮಿಕ ಕರ್ಮ ? ಮರ್ಮವನರಿಯೆನು ;
ನನ್ನ ಮಟ್ಟಿಗೆ ಇಂಥ ವಿಧಿ ಮರೆವೋಸವೆಂದೇ ಬಗೆವೆನು.

---

* ಪಂಡಿತ ನೆಹರು ಅವರ ಮೃತ್ಯುಪತ್ರವನ್ನೋದಿ.

ನನ್ನ ದೇಹದ ಬೂದಿಯೊಳಗೊಂದಿನಿತು ಗಂಗೆಯ ಸೇರಲಿ,
ಅಲ್ಲ ಧಾರ್ಮಿಕ ನಂಬಿಕೆಯು ; ಅದು ನನ್ನ ಬಾಲ್ಯದ ಬಾನುಲಿ.
ನನ್ನ ನರ ನರದಲ್ಲಿ ನೆತ್ತರು ಗಂಗೆ ಯಮುನೆಯ ಅಲೆಗಳು
ದಂಡೆ–ಮಳಲಿಗೆ ಹೊಳಲುಗೊಟ್ಟಿವೆ ನೂರು ನೆನಪಿನ ಝುರಿಗಳು.

ಅದರ ಏರಿಳಿತದಲಿ ಬೆಳೆಯುತ ತೂಗಿದೆನು ಋತು-ಲಹರಿಗೆ
ಯುಗ ಯುಗಾಂತರದಲ್ಲು ಮುಗಿಯದ ಕಾವ್ಯ, ಕಥೆ, ಇತಿಹಾಸಕೆ.
ಆ ಪುರಾತನ ಸೆಲೆಯು ಚಿಮ್ಮಿದೆ ಗಂಗೆಯುಗಮಸ್ಥಾನದಿ
ನೂರು ಕತ್ತಿಯ ರಕ್ತ ತೊಳೆದಿದೆ ಶಾಂತಿಮಂತ್ರದ ಪೂರದಿ.

ಹಿಮಶಿಖರದಿಂದಿಳಿದು ಕಹಳೆಯನೂದಿ ಕೊಳ್ಳಕೆ ಧುಮುಕಿದೆ,
ಬಯಲ ನೆನೆಯಿಸಿ ಹಸುರ ತೊನೆಯಿಸಿ ಜೀವ ದುಂದುಭಿ ಮೊಳಗಿದೆ.
ಭಾರತದ ಗತ ಸಾರ ಸ್ಮಾರಕ ವರ್ತಮಾನಕೆ ಹೊಯ್ಯುತ
ಆ ಭವಿಷ್ಯದಪಾರ ಸಾಗರ ಹೊಕ್ಕು ತೆರೆ ಹೊಡಮರಳುತ.

ಅರ್ಥವಿಲ್ಲದ ರೂಢಿ ಮೂಢತೆ ಕೊಡವಿ ಮೇಲಕೆ ನೋಡಿದೆ:
ವ್ಯರ್ಥವಾಗಿದೆ ವ್ಯಕ್ತಿಶಕ್ತಿಯಪಾರ್ಥಗೊಂಡಿದೆ ಗಂಡೆದೆ.
ಮೆಟ್ಟಿ ಪಾತಾಳಕ್ಕೆ ದೇಹವ ಆತ್ಮಕೊಡ್ಡಿವೆ ಬಂಧನ
ಸಕಲ ಸಂಕೋಲೆಗಳ ಕಿತ್ತೆಸೆದೇಳು ಭಾರತ ಚೇತನ!

ತೆರೆ ಪರಂಪರೆ ತೂರೆದು ಹರಿಯುವ ಹೊನಲಿಗೆಲ್ಲಿದೆ ಜೀವನ?
ನೊರೆಯ ಸರಿಸುತ ಬದಿಗೆ ತಿಳಿಜಲವೀಂಟೆ ಸ್ಫೂರ್ತಿಯ ಕೇತನ.
ನನ್ನ ಭಾವಕೆ ಸಾಕ್ಷಿಯಾಗೀ ಭಸ್ಮ ಗಂಗೆಗೆ ಸಲ್ಲಲಿ
ಇಂಥ ಸಂಸ್ಕೃತಿ ಸಾರ ಸಕಲೋದ್ಧಾರಕೀ ಶ್ರದ್ಧಾಂಜಲಿ.

ಉಳಿದುದೆತ್ತರ ಬಾನ ಸಂಪುಟದಡಿ ವಿಮಾನ ವಿತಾನದಿ
ನನ್ನ ನಾಡಿನ ಚಿತ್ತರದ ಹೊಲಗದ್ದೆಗಿಳಿಯಲಿ ಮೌನದಿ,
ರೈತ ಸುರಿಸಿದ ಬೆವರು ಮಣ್ಣಿಗೆ ನನ್ನ ದೇಹದ ಬೂದಿಯು
ಬೆರೆತು ಸಮರಸವಾಗುವದೆ ನಾ ತಿಳಿದ ಸ್ವರ್ಗದ ಹಾದಿಯು.

ಪ್ರತಿಮೆ

ನುಡಿ-ಗುಡಿಯ ಬಾಗಿಲವ
ತೆರೆದು ಪ್ರತಿಮೆಯ ತೋರು,
ಮಡಿ-ಹುಡಿಯ ಪೂಜಾರಿ :
ಹೊರಗೆ ಕಾದಿದೆ ತೇರು.

ನೆಲ-ಮುಗಿಲು

ಕಣ ಕಣದ ಗತಿ-ಮತಿಯು ಗುರುತಿಸು, ಆದರೀಗಲೆ
ಅದರ ಇತಿವೃತ್ತವನು ಬರೆಯದಿರು, ನೀನಾಗಿ
ಕೊರೆಯದಿರು ದಾರಿಯನು. ಬಯಲ ಜಿಡುಗಡೆ ನುಂಗಿ
ನೀರು ಹಿಡಿಯಲಿ, ವಿಶ್ವವೆಲ್ಲವು ತೆರೆದ ಬಾಗಿಲೆ.
ಹಾರಿ ಹಕ್ಕಿಯಾಗಲಿ ತುತ್ತ ತುದಿಗಿದೆ ಚುಕ್ಕಿ.
ಮೀರಿ ಹರಿಯಲಿ ದಡವನೆರಡೂ ಕಡೆಗೆ ಬಾಚಿ.
ಬತ್ತಿತೋ ? ಚಿಮ್ಮುವದು ಒರತೆ ನಾಲಗೆ ಚಾಚಿ,
ಆಕಾಶ ಕೈ ಹಿಡಿದು ಎತ್ತುವದು, ಮುತ್ತಿಕ್ಕಿ
ಭೂಮಿಗಿಳಿಸುವದು : ತೊಡೆಯ ಮೇಲಾಡುವದು ಮಗು.
ತಾಯ ಮೊಗ ಸೂರ್‍ಯಪಾನವು ಹೊರಳೆ ಹೊಂಬೆಳಗು !
ಎಲ್ಲೆಡೆಗು ಏಕಕಾಲಕೆ ಬಹುದೆ ಮಳೆ ? ಹರಗು
ಒಳ ಹೊರಗು ಸಿದ್ಧವಿರು. ಹೊಸ ನೀರು ನಿಬ್ಬೆರಗು.
ಗುರುತ್ವಾಕರ್ಷಣ ಕರುಣೆ-ಕೇಂದ್ರ ನೆಲದೊಡಲು:
ಬಾನತೀಂದ್ರಿಯ ಸ್ಪರ್ಶ,—ತುಂಬಿ ತೇಲಿವೆ ಮುಗಿಲು.

ವರ್ತುಳ

ಈ ಮನದ ಮಧ್ಯಬಿಂದುವಿನಿಂದ ಹೊರಟ ವ-
ರ್ತುಳ ರೇಖೆ ಜೀವಿ ಜೀವಿಯ ಸುತ್ತಿ, ಬಾನಲೆವ
ಬೆಳಕನಾಲಿಂಗಿಸಿದೆ; ಗಾಳಿಯಲಿ ಯಾವುದೋ
ಗುಡಿಯ ಘಂಟಾನಾದ, ನಾದದೊಳಗೂ ಪ್ರತಿಮೆ.

ನೆಳಲು ಬೆಳಕಿನ ನಡುವೆ ಮಡುವಾಗಿ ಮಲಗಿಹುದು
ಯುಗ ಯುಗದ ನೆನಹು; ಬಿಟ್ಟೂ ಬಿಡದೆ ಜಿನುಗುವದು.
ಒಂದು ಅಂಗುಲ ಜಾಗ ಬಿಡದೆ ಹೆಣೆದಿವೆ ತಂತಿ.
ತಂದೆ-ಮಗು, ಮಗು-ತಂದೆ, 'ಇಲ್ಲಿಗೇಕೈತಂದೆ?'

ಎಲ್ಲಿ ಹುಡುಕಿದರು ಕುಂದು ಕಲೆ ತೋರದಾಕಾಶ.
ಅಂಚಿನಿಂದಂಚಿಗೆ ರೆಕ್ಕೆ ಬೀಸೆ ಬೆಳ್ಳಕ್ಕಿ—
ಅಲ್ಲೆ ಕಾಮನ ಬಿಲ್ಲು, ಮೋಡ-ಮಿಂಚಿನ ಸೆಳೆತ
ಗುಡುಗು-ಸಿಡಿಲಿನ ಹೊಂಚು, ಕೊನೆಗೆ ಕರುಣಾವೃಷ್ಟಿ.

ತ್ರಿಕೋಣ, ಚೌಕೋಣ, ಅಷ್ಟಕೋಣದ ಸುತ್ತು
ವರ್ತುಳ. ಸೃಷ್ಟಿ ಪರಿಘದ ನಡುವೆ ದೃಷ್ಟಿ ಬಿಂದು.

ಪ್ರಣಯ-ಪ್ರೀತಿ

ಹಚ್ಚ ಹಸುರಿನ ಹೊರೆಯ ಹೊಚ್ಚ ಹೊಸ ಪ್ರಾಯ. ನಗೆ
ತುಂಬಿ ತುಟಿಬಿಗಿದ ಚೆಂಗುಲಾಬಿಯ ಮೊಗ್ಗೆ. ನರ
ನರಗಳಲ್ಲಿ ಹುಚ್ಚೆದ್ದು ಪುಟಿವ ಬಿಸಿನೆತ್ತರ
ಬುಗ್ಗೆ. ನೂರು ಮದ್ದಾನೆಗಳು ಇರುಳ ಬಾನಿಗೆ
ನುಗ್ಗಿ ಢಿಕ್ಕಿಯಾಡಿವೆ. ಗಾಢಾಂಧಕಾರದೆದೆ
ಬಿರಿದಗೊಂಡ ಬೆಳ್ಳಕ್ಕಿ-ಮಿಂಚು. ಮಳೆಯು ಬರಸೆಳೆದು
ಗಟಗಟ ಕುಡಿದು, ಕೊಳ್ಳದಲಿ ಧುಮ್ಮಿಕ್ಕಿ ಹರಿದು
ಜುಮ್ಮೆಂದಟ್ಟಿಸಿತು ಹೊಳೆ. ಮೂಲೋಕ ಮೂಕವಿದೆ.
ಬಿಸಿಲು ಚಳಚಳಕಾದು ನೆಲಕೆ ಆರಿಕೆಯಾಗಿ
ಮುಳ್ಳುಬೇಲಿಯ ಹೂವ ತುಂಬುಗಣ್ಣೊಳು ಪ್ರೀತಿ-
ಪಣತಿ,—ಎಣ್ಣೆಯಲಿ ಬೇರಿಳಿದ ಬತ್ತಿ,—ಸಮರತಿ.
ಗಾಳಿಗೆದೆಯೊಡ್ಡಿಹುದು ಸೊಡರು-ಕುಡಿ ಹಾಯಾಗಿ.
ಕತ್ತಲೆಯ ಗರ್ಭದಲಿ ಬಿದ್ದ ಬೆಳಕಿನ ಬೀಜ
ಬೆಳೆದು ಬ್ರಹ್ಮಾಂಡವನೆ ತಬ್ಬಿಕೊಂಡಿತು ಸಹಜ.

ದಾಹ

ಸುತ್ತು ಹತ್ತೂತ್ತು ನಿಟ್ಟಿನಿಂದ ಸುತ್ತಿಗೆ ಹಿಡಿದು-
        ನೆತ್ತಿ ಬಿರಿಯುವ ಬಿಸಿಲು. ಕತ್ತೆತ್ತಿದರೆ ಮೇಲೆ
        ಕಾದ ತಗಡಿನ ಮುಗಿಲು. ಕೆಳಗೆ ಕಮ್ಮರ ಶಾಲೆ
ಉಸಿರ ತಿದಿಯೊತ್ತಿನಲಿ ನಿಟ್ಟುಸಿರುಗಳ ಬಿಸಿದು!
[ಗಾಳಿಗೆಲ್ಲೋ ಗಲ್ಲು, ಇಲ್ಲವೆ ಗಡೀಪಾರು.]
        ಕುಲಿಮೆ ಇದ್ದಲಿಯೊಳಗೆ ಕಾದುಕರಗಿದೆ ಪ್ರಾಣ
        ಒದುಕಿಸಡಿಗಲ್ಲಿನಲಿ ಸೂರು ಸೋಪಿನ ಭ್ರೂಣ-
ತಾಳ-ಕುಡ-ಕುಳಗಳನು ಹಣಿದು ಕುಡಿಸಿದೆ ಸೀರು.
ಅಡ್ಡಮಳೆ, ಸಡ್ಡು ಹೊಡೆಯುವ ಸಿಡಿಲು, ಸಿಕ್ಕುದನು
        ತೆಕ್ಕೆ ಬಡಿಯುವ ಗಾಳಿ, ಬಯಲು ಟರಪರ ಹರಿದು
        ನುಚ್ಚು ನೂರ್ಕಡಿ-ಮಿಂಚು. ಗುಡುಗು-ಗುಮ್ಮಟ ಬಾನು.
    [ನೆಮ್ಮದಿ ವಸುಂಧರೆಗೆ ಗಂಡುವುಗುವನು ಹಡೆದು.]
        ಬತ್ತಿರುವ ಬಾವಿ ತೊರೆಬಿಟ್ಟ ಕೆಚ್ಚಲು-ಚಿಲುಮೆ
        ದಾಹವಾರಲಿಕೆಷ್ಟು? ಎಷ್ಟಿದ್ದರೂ ಕಡಮೆ!

ಉಪ್ಪು ನೀರು

ಜಗದ ಕಡಲನು ಸುತ್ತುತಿದೆ ಹಗಲಿರುಳಹಡಗು
    ನಿಮಿ ನಿಮಿಷದೊಂದು ತೆರೆ ತೆರೆವ ಅನಿಮಿಷ-ಮಿಣುಕು.
    ಗಾಳಿ-ಬಿರುಗಾಳಿ-ಸುಳಿ ಕರುಣೆ-ಕ್ರೌರ್ಯದ ತೊಡಕು.
(ರಟ್ಟೆ ಸೋತರು ಮತ್ತೆ ಹುಟ್ಟು ಹಾಕುವ ಬೆಡಗು !)
ಮೂಡ-ಪಡುವಣ ಮುಖಕೆ ರಕ್ತ ಚಿಮ್ಮುವ ಹೊತ್ತು
    ಜೀವ ಜೀವದ ನೀರು ಪುಟಿದು ಸಾಗರವರಿದು
    ಒಡಲ ಕಡೆವುದು, ದಂಡೆಗಪ್ಪಳಿಸಿ ಮೊರೆಯುವುದು.
ಹಿಮಗಿರಿ ತಿಮಿಂಗಿಲಗಳಜ್ಜಗಾಪಲು ಸುತ್ತು !
ಮಳಲಿಸಂಚಿಗೆ ಬಾಯಿ ಬಿಡುವ ಭಾವದ ಸಿಂಪು,
    ತಳದ ಕತ್ತಲ ಗವಿಯ ಕೊಳೆವ ಜೀವದ ಮುತ್ತು,
    ನಡುವೆ ಅಪರಂಪಾರ ಮುಳುಗಿ ಏಳುವ ಬದುಕು.
ಸಂತತ ಸ್ವತಂತ್ರವಿದು ಯಾರೆ ಹೂಡಲಿ ಸಂಪು—
    ತಪ್ಪು ಯಾರದು ?—ಎಲ್ಲ ಉಪ್ಪು ನೀರಿಗೆ ಗೊತ್ತು ;
    ಈ ಸರಕು ಬಂದರಿಗೆ ಒಯ್ದು ಒಗೆದರೆ ಸಾಕು.

ದೀಪಾವಳಿ

ಹತ್ತಿರಿದ್ದರು ದೂರ, ಹೃದಯ ಗಹ್ವರದಲ್ಲಿ
        ಮಿಣಿ ಮಿಣಿ ಎನುವ ಪಣತಿ,—ನಮ್ಮ ಜೀವದ ಗೆಣತಿ ;
        ಹೊಮ್ಮಿ ಹೊಡಕರಿಸಿದರೆ ಹೊಸ ಬೆಳಕಿನಾಕೃತಿ.
ಇಡಿಯ ವರುಷದ ಹರುಷ ಆಕಾಶಬುಟ್ಟಿಯಲಿ–
ಬಣ್ಣದೊಟ್ಟಿಲದಲ್ಲಿ ಕಣ್ಣು ತುಂಬುವ ಕಂದ.
        ಎರೆ ಹೊಲದ ಎದೆ ಅರಳೆ-ಬೆಳ್ಳಿಯಾಯಿತು ಮಣ್ಣೆ,
        ಹಗಲಿರುಳ ಗಾಣದಲಿ ಹಿಂಡಿ ಬಂದಿರುವೆಣ್ಣೆ—
ಲಕ್ಷದೀಪದ ಕುಡಿಗೆ ಬೆಳಕು-ಮುಡಿ, ಬಿಸವಂದ !
ಹಿಂದೆ ಚಾಚಿದೆ ನೆರಳು (ಬೆಳಕು ಬಾಚಿದ ಹೆರಳು)
        ಕೈಗೆ ದೀಪವು ಸಿಗಲು ಕತ್ತಲೆಯ ಹುಡುಕುವರು.
        ಚಿಗುರು-ಹೂ-ಹಣ್ಣುಗಳ ತಳದೊಳೆಲ್ಲಿಯೊ ಬೇರು.
ಆಚೆ ಹೊರಳಿದೆ ಪೃಥ್ವಿಗೋಳದ ಒಂದು ಹೋಳು.
        ಕಲ್ಲಾಗಿ ನಿಂತಿರುವ ಹೆಣ್ಣು, ದೀಪದ ಮಲ್ಲಿ
        ಬಿಲ್ಲು ಬಾಣವ ತೊಟ್ಟು ಹೊರಟವನ ಗುರಿಯೆಲ್ಲಿ ?

ಕತ್ತಲೆ-ಬೆಳಕು

ಈ ಮನಸಿನೊಳಗೊಬ್ಬ ಸೂರ್ಯ ಸುತ್ತಲು ಕಿರಣ
ತೂರಿಹನು. ಇಲ್ಲ ಉದಯಾಸ್ತಮಾನಗಳವಗೆ.
ಹೃದಯ ಕಮಲದಿ ಸದಾ ನಿಗಿನಿಗಿ ಕೆಂಡ ಸುರಿವ.
ಕೆಂಡವರಳಿದ ಹೂವು, ಮುಡಿದು ಸಿಂತಿವೆ ಹರಣ.
ನೂರು ಗುಹೆಗಳ ಹೊಕ್ಕು ಹುಡುಕುತಿವೆ ಸಾವಿರದ
ಕಿರಣ. ದಾರಿಯುದ್ದಕು ಎಡವಿ ಬಿದ್ದಿದೆ ಸ್ಮರಣೆ,
ಅರಿವುಗೊಡದೊಲು ಎಲ್ಲೊ ತಾನೆ ಜಿನುಗಿದೆ ಕರುಣೆ.
ತೆರವಿಲ್ಲ, ತುಂಬಿಲ್ಲ, ತುಳುಕುತಿಹುದೆಲ್ಲಿಂದ?
ಹಗಲಿನಲಿ ಮುಳುಗು ಹಾಕಿದ ತಾರೆ ಮೇಲೆದ್ದು
ಬಹವು ಸಂಜೆ. ಕಿಡಿಹಾರಿಸುವವು ಕಾಡಿಸಂಚಿ-
ನಲಿ ಮಿಂಚುಹುಳ, ಎಲ್ಲಿ ನಾರದ ಹರಿ ವಿರಿಂಚಿ?
[ಶಾಲೆ ತಪ್ಪಿಸಿ ಹೋದ ಧ್ರುವನ ಬೆನ್ನಿಗೆ ಗುದ್ದು.]
ಇರುಳಾಗಲು ಬೆಳಕು ಸೋಸುವದು ಬಾನ ಜರಡಿ
ಹಗಲಿನಲು ಬಂದು ಮೂಸುವದು ಕತ್ತಲೆ-ಕರಡಿ.

ರಾತ್ರಿ

ಅರಿತರೂ ಅರಿವುಗೊಡದಂತೆ ಕಪ್ಪು ಮುಸುಕನು
ಎಳೆದು, ಧಾತ್ರಿಯನು ತನ್ನೆಡೆಗೆ ಸೆಳೆದುಕೊಂಡಿದೆ
ರಾತ್ರಿ. ಜಾರು ಬಂಡೆಯ ಮೇಲೆ ಕುಳಿತು ಜಾರಿದೆ
ಹೀಗೆ ಪ್ರತಿಸಲವು ಖಾತ್ರಿ. ಬೆಳಗು ಬೈಗನು
ದುಃಖ ಸುಖದ ಸಮಶೀತೋಷ್ಣದೊಳಗದ್ದಿ, ನಡು-
ವಗಲು ಕುದಿಸಿ, ಒಣಗಿಸಿ; ಸಟ್ಟಿರುಳು ಮೆತ್ತಗೆ
ಹಾಸಿ ಮೈಮರೆಸಿ, ಸಣ್ಣಗೆ ದೀಪ ಜಿನುಮಿನುಗೆ—
ಏನೊ ತೀರದ ಅಥವ ತೋರಲಾರದ ಕುರುಡು
ದಂಡೆಯೊಳಾಟ, ನಡುನೀರ ತಿರುಗಣೆಗೆ ಕನಸು
ಕಾಣುವ ದೋಣಿ, ಮುಂದೆಲ್ಲೊ ಜಲಪಾತದಬ್ಬ-
ರ. ತಳದ ಸೆಳವಿನ ಗುಂಟ ಕರಂಟು, ಇವನೊಬ್ಬ-
ಕಣ್ಗಂಡ ಹಬ್ಬದಲಿ ಇವನಿಗೆಲ್ಲೋ ಮನಸು.
ಇರುಳಿನಲಿ ಬಾನಿಳೆಯ ಬಿಚ್ಚಲಾರದ ಬೆಸುಗೆ
ಹಗಲು ಹೆಚ್ಚಿದ ಹೋಳು, ಮುಚ್ಚಿಕೊಂಡುದು ಹೇಗೆ?

ಕಣ್ಣಿರುವಷ್ಟು ನೋಟ

ಕಣ್ಣಿರುವಷ್ಟು ನೋಟ, ಕಾಲು ಸೋಲುವ ತನಕ
  ಓಟ, ಹೊಟ್ಟೆಯಲಿ ಡೊಂಬರಾಟ. ಮನಕೆ ಬಿರುಕು
  ಬಿದ್ದಲ್ಲೆಲ್ಲ ಎಲುವಿನ ತುಂಡು-ಬೇಟ. ಹರಕು
ಚಿಂದಿಗೆ ಮುರುಕು ಕೋಲಿನ ಕೂಡ ಕುಣಿವ ತವಕ.
ಅಸ್ತಿಪಂಜರದೊಳಗೆ ಕುಸ್ತಿ ನಡೆದಿದೆ ಬನ್ನಿ :
  ಚಡ್ಡಿಯಿಲ್ಲದೆ ಹೊರಟ ಕಣಕೆ ನಮ್ಮೀ ಗಡಿ,
  ಸದ್ದು ಹೊಡೆಯುವ ಮೊದಲೆ ಅಡ್ಡ ಬಿದ್ದನೇ ? ಬಿಡಿ
ಅಡ್ಡಿಯಿಲ್ಲ, ಗೊಡ್ಡೆಮ್ಮೆ ಹಾಲು ಕುಡಿಯಲು ತನ್ನಿ.
ಯುದ್ಧಕ್ಕೆ ಹೋಗುವೆನೆಂದು ದಿನವು ಒಂಬತ್ತು
  ಕೋಳಿಯು ತಿಂದು ಬಿದ್ದುಕೊಂಡನು ನಮ್ಮ ಭೂಪ.
  ನೆಲ ಒದ್ದು ನೀರು ಬರಿಸುವೆಯ ? ಆ ಪ್ರತಾಪ
ನಿನಗಿಲ್ಲ, ಬರಿಯ ತೂಕದಲಿಲ್ಲ ತಾಕತ್ತು.
  ಆಹಾರಕ್ಕೆ ತಕ್ಕ ಅಂಗ ಸಾಧನೆ-ಶಕ್ತಿ
  ಬುದ್ಧಿ-ಭಾವದ ಮುತ್ತಿಗವಚಿಕೊಂಡಿದೆ ಶುಕ್ತಿ.

ಏನಾಗಬೇಕಿಹುದೊ . . .

ಏನಾಗಬೇಕಿಹುದೊ ಎಲ್ಲ ಆಗಲೆ ಬೇಕು:
        ಆವರೆಗು ತೂಗುವದು ಮನದ ತಕ್ಕಡಿ ಪರಡಿ.
ಅದಕಿಲ್ಲ ಕಾಣಿ, ಸಮದಂಡಿಗೆಯ ತೂಕ ಬರೆ
        ತೆರಬೇಕು ತಕ್ಕಬೆಲೆ. ಪೇಟೆಧಾರಣೆ ಬೇರೆ.

ಕೂಡಿಸುವದು, ಕಳೆದು, ಗುಣಿಸಿ, ಭಾಗಿಸಿ ನೋಡಿ
        ತೂಗಿ ಲೆಕ್ಕಾಚಾರ ಹಾಕಿ, ಯಾವುದೊ ಅಂಕಿ
ಪ್ರಶ್ನೆಗುತ್ತರಿಸುವದು, ಶೇಷವೇನೊ ಸೊನ್ನೆ.
        ಆದಿಶೇಷನು ಹೊತ್ತ ಪೃಥ್ವಿ ಬರಿ ಕೆಮ್ಮಣ್ಣೆ?

ಅಚ್ಚರಿಯ ಬಚ್ಚಿಟ್ಟು ಹುಡುಕ ಹಚ್ಚಿದೆ ಬಾಳ
ನೀಳ ಪಯಣದ ಹಾದಿ: ಬೆಟ್ಟ ಬಂಡೆಗಳಲ್ಲಿ
ಮೇಣ ಬಸದಿ ವಿಹಾರ; ಮುಳ್ಳು ಕಂಟಿಗಳಲ್ಲಿ
ಹೂವು ಮೊಗ್ಗೆಯ ಭಾರ. ಬಯಲ ಗೋಪುರದಲ್ಲಿ
ತಾರೆ–ಬೆಳಕು—ತುಷಾರ. ಕತ್ತಲೆಗು ಕಣ್ಣುಂಟು.
ಹೊಸೆದು ಹುರಿಗೊಳ್ಳುವದು ಜೀವ ಜೀವದ ನಂಟು.

ಹಂಸ-ಕ್ಷೀರ

ಬೆಳ್ಳಗಿದ್ದದ್ದೆಲ್ಲ ಹಾಲೆಂದು ಕುಡಿದೆವೋ—
  ಹೊಟ್ಟೆ ತೊಳಸುತ್ತಿಹುದು. ಮುಟ್ಟಿದರೆ ಮಾಸುತಿಹ
ಬೆಳ್ಳಕ್ಕಿಯೆಂದು ಬಕದ ಬಾಯಲ್ಲಿ ಬಿದ್ದೆವೊ—
  ಸುಖವಾಯ್ತು, ಬಂದು ಕೂಡಿದವೆಲ್ಲ ಅಷ್ಟಗ್ರಹ.

ಮಂದಗಿನ ಹಾಲು ಕರೆಯುವದನ್ನೆ ತೊರೆದವೋ
  ನಮ್ಮ ಹೆಮ್ಮೆಯ ಎಮ್ಮೆ? ಅವಕೆ ಎರಡೇ ಕೋಡು!
ಅಂಗೈದಪ್ಪ ಕೆನೆಯ ಮೊಸರು ತಿಳಿದುಪ್ಪವೋ—
  ಅಯ್ಯ ನಮ್ಮಪ್ಪ! ಬಾ ಮುಂಗೈ ಮೂಸಿ ನೋಡು.

ತಪ್ಪು ಹಸುಗಳದಲ್ಲ. ನೀರು ಬೆರೆಸಿದ ಹಾಲು
  ನೋಡಲಿಕೆ ಯಂತ್ರವಿದೆ. ಮನುಜನೆದೆ ತಳಪಾಯ
ಭಾವಶುದ್ಧಿಯನಳೆಯಲಾವ ಮಂತ್ರ-ಸವಾಲು?
  ಮಾನಸ ಸರೋವರದಿ ಹಂಸ-ಕ್ಷೀರನ್ಯಾಯ.

ಹೆಪ್ಪಂಡ ಹಾಲು ತುಪ್ಪವಾಗುವದೊಂದು ಕ್ರಮ.
  ತಪ್ಪಲಿ, ಒಡೆದ ಹಾಲನು ಕಡೆದು ನೋಡುವ ಶ್ರಮ.

ಕಾಣಿಕೆ

ಎಣಿಸದಿದ್ದರು ಕಾಲ ಉರುಳುವದು. ಚಿಕ್ಕೆಗಳ
        ಗಣಿಸದಿದ್ದರು ಬೆಳಕು ತುಡಿಯುವದು. ತಂತಾನೆ
        ನೆಲದಾಳದಲ್ಲಿ ಹದಗೊಂಡ ಬೀಜದ ಮೊಳಕೆ
ಮಣ್ಣು ಬಿರಿದೇಳುವದು, ಚೈತ್ರ ವೈಶಾಖಗಳ
ಸೂತ್ರವಾಡಿಸಿದಂತೆ ಚಿಗುರುವದು ಮೋಟುಮರ.
        ಹೊಳೆಯ ದಾಟಿದ ಮೇಲೆ ಕೊಳೆಯ ತೊಳೆವವರಾರು?
        ಈಜಿದರೆ ಈಜುವದು ಹರಿವ ನೀರಿನ ಎದುರು ;
ಮೋಜಲ್ಲ,-ಸೋಜಿಗದ ಬದುಕು-ಗಾಜುಗೋಪುರ.
ಸೂಜಿಯ ಮೊನೆಗೆ ದಾರಿಬಿಡು, ದಾರವಾಡುವದು
        ಹೂವಿನ ಕಸೂತಿ ; ಮಾವು ತಳಿತರೆ ಕೋಗಿಲೆಯ
        ಕುಕಿಲು ಸಾರ್ಥಕ. ನೆಲಕುದುರಿ ಬಿದ್ದ ಹಣ್ಣೆಲೆಯ
ಮಣ್ಣು ಗೊಬ್ಬರಮಾಡಿ ತನ್ನೊಳಗೆ ರುಬ್ಬುವದು.
        ಹೂವು-ಹಣ್ಣೂ ಗಿಡದ ಎಡೆಬಿಡದ ಕಾಣಿಕೆ.
        ಸಾವು-ನೋವೂ ನಮ್ಮ ದಿನದ ಹೊಂದಾಣಿಕೆ.

*ಅರುವತ್ತರೈಸಿರಿ

ಎತ್ತರದ ನಿಲವು ; ಮನದಲಿ ಸೂರು ನಕ್ಷತ್ರ-
        ಗಳ ವಿಲಕ್ಷಣ ಹೊಳವು. ವಿಸ್ತಾರದನುಭವದ
        ಸ್ವಸ್ತಿ, ಬಿತ್ತರದ ಹಣೆ; ಸುಸ್ಥಿರನೋಟ ಬಲಿದ
ಯೋಧೃವಾಣಿಯ ನಿಷ್ಠೆ. ಕೃತಿ ಮಹೋನ್ನತ ಪಾತ್ರ.
ದೊಡ್ಡ ಮಳೆ ಜಡಿದು, ನೆಲವೆಲ್ಲ ನೀರನು ಕುಡಿದು,
        ಹಳ್ಳಹೊಳೆ ಭೋರ್ಗರೆದು ಕಡಲ ಕೂಡುವ ರೀತಿ.
        ಬೆಳಗಾಗುವ್ರೊಳಗೆ ಬೆಳುಗೊಳದಲ್ಲಿ ಆತ್ಮರತಿ
ಗೊಮ್ಮಟನ ಕಂಡರಿಸಿದೊಲು ಜೀವ ಬಲ್ವಿಡಿದು,
ಮೂರ್ತಿಗೊಂಡಿಹುದು ಕರ್ಣಾಟ ವಿದ್ಯಾಪೀಠ:
        ಕನ್ನಡ ಸರಸ್ವತಿಯು ಕಣ್ಣಾಗಿ, ಭಾರತಿಯು
        ಹೃದಯ ವೀಣಾಧ್ವನಿಯು ಶ್ರುತಿಯಾಗಿ, ಸಂಸ್ಕೃತಿಯ
ಜೇನು ಹುಟ್ಟಿಗೆ ವಿಶ್ವಚೇತನದ ಹೂದೋಟ!
        ಅರುವತ್ತರೈಸಿರಿಯು ಅರಳು ನಂದಾದೀಪ
        ಬೆಳಗಿ ಪ್ರತಿಬಿಂಬಿಸಲಿ ವಿದ್ಯೆಯ ವಿಶ್ವರೂಪ.

---

* ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಡಿ. ಸಿ. ಪಾವಟೆಯವರಿಗೆ ಅರುವತ್ತು ತುಂಬಿದಾಗ.

*ವಿದ್ಯಾಭವನ

ಹತ್ತು ನಿಟ್ಟಿನ ಗಾಳಿ, ಬೆಳಕು, ಸವಿ, ಭಾವನೆಗೆ
ಸ್ವಚ್ಛಂದದಲಿ ನೂರು ಕಿಟಕಿ ಬಾಗಿಲು ತೆರೆದು :
ಭವ್ಯ ವಿದ್ಯಾಭವನ. ಜ್ಞಾನ-ವಿಜ್ಞಾನ, ಅದು
ಇದು-ಎಂಬುದೆಲ್ಲ ಹದವರಿತಿಲ್ಲಿ ಹುದುವಾಳ್ಗೆ !
ವೀರ ಅಶ್ವಾರೋಹಿ ಚೆನ್ನಮ್ಮ, ನಾಡವರ
ನುಡಿಯೊಡೆಯ, ವಿಶ್ವಮಾನವ ಮೂರ್ತಿ ಸರ್ವಜ್ಞ.
ಅದೊ ಐನ್‌ಸ್ಟೀನನೇಕಾಗ್ರಚಿತ್ತ, ಗಣಿತಜ್ಞ
ಭಾಸ್ಕರಾಚಾರ್ಯ, ಲೀಲಾವತಿಯು-ಇಂತಹರ
ನೆನಹು ನನೆಕೊನೆಯೇರಿ ದ್ವಾರಶಿಲ್ಪದಿ ಚಿತ್ರ-
ವರಳುತಿರೆ, ಎತ್ತ ಹೊರಳಿದರು ನೂತನ ಸೃಷ್ಟಿ.
ನವ ಚೇತನಾಸ್ಪಂದ ರಸಭಾವ ಸಂತುಷ್ಟಿ.
ದೂರ ದೃಷ್ಟಿಗೆ ಹೊಳೆದಪಾರ ದರ್ಶನ ಚಿತ್ರ
ಮೂಡಿ ಮೈದಾಳಿಹುದು ಹಿರಿಬಾಳ ಹೊಂಗನಸು.
'ಸರ್ವಭಾಷಾ ಸರಸ್ವತಿ'ಯೆ ಆವಿರ್ಭವಿಸು.

* ಕರ್ನಾಟಕ ವಿಶ್ವವಿದ್ಯಾಲಯದ 'ವಿದ್ಯಾಭವನ'ವನ್ನು ಕುರಿತು.

‘ ವಿದ್ಯಾಭವನ ’ದ ಗೋಪುರದಿಂದ

ಅತ್ತ ಬೆಳುವೊಲ, ಇತ್ತ ಮಲೆನಾಡ ಜರಿ ಸೆರಗು.
        ಸುತ್ತು ಪರ್ವತ ನೀಲಿ. ಗುಡ್ಡ ಕೊಳ್ಳವ ಇಳಿದು-
        ಏರಿ ಚಿಗುರಿದ ಹಸಿರು. ಕೆಲದಿ ಕನ್ನಡಿ ಹಿಡಿದು
ನಿಂತ ಕೆಲಗೇರಿ ಕೆರೆ. ಗೆರೆ ಕೊರೆದು ಬರುವ ಜುಗು-
ಜುಗು ರೈಲು. ತಗ್ಗು ದಿನ್ನೆಯನೇರಿ ಯಾವುದೋ
        ಹಿಗ್ಗಿನಲಿ ನುಗ್ಗಿ ಬರುತಿವೆ ಬಸ್ಸು. ನಿತ್ಯದು-
        ದ್ಯೋಗದಲಿ ಅತ್ತ ಹೊರಳಿದೆ ನಗರ. ಸತ್ತಿಯಲಿ
ಹತ್ತುದಿಕ್ಕಿನ ಮೋಡ: ಏರೇರಿ ಬಂದವದೊ!
ಸಂಜೆಸೂರ್ಯನ ಹೊನ್ನಕಿರಣಗಳ ಸ್ಪಂಜಿಸೊಲು
        ಹೀರಿ ಹಿಂಜಿದ, ಕಣಿವೆ-ಕಂದರದ ಸೌಂದರ್ಯ.
        ಕೈ ಎತ್ತಿದರೆ ನಿಲುಕುವಾಗಸದ ಔದಾರ್ಯ.
ಇರುಳು ದೀಪಾವಳಿಯ ಹೆಜ್ಜೆಯಲಿ ಬಂದವೊಲು
        ಸಾಲು ವಿದ್ಯುದ್ದೀಪ. ಗೋಪುರದ ತುತ್ತತುದಿ-
        ಗಡಿಯಾರ ನುಡಿಯುತಿದೆ: ‘ ಕಾಲೋಽಹಿ ನಿರವಧಿಃ.’

ಬಿಸಮಿಲ್ಲಾರ ಶಹನಾಯಿವಾದನ ಕೇಳಿ

ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ; ನೂರು ಬಗೆ
ಭಾವ ಕುಸುಮವನೆತ್ತಿ, ಗಾಳಿಸುಳಿಯಲಿ ಹೀಗೆ
ನರುಗಂಪ ತೇಲಿಸುವ; ಹಂಬಲದ ಸವಿದನಿಗೆ
ತುಂಬಿ ಆಲಿಸುವ; ಮನಸಿನ ಮಧ್ಯಬಿಂದುವಿಗೆ
ಕನಸು-ಕಾಮನಬಿಲ್ಲ ವರ್ತುಳವ ರಚಿಸಿ, ನೆಲ-
ಮುಗಿಲನೊಂದು ಸಲ ಬಂಧಿಸಿ ಜೀವ ಸ್ಪಂದಿಸುವ;
ಮೋಡದೊಡಲಿಗೆ ಮಿಂಚು ಸಂಚರಿಸಿ ಹನಿಗರೆವ
ರಾಗ ಲಹರಿಯ ತೊರೆಗಳೋಡಿ ತಬ್ಬಿವೆ ಕಡಲ.
ಕೋಟಿ ಮೈಲಂತರದ ನೀಹಾರಿಕೆಯ ನಾಡಿ-
ಮಿಡಿತ ತಟ್ಟಿತು ಕಿವಿಗೆ; ನಾದದ ಕೂದಲೆಳೆಯಲಿ
ಪೃಥ್ವಿತೂಗಿರೆ, ಸೂರ್ಯಚಂದ್ರರಿಗು ಜೋಕಾಲಿ.
ಪಾತಾಳಗವಿಗೆ ತೆರೆದವು ನೂರು ಬೆಳಕಿಂಡಿ !
ಹೊಕ್ಕಳ ಹುರಿಯು ಕತ್ತರಿಸಿ ಮುಗಿಯೆ ಶಹನಾಯಿ
ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ.

ಶತಾಯುಷಿ ವಿಶ್ವೇಶ್ವರಯ್ಯನವರು

ಘನತೆ-ಗೌರವ-ಸಮತೆಗಿಷ್ಟಗಲ ತೆರೆದ ಕಿವಿ.
ಕ್ಷಿತಿಜದಂಚಿಗೆ ತಾಗಿ ಆಚೆ ಹೊಳೆಯುವ ದೃಷ್ಟಿ.
ಯೋಜನೆಯ ಮೇಜು ಹಣೆ, ತುಟಿ-ವಿನಯ-ಸಂತುಷ್ಟಿ.
ನೇರ ಬಾಳಿದ ಮೂಗು, ದುಡಿಮೆ-ದೀಕ್ಷಾ-ತವಸಿ.
ಶುಭ್ರ ಜರಿಪೇಟ: ಮೇಧಾಕಿರೀಟ; ಶಾಂತರಸ.
ಓರಣಕೆ ತೋರಣಕಟ್ಟಿದುಡುತೊಡುಗೆ. ನಡಿಗೆ—
ನೂರು ಸಂವತ್ಸರದ ಕೊಡುಗೆ; ಕನ್ನಡ ಗುಡಿಗೆ
ಚಂದನದ ತೇರು, ಕೋಲಾರ- ಚಿನ್ನದ ಕಳಸ.
ಸಂಕಲ್ಪ ಮಾತ್ರದಲಿ ಶತಮಾನಗಳ ಕನಸ
ಕಡೆದು ನಿಲಿಸುವ ಶಿಲ್ಪಿ; ಯಂತ್ರ-ಗಡಗಡ-ಗಾಲಿ
ಉಕ್ಕು-ಕಬ್ಬಿಣ-ಸೊಕ್ಕು, ವಿದ್ಯುಚ್ಛಕ್ತಿ ವೈಲಿ!
ವೃಂದಾವನದಿ ಮತ್ತೆ ಜೀವ ಪುಟಿಯುವ ರಾಸ.
ಅಜ್ಜನದ್ಭುತ ಕಥೆಗೆ ಮೊಮ್ಮಗನ ವೈನವಿರು
ಉಜ್ಜು ಭಾರತವಜ್ರ! ಜಂಗುತಿಂದವರಿವರು.

ಉತ್ತಂಗಿಯವರನ್ನು ನೆನೆದು

ಉತ್ತಂಗಿ ! ಜೀವನದ ಸತ್ವದಿಂದೆತ್ತರಕೆ
ಬೆಳೆದು ಬಾಗಿದ ವೃಕ್ಷ : ಎಲ್ಲ ಋತುಮಾನಕ್ಕು
ಎದೆಗೊಟ್ಟು, ಎಂಥ ಕಾಲಕು ಚಿಗುರುನಗೆ ನಕ್ಕು
ಹೂಗೊಂಚಲವ ಹಿಡಿದು ; ಎಲೆಯ ಮರೆಗಿವೆ ಹರಕೆ
ಹೊತ್ತ ಹಣ್ಣುಗಳೆಷ್ಟೊ ! [ಇಳಿಸಿಕೊಳ್ಳುವರಾರು ?]
ಮನೆಯಿಂದ ಮನೆಗೆ ಸರ್ವಜ್ಞಮೂರ್ತಿಯ ನಿಲವ
ಕಂಡರಸಿ, ಪರ್ವಕಾಲದಿ ತಿರುಳುಗನ್ನಡದ
ತಿರುಕನಾಗಿಯೆ ಹೊರಟ ಮಹದಾನಿ. ಉತ್ತಮರು
ಸತ್ತರೆನ ಬೇಡ ; ಇನ್ನಷ್ಟು ಹತ್ತಿರ ಬಂದು
ಭಾವದೊಡಗೂಡುವರು ; ತಂಪು ಬೆಳಕಾಗುವರು.
ತನ್ನ ನೋವನು ತೋರಗೊಡದಂತೆ ದುಡಿದುಡಿದು
ಬೆಳ್ಜಸವನಾಂತ ತಲೆ ; ಬಾಗಿ ಮೆಲ್ಲನೆ ಸಡೆದು
ನೆಲವ ದಿಟ್ಟಿಸಿ ಸಿಧಿಯ ತೋಡಿದರು ಉತ್ತಂಗಿ
ಕನ್ನಡದ ಭಕ್ತಿಯಲಿ ಮುಕ್ತಿಪಡೆದಿಹ ಭಂಗಿ.

ನಮಿಸು : ಗೋವಿಂದ ಪೈ

ಕಣ್ಮುಟ್ಟ ಕಂಡಿಲ್ಲ ; ಆದರು ಮನದೊಳೆಂದೊ
ಮೂರ್ತಿಗೊಂಡಿದೆ ಚಿತ್ರ. ಎಲೆ-ಹೂವ ಕಂಡರೂ
ಮೂಲ ಆಧಾರವನು ಕಾಂಬ ಕಣ್ಣಿನ ಹೊಳಪು.
ಎಲ್ಲವನು ಎಣಿಸಿಟ್ಟ ಬೆಳ್ಳಿಯ ತಿಜೋರಿ. ಅಗೊ
ನೆನಹು ಬೀಗದ ಕೈ, ನಮಿಸು : ಗೋವಿಂದ ಪೈ.
ಮಾನವೀಯತೆಗೆ ಹಂದರ ಹಾಕಿ ಸಿಂತವೆನೆ
ಹುಬ್ಬು ; ಅಂತಃಕರಣದುಬ್ಬು ; ತಾಯ ಸೇವೆಗೆ
ಭಾಷೆಕೊಟ್ಟು ಹೊತ್ತರು ಮೀಸೆ, ಮುಡಿಪಿದರು ಮೈ.
ಗಿಳಿವಿಂಡಿಗೇಕೆ ಆದಿಪ್ರಾಸ? ಹಾರ ಬಿಡು.
ತೆಂಕನಾಡಿನ ಕಡಲತಡಿ ತೆರೆಯ ತೇರಿನಲಿ
ಕ್ರಿಸ್ತ ಬುದ್ಧರು ಬಂದರೋಲಾಡು. ಸಿಂಪಿನಲಿ
ಸುನೀತಗಳ ಮುತ್ತು. ಶಂಖದಲಿ ನಾಡ ಹಾಡು.
ದಿಗ್ಗಜದ ಭಾರವನು ಹೊರಲಿಕೆಲ್ಲಿದೆ ಹೆಗಲು?
ಎಲ್ಲಿದೆ, ಅಗ್ಗದರದಂಗಡಿಯೊಳಿಂಥ ಮಾಲು?

ದ. ಬಾ. ಕು. ಸ್ಮೃತಿ

ದ. ಬಾ. ಕು. ಮೂರಕ್ಷರವೆ ಸಾಕು : ದಣಿವುದೋರದ
ಆ ಮುಖದ ಮುಗುಳುನಗೆ, ಸ್ನೇಹ ತುಂಬಿದ ಜೇಕು.
ಕಣ್ಣಕಾಂತಿಗೆ ಏಕೆ ಬೇರೆ ಬಣ್ಣದ ಮಾತು ?
ಇರುವ ಕೊರಗೆಲ್ಲವನು ಸೋಸಿ ಕರಗಿಸಿ ತೆಗೆದ
ಮನಸಿನುಲ್ಲಾಸ ; ಮಣಿದು ಬದುಕದ, ಇದ್ದುದಿನಿ-
ದಾಗಿಸುವ ಜೀವಹದ. ಓ, ಅವಕಂಡ ಶತಪತ್ರ!
ನಾವು ಕಂಡೆವೆ ಇವನ ಹೃದಯ ರೇಖಾಚಿತ್ರ ?
ಏನಿದು ವಿಚಿತ್ರ ! ಕುಗ್ಗಿ-ಹಿಗ್ಗಿರುವ ಲೇಖನಿ
ಜಗ್ಗಿ ಕಸಿದವರಾರು ? ಆರಿಲ್ಲ ಬರೆದ ಮಸಿ,
ತೀರಿಲ್ಲ ಬಿಳಿ ಹಾಳೆ, ಮೀರಿಲ್ಲ ಈ ಬಾಳ
ನಟ್ಟನಡುರಾತ್ರಿ. ಎಲ್ಲ ಕತ್ತಲೆಯೊಳಗೆ ತಳ
ಕಂಡು, ಕಣ್ಮುಚ್ಚಿ ಕಣ್ಣು ತೆರೆದಂತೆ ತೋರಿಸಿ
ಬತ್ತಲೆ ಬಯಲು ; ಮತ್ತೆ ಸಾಗಿವೆ ಹೀಗೆ ಹಗಲು—
ಉತ್ತರವ ಹುಡುಕುವ ನೂರು ಪ್ರಶ್ನೆಗಳ ಸಾಲು.

ದಿ. ಹಳಕಟ್ಟಿಯವರು

ಯಾವುದೊ ಅಮೃತಗಳಿಗೆ, ನಿಮ್ಮ ದೃಷ್ಟಿಗೆ ಬಿತ್ತು
ಹೂತಿಟ್ಟ ಹೊನ್ನಗಣಿ ! ತೋಡಿದಿರಿ ಹಗಲಿರುಳು
ಮೈಮರೆತು; ಹೊರದೆಗೆದು ಹೇರಿದಿರಿ ಬಂಡಿ ಬಂಡಿ
ಚಿನ್ನದ ಅದಿರು; ಹಿಂಗಿತು ಹಸಿವು ನೀರಡಿಕೆ.
ತಾಳೆಗರಿ ಗರಿಯೊಡೆದು ಮರಮರವೇರಿ ಕುಕಿಲಿ
ಬೆಳಕನೆಚ್ಚರಿಸಿದವು; ನಡುವೆ ಮೂಡಿತು ಶರಣ-
-ರನುಭಾವ ಮಂಟಪದ ಮಾಣಿಕ್ಯದೀಪ್ತಿ, ನಡೆ-
ನುಡಿಯ ಜ್ಯೋತಿರ್ಲಿಂಗ ! 'ತನ್ನರಿವೆ ಗುರು' ಎಂಬ
ವಚನ ಕೊಟ್ಟಿರಿ. ನಿಮಗೋ ? ಶೂನ್ಯ-ಸಂಪಾದನೆ.
ರುಮಾಲದ ಕಟ್ಟು ಬಿಚ್ಚಿಲ್ಲ. ತೆಗೆದಿಲ್ಲ ಇಟ್ಟ
ಕನ್ನಡಕ. ಉಡುಗಿಲ್ಲ ಉಟ್ಟ ಧೋತರ ಮಡಿಯು.
ಮೆಲುದನಿ-ಮಾತು ಭಕುತಿ ಬಳ್ಳಿಗೆ ಬಿಟ್ಟ ಕುಡಿಯು.
ಗೋಳ-ಗುಮ್ಮಟ ತಾನೆ ತಲೆ ಬಾಗಿಸಿತು ನಿಮಗೆ,
ಏಳುಸಲ ಕರೆದರೂ ಎಚ್ಚರಾಗದು ನಮಗೆ.

ಪ್ರತಿಬಿಂಬ

ಅಷ್ಟು ಅಗಲದಾಕಾಶ ನೀಲಿ
    ಈ ಕೊಳದ ಎದೆಗೆ ಮೂಡಿ,
ಹೊಳೆಯುತಿಹುದು ಆಗೀಗ,—
    ಇದ್ದರೂ ಪಾಚಿ, ಜೊಂಡು, ರಾಡಿ.

ಮುಕ್ಕಿ ಮೊಗೆಯುವೆ ಕಾಲ!

೧

ಮುಕ್ಕಿಮೊಗೆಯುವೆ ಕಾಲ! ಮೊಂಡಗೊಳಿಸುವೆ ಸಿಂಹ
ಪಂಜಗಳ; ನಿನ್ನಿಂದ ತನ್ನ ಮಕ್ಕಳ ತಾನೆ
ನುಂಗುತಿಹುದೀ ಭೂಮಿ. ಉಗ್ರವ್ಯಾಘ್ರನ ಹರಿತ
ಹಲ್ಲು ಕಿತ್ತೆಸೆವೆ. ಪುರಾತನ ಪಕ್ಷಿ ಫೀನಿಕ್ಸ್
ತನ್ನ ರಕ್ತದಿ ಬೂದಿ. ನಿನ್ನ ಪುಟಿಗಾಲಿನಲಿ
ಹರ್ಷ-ದುಃಖದ ಋತು. ನೀನೊ, ನಿನ್ನೀಜಗವೊ
ಬೇಕಾದ್ದು ಮಾಡು. ಬಾಡುವುದೆಲ್ಲ ಮಾಧುರ್ಯ.
ಆದರೊಂದನು ಮಾತ್ರಮಾಡದಿರು, ನಿನಗಾಣೆ.
ಚಣದ ಚಾಣಗಳಿಂದ ಕೆಡಿಸದಿರು ಕುಡಿಹುಬ್ಬು,
ಹಳೆಯ ಲೇಖನಿಗೆರೆಯ ಹಣೆಗೆ ಮೂಡಿಸಬೇಡ.
ಬಿಟ್ಟುಬಿಡು ಎನಿತು ಕೊಂಕಿಸದಂತೆ ಇನಿಯಳನು
ಮುಂಬರುವ ಜನಕಿದೇ ಚೆಲುವು ಮಾದರಿಯಾಗಿ.
    ನಿನ್ನ ಕೈತೋರಿಸದೆ ಬಿಡುವೆಯ ಮುದಿಯ, ಇರಲಿ
    ನನ್ನ ಕವಿತೆಯೊಳಾಕೆ ಚಿರಯುವತಿ, ನೆನಪಿರಲಿ.

ಷೇಕ್ಸ್‌ಪಿಯರನ ಸಾನೆಟ್ ನಂ. ೧೯

ಅಮೃತ ಶಿಲೆಯಲ್ಲ

ಅಮೃತಶಿಲೆಯಲ್ಲ, ಅರಸರಟ್ಟಹಾಸದ ಸ್ವರ್ಣ-
ಸ್ಮಾರಕವಲ್ಲ—ಈ ಕವನ ಭವನದ ಎದುರು ;
ದಿನ ದಿನಕೆ ಮಾಸಿ ಬುರುಸುಗಟ್ಟುವದು ಕಲ್ಲಿನ
ಪ್ರತಿಮೆ ; ಸುಡಿಯೊಳಗೊ ಮತ್ತಿನಿತು ಹೊಳೆದು ಹೊಡಕರಿಸಿ
ನಿಲ್ಲುವೆ ನೀನು ; ಕಾಳಗದಲೆಲ್ಲ ವಿಗ್ರಹ ಹಾಳು.
ಗಲಭೆಯಲಿ ಭಾರಿಕಟ್ಟಡವೆನಿತೊ ಬುಡಮೇಲು.
ರಣಚಂಡಿ ಕತ್ತಿ ಕಡಿಯದು, ಯುದ್ಧ ಸುಡಲರಿದು
ನಿನ್ನ ನೆನಪಿನ ಕವನ ಜೀವಂತ ದಾಖಲೆಯ.
ಮೃತ್ಯುವನು, ಮಹಾವಿಸ್ಮೃತಿಯನೂ ದಾಟಿರುವೆ,
ನಿನ್ನ ಸ್ತುತಿಗಿಂಬುಂಟು ಇನ್ನೂ, ಮುಂದಿನೆಲ್ಲ
ತಲೆಮಾರುಗಳ ಜನದ ಕಣ್ಣಿನಲಿ, ಜಗವೆಲ್ಲ
ಜೀರ್ಣವಾಗುತ ಕೊನೆಯ ಗತಿಯ ಮುಟ್ಟುವವರೆಗು.
ಮತ್ತುದಿಸಿ ದೇವನೆಡೆ ಕೊನೆಯ ತೀರ್ಪಿನವರೆಗು
ಇಲ್ಲಿ ಬದುಕಿರುವೆ, ಪ್ರಣಯಿಗಳ ಕಣ್ಣ ಬೆಳಕು.

ಷೇಕ್ಸ್‌ಪಿಯರನ ಸಾನೆಟ್ ನಂ. ೫೫

ಒಡಲ ನರಕದ ಭಾಂಡ

ಒಡಲ ನರಕದ ಭಾಂಡ ಕುದಿಸಿ ಭಟ್ಟಿಯ ತೆಗೆದ
ಮೋಹಿನಿಯ ಕಣ್ಣೀರ ಗುಟುಕನೆಷ್ಟೋ ಕುಡಿದೆ.
ಭರವಸೆಗೆ ಅಂಜಿಕೆಯ, ಶಂಕೆಗಾಸೆಯ ಸವರಿ
ಕಳಕೊಂಡೆ ಗೆದ್ದೆನೆನ್ನುತ ಕೈಗೆ ಬಂದುದನು.
ನಾ ಸುದೈವಿಯು ಎಂದು ಹಿಗ್ಗಿ ಹಾರೈಸಿರಲು
ಯಾವ ಅಪರಾಧಕೀ ಶಿಕ್ಷೆ? ಎಂಥ ಹತಭಾಗ್ಯ!
ಇರುವ ಕಣ್ಣಾಸು ಕಿತ್ತು ಹತ್ತಿಸಿದಂತೆ ಮತ್ತೆ
ಈ ಜ್ವರದ ಸನ್ನಿಪಾತದ ಹುಚ್ಚು ದಿಗ್ಭ್ರಮಣೆ.
ಅನಿಷ್ಟದುಪಕಾರ ಈಗ ಹೊಳೆಯಿತು ಸ್ಪಷ್ಟ.
ಕೇಡಿನಿಂದೊಳಿತು ಮತ್ತಿನಿತು ಲೇಸೆನಿಸುವದು.
ಮುರಿದ ಒಲವಿನ ಮನೆಯ ಬಿಚ್ಚಿ ಕಟ್ಟಲು ಹೊಸತು
ಮೊದಲಿಗಿಂತಲು ಚೆಂದ, ಗಟ್ಟಿ, ಗೌರವ ಘನತೆ.
    ಆಕ್ಷೇಪಣೆಯ ಹೊತ್ತು ಮರಳಿದೆನು ಸಾಕಷ್ಟು.
    ಕಾಯಿಲೆಯ ನಷ್ಟಕೊದಗಿದ ಲಾಭ ಮೂರುಪಟ್ಟು.

ಷೇಕ್ಸ್‌ಪಿಯರನ ಸಾನೆಟ್ ನಂ. ೧೧೯.

ನನಗೆ ನನ್ನವಳೆ

ನನಗೆ ನನ್ನವಳೆ ಹೆಂಡತಿಯಿರುವಳು,
ಉಳಿದರ ಜೊತೆ ನಾ ಕೂಡಿಲ್ಲ;
ಯಾರೂ ಅನ್ನರು 'ಜಾರೆಯ ಗಂಡ'
ಬೇರೆ ಮಿಂಡರದು ಭಯವಿಲ್ಲ.

ಖರ್ಚಿಗಿಹುದು ಒಂದಾಣೆ ನನ್ನ ಬಳಿ
ಯಾರುಪಕಾರವು ಬೇಕಿಲ್ಲ;
ಕೈಗಡ ಕೊಡುವದಕೇನೂ ಇಲ್ಲ,
ಮಂದಿಗೆ ಸಾಲವ ಬೇಡಿಲ್ಲ.

ಯಾರ ಮೇಲು ನನ್ನೊಡೆತನವಿಲ್ಲ,
ಯಾರ ಗುಲಾಮನು ನಾನಲ್ಲ:
ಹದನವಾದಗಲ ಕತ್ತಿ ಕೈಯೊಳಿದೆ
ಯಾರಿಗೆಂದು ನಾ ಬಾಗಿಲ್ಲ.

ಉಲ್ಲಾಸದಿ ನಾ ಸ್ವತಂತ್ರನಿರುವೆ
ಯಾರಿಗು ದುಃಖವ ಪಟ್ಟಿಲ್ಲ.
ಯಾರೂ ನನ್ನಯ ಕಾಳಜಿ ಮಾಡರು
ಯಾರ ಲಕ್ಷ್ಯವೂ ನನಗಿಲ್ಲ.

ರಾಬರ್ಟ್ ಬರ್ನ್ಸ್: 'I have a wife of my own'

ಇರುವ ಅಲ್ಪದರಲ್ಲಿ ತೃಪ್ತಿಯು . . .

ಇರುವ ಅಲ್ಪದರಲ್ಲಿ ತೃಪ್ತಿಯು, ಅಧಿಕವಿದ್ದರೆ ಮೋದವು.
ಚಿಂತೆ ಕಾಳಜಿಯಿಂದ ಕೂಡಿಡುವಂತೆ ಬಂದರೆ ಸಮಯವು
ನುಸುಳಿ ನನ್ನೆಡೆ ಬರುವ ಹೊತ್ತಿಗೆ ಅವಕೆ ರುಚಿ ತೋರಿಸುವೆನು :
ಬುಂಡೆಯಲಿ ಸೊರೆ ಹೆಂಡವೀಯುತೆ ಹಳೆಯ ಹಳ್ಳಿಯ ಹಾಡನು.

ಪೀಡಿಸುವ ಯೋಚನೆಯ ಮೊಳಕ್ಕೆ ಪರಚುವೆನು ಒಮ್ಮೊಮ್ಮೆಗೆ ;
ಆದರೀ ಮಾನವನು ಯೋಧನು, ಜೀವನವೆ ಹೋರಾಟವು.
ನನ್ನ ಉಲ್ಲಸ ನಡೆ, ವಿನೋದವೆ ನನ್ನ ಚೀಲದ ನಾಣ್ಯವು
ನನ್ನ ಬಿಡುಗಡೆಯೆನ್ನ ಒಡೆತನ,—ಮುಟ್ಟಲಾರಿಗೆ ಧೈರ್ಯವು ?

ತೊಂದರೆಯೆ ಹನ್ನೆರಡು ತಿಂಗಳು ನನ್ನ ಭಾಗಕೆ ಬಂದರೆ
ಒಂದಿರುಳು ಒಳಿತಾದ ಗೆಳೆತನ ಬೆಸಿಗೆ ಹಾಕುವದೆಲ್ಲಕೆ :
ಒಮ್ಮೆ ಯಾತ್ರೆಯು ಮುಗಿದು ಹೋಗುವ ಸಂತಸದಿ ನಾವಿರುತಿರೆ
ಯಾವನಾದರು ಚಿಂತೆ ಪಡುವನೆ ಗತಿಸಿ ಹೋಗಿಹ ದಾರಿಗೆ ?

ಕುರುಡು ದೈವವು ಬರಲಿ ಎಡವುತ ಹಾದಿಯಲಿ ತನ್ನಷ್ಟಕೆ ;
ಒಳಿತು ಮಾಡಲಿ, ಕೇಡು ಬಗೆಯಲಿ, ಅದರುಸಾಬರಿ ಯಾರಿಗೆ :
ಸುಖವೆ ಬರಲಿ, ಕಷ್ಟ ಬರಲಿ, ಬರಲಿ ಇಷ್ಟಾನಿಷ್ಟವು ;
ಬರುವುದೆಲ್ಲಾ ಬಂದು ಹೋಗಲಿ ಯಾರಿಗಿದರೊಳು ನಷ್ಟವು !

ರಾಬರ್ಟ್‌ಬರ್ನ್ಸ್ : 'Contented with Little'

ಆರಿದ ಕುಲಿಮೆ

೧

ಈಗ ಅಂತರ ಬಿಟ್ಟು ಮಲಗುವರು, ಇಬ್ಬರದು ಹಾಸಿಗೆ ಬೇರೆ ;
ಅವನ ಕೈಯೊಳಗೊಂದು ಗ್ರಂಥ, ಬಹಳ ಹೊತ್ತಿನವರೆಗು ರಾತ್ರಿಯಲಿ ದೀಪ ;
ಬಾಲ್ಯದ ಕನಸು ಕಾಣುವ ಮುಗ್ಧ ಹುಡಿಗೆಯಂತಿವಳ ಮುಖ ಚಹರೆ,
ಅಲ್ಲಿ ಗಂಡಸರೆಂಬ ಸುಳಿವಿಲ್ಲ—ಯಾವುದೋ ಒಂದು ಹೊಸ ಘಟನೆ ಸಂಭವಿಪ
ಸಮಯ ಕಾದಿರುವಂತೆ : ಇವ ತೆರೆದ ಪುಸ್ತಕದ ಪುಟವ ತಿರುವಿಲ್ಲ.
ಮೇಲೆ ಆಡುವ ನೆರಳಿನಲ್ಲಿ ಆಕೆಯ ಕಣ್ಣು ; ಬೇರೆ ಸದ್ದಿಲ್ಲ.

೨

ತೆರೆಗೆ ತೂರುತ ಬಂದ ಒಡೆದ ಹಡಗಿನ ಚೂರು : ಹೊಸತರಲಿ ಮಸೆದ
ರಾಗೋದ್ವೇಗ
ಈಗೆನಿತು ಹಾಯಾಗಿಹರು. ಒಬ್ಬರೊಬ್ಬರಸಿಷ್ಟು ಮುಟ್ಟಲಾರರು ಕೂಡ,
ಮುಟ್ಟಿದರು ಏನೊ ಪ್ರಾಯಶ್ಚಿತ್ತ, ಯಾವುದೋ ತಪ್ಪನೊಪ್ಪಿದ ಹಾಗೆ ; ಆಗ
ಒಂದೆ ತುಸು ಭಾವ ಸಂವೇದ—ಅಥವ ಇನ್ನೂ ಗಾಢ ;
ವೀತರಾಗ ಭಾವಕೋಲೈಸಿ ನಿಂತವರು ; ಇಡಿಯ ಜೀವನ ತೇದು
ಇದಕಾಗಿ ಹಮ್ಮಿ ಹದಗೊಂಡಿರುವ ಬದುಕು, ಎಲ್ಲ ಮದವಳಿದು.

೩

ಅಗಲುವರು ಅಪರಿಚಿತರಂತೆಯೆ, ಹಾಗೆಯೇ ಹತ್ತಿರಕೆ ಬಂದು ಕೂಡಿದರು ;
ನಡುವೆ ನಿಡಿದಾಗಿರುವ ಮೌನ ಇಬ್ಬರನು ಎರಡೂ ತುದಿಗೆ ಹಿಡಿದು-
ಕೊಂಡಿಹ ದಾರ ; ಸುತ್ತಿ ಬಿಗಿವುದಕಲ್ಲ. ಕಾಲವೂ ಕೂಡ ನವುರು-
ಗರಿಯಂತಿವರ ಮೃದುವಾಗಿ ಸೋಕಿಹುದು. ಮುದುಕರಾದುದು
ಅವರು ಬಲ್ಲರೆ, ಈರ್ವರೂ ಈ ನನ್ನ ಹಡೆದು ಹೊರೆದವರು ?
ಯಾರ ರಾಗದ ಕುಲಿಮೆಯೆನ್ನ ಹೊರಹೊಮ್ಮಿಸಿತೊ, ಅದು ಆರಿ ತಣ್ಣಗಿಹುದು ?

ಎಲಿಜಾಬೆಥ್ ಜೆನ್ನಿಂಗ್ಸ್—'One Flesh'

ಯಾರವನು ?

ಯಾರವನು ಒಬ್ಬೊಂಟಿ ಎಚ್ಚರಿರುವವನು
ಮಲಗಿ ನಿದ್ರಿಸುತಿರುವ ಈ ಪೃಥ್ವಿಯಲ್ಲಿ ?
ನಿಶ್ಶಬ್ದ ಎಲೆಗಳಲಿ ತೂಕಡಿಪ ಗಾಳಿಯಲ್ಲಿ ?
ಮೌನ ಮಲಗಿದ ಹಕ್ಕಿಗೂಡಿನಲಿ
ಹೂವು ಮೊಗ್ಗುಗಳೆದೆಯ ಗುಪ್ತಕೇಂದ್ರದಲಿ ?

ಯಾರವನು ಏಕಾಕಿ ಎಚ್ಚರಿರುವವನು ?
ಇರುಳಿನೆದೆಯನು ತುಡಿಯುತಿರುವ ತಾರಾಗಣದಿ
ನನ್ನ ಇರವಿನ ನೋವಿನಾಳದಲ್ಲಿ
ಯಾರವನು ಒಬ್ಬೊಂಟಿ ಎಚ್ಚರಿರುವವನು ?

ರವೀಂದ್ರರ 'Crossing' : 15

ಮೋಡಗಳು ನಾವು

ಬಾನು ತನ್ನನವರತ ನೀಲಿಮೆಯ ದಿಟ್ಟಿಸುತ
ಕನಸುಗಳ ಕಾಣುತಿಹುದು;
ಮೋಡಗಳು ನಾವದರ ವಿಪರೀತ ಹುಚ್ಚುಗಳು
ನಮಗಿಲ್ಲ ಮನೆಯಾವುದೂ.

ನಿತ್ಯತೆಯ ಮುಕುಟದಲಿ ನಕ್ಷತ್ರ ಹೊಳೆಯುತಿವೆ
ಸ್ಥಿರ ಲಿಖಿತ ರೂಪವಿಹುದು;
ನಮ್ಮದೋ ಬರಿ ಸೀಸಕಡ್ಡಿ ಬರೆದಂತಿಹುದು
ಮರು ಚಣದಿ ಅಳಿಸಬಹುದು.

ವಾಯುರಂಗದಿ ಬಂದು ಮದ್ದಲೆಯ ಬಡಿಯುವದು
ನಗೆ ಮಿಂಚನೆಸೆವ ಪಾತ್ರ,
ಅಲ್ಲದೆಯೆ ನಮ್ಮ ನಗೆ ಮಳೆ ಸುರಿಸುವದು ಸತ್ಯ
ಹುಡುಗಾಟವಲ್ಲ ಗುಡುಗು.

ಈಗಲೂ ಪ್ರತಿಫಲಕೆ ಕಾಲಪುರುಷನ ಕೂಡ
ಹಕ್ಕು ಸಾಧಿಸುತಿಲ್ಲ ನಾವು.
ಜೀವ ತುಂಬಿದ ಉಸಿರೆ ಊದಿಬಿಡುವದು ದೂರ
ಹೆಸರೊಂದನೀವ ಮೊದಲು.

ರವೀಂದ್ರರ '**Lover's Gift**' : **46.**

ಮೋಡ ಉಸುರಿತು . . .

ಮೋಡ ಉಸುರಿತು ನನಗೆ; "ನಾಶ ಹೊಂದುವೆನು."
ಇರುಳು ನುಡಿಯಿತು: "ನಾನು ಜಿಗಿವೆನರುಣೋದಯದ
ಅಗ್ನಿ ಕುಂಡದೊಳು."
"ಅವನ ಹೆಜ್ಜೆಯ ಗುರುತಿನಂತೆ ಮೌನದಲಿರುವೆ"
ಒಡನುಡಿಯಿತಿಂತು ನೋವು.
ನನ್ನ ಬಾಳೆನಗೆ ಹೇಳಿತು: "ಮಾನವತೆಯಲ್ಲಿ ಕರಗುವೆನು."
"ನನ್ನ ಬೆಳಕುಗಳೆಲ್ಲ ನಿನ್ನ ಭಾವನೆಗಳನು
ಚಣ ಚಣಕು ಮುದ್ದಿಸುವವು"
ನುಡಿಗೊಟ್ಟಿತಿಂತು ಇಳೆಯು.
ಪ್ರೇಮವೆಂದಿತು: "ದಿನಗಳುರುಳುವವು, ಆದರೂ,
ನಿನಗಾಗಿ ನಾನಂತು ಕಾದೆ ಕಾಯುವೆನು."
ಸಾವು ಹೇಳಿತು: "ನಿನ್ನ ಬಾಳದೋಣಿಯ ನಾನು
ಕಡಲಾಚೆ ದಾಟಿಸುವೆನು."

ರವೀಂದ್ರರ 'Fruit-Gathering' LIV.

ನೆರಳು-ಬೆಳಕು

ಸಿನ್ನ ದೀಪವ ಬಾನಿನಲ್ಲಿ ನೀ ಹಿಡಿದಾಗ
ಬೆಳಕು ಬೀಳುವುದೆನ್ನ ಮೊಗದ ಮೇಲೆ
ಅದರ ನೆರಳಾಡುವದು ನಿನ್ನ ಮೇಲೆ.

ನಿನ್ನ ಹೃದಯದಿ ನಾನು ಪ್ರೇಮ ದೀಪವ ಹಿಡಿಯೆ
ಅದರ ಬೆಳಕಾಗುವದು ನಿನ್ನ ಮೇಲೆ
ನಾನು ನಿಂತೆನು ಹಿಂದೆ ನೆರಳಿಸಲ್ಲೆ.

ರವೀಂದ್ರರ 'Fruit-Gathering', LXX.

ನನ್ನ ಜೀವನದಿಂದ . . .

ಜನಕೆ ಪೂಜಿಸಲೆಂದು ನಿನ್ನ ಪ್ರತಿಮೆಯನೊಂದು
ನನ್ನ ಜೀವನದಿಂದೆ ರೂಪುಗೊಳಿಸೆ,
ನನ್ನ ಮಣ್ಣನು, ಮನೋರಥಗಳನು ಮತ್ತೆಲ್ಲ
ಬಣ್ಣಗನಸನು ಭ್ರಾಂತಿಗಳನು ತಂದೆ.

ನನ್ನ ಜೀವನದಿಂದ ನಿನ್ನೆದೆಯ ಮೂರ್ತಿಯನು
ನಿನ್ನ ಪ್ರೀತಿಗೆ ರೂಪುಗೊಳಿಸೆನ್ನಲು,
ಸಿದ್ಧಗೊಳಿಸಿದೆ ನಿನ್ನ ಅಗ್ನಿ, ಸತ್ಯತೆ, ಶಕ್ತಿ
ಸೌಂದರ್ಯ, ಶಾಂತಿಗಳ ಪರಿಕರವನು.

ರವೀಂದ್ರರ ' Fruit-Gathering ' XXXIII

ಬೆಳಕು-ಪರದೆಯ ಹಿಂದೆ

ದಿನಗಳೆಲ್ಲವು ನನ್ನ ದಾರಿ ಗಾಬರಿಗೊಳಿಸಿ
ಸೋಮಾರಿ ಧೂಳಿಯನ್ನೊಟ್ಟಬಹುದು ;
ಆದರೂ ಒಂದು ದಿನ ನನ್ನೊಳಗೆ ಹುದುಗಿರುವ
ಜೀವಾಳವನು ನಾನು ಕಾಣಲಿಹುದು.
ಜೀವನದ ಆಳದಲ್ಲಡಗಿದಾನಂದವನು
ನಾನೊಮ್ಮೆ ಕಡೆಮುಟ್ಟಿ ನೋಡಲಿಹುದು.

ಸುಳುವು-ಹೊಳವುಗಳಲ್ಲಿ ನಾನದನು ಕಂಡಿರುವೆ,
ನನ್ನ ಮೇಲದರುಸಿರು ಹಾಸಿ ಬೀಸಿ
ಹರಿದಾಡಿಹುದು,—ನನ್ನ ಯೋಚನೆಗಳನು ಇನಿತು
ಸಮಯ ಪರಿಮಳದಿಂದ ತುಂಬಿ ಸೂಸಿ.
ಬೆಳಕು-ಪರದೆಯ ಹಿಂದೆ ನನ್ನನುಳಿದಿರುವ ಆ
ಆನಂದವನು ಒಮ್ಮೆ ಕಾಣಲಿರುವೆ ;
ನಿಲ್ಲುವೆನು ಅಲ್ಲಿ, ಹೊರಸೂಸುವೇಕಾಂತದಲಿ
ಸಕಲ ವಸ್ತುಗಳೆಲ್ಲ ಸೃಷ್ಟಿಕರ್ತನ ಕೂಡ
ಒಂದಾಗಿ ತೋರುವಲ್ಲಿ.

ರವೀಂದ್ರರ ' Fruit-Gathering ', XXI.

ನೂರು ವರುಷದ ಮೇಲೆ

ನೂರು ವರುಷದ ಮೇಲೆ ಆ ನನ್ನ ಕವಿತೆಗಳ-
ನೋದುತಿಹ ಓದುಗನೆ ನೀನು ಯಾರು ?
ಈ ವಸಂತದ ವಿಪುಲ ವೈಭವದ ಸಿರಿಯಿಂದ
ಕಳುಹಲಾರೆನು ಹೂವನೊಂದಾದರೂ.

ಬಾನಿನಂಚಿಗೆ ತೇಲುತಿರುವ ಮೋಡಗಳಿಂದ
ಕಳಿಸಲಾರೆನು ಹೊನ್ನಿನೆಳೆಯೊಂದನು.

ನಿನ್ನ ಬಾಗಿಲುಗಳನು ತೆರೆದು ನೋಡು :
ಅರಳಿರುವ ನಿನ್ನ ಹೂದೋಟದಲಿ ಸಂಚಯಿಸು
ನೂರು ವರುಷದ ಮೊದಲು ಮರೆಯಾದ ಹೂವುಗಳ
ನರುಗಂಪು-ನೆನಹುಗಳನು.

ಆ ಹಿಂದೆ, ವಸಂತದೊಂದು ಮುಂಜಾವದಲಿ ಹಾಡಿ
ನೂರು ವರುಷಗಳಾಚೆ ಚಿಮ್ಮಿಸಿದ ಹರ್ಷಧ್ವನಿಯ
ಜೀವಂತ ಸಂತಸವನನುಭವಿಸಬಹುದು.

ರವೀಂದ್ರರ 'Gardener'-55.

ಮೃತ್ಯುವಿಗೆ

ಏಕಿನಿತು ಮೆಲ್ಲಗೆ ಕಿವಿಗೆ ಪಿಸುಗುಟ್ಟುತಿರುವೆ
ಮೃತ್ಯು, ಓ, ನನ್ನ ಮೃತ್ಯು!
ಸಂಜೆಯಾಗುತ ಹೂವು ಬಾಡುತಿರಲು
ಕೊಟ್ಟಿಗೆಗೆ ಮರಳುತಿರೆ ದನಕರುಗಳು
ಕಳ್ಳ ಹೆಜ್ಜೆಯನಿಡುತ ಬಂದು ನನ್ನೊಡನೆ
ತಿಳಿಯದಾವುದೊ ಬಾಷೆ ನುಡಿಯುತಿರುವೆ.

ಜೋಂಪಿಸುವ ಕಲರವದ, ತಣ್ಣಗಿನ ಮುತ್ತುಗಳ
ನಿದ್ರೆಯೌಷಧಕೊಟ್ಟು ನನ್ನೊಳಿಂತು
ಪ್ರೇಮಯಾಚನೆಯಿಂದ ಒಲಿಸಿಕೊಂಬುವ ಬಗೆಯೆ
ಓ ಮೃತ್ಯು! ಬಾಳ್ವೆಯೇ ನಿನ್ನ ಹೊರತು?

ಏನು ನಮ್ಮೀಮದುವೆಗಿಲ್ಲವೆ ಸಮಾರಂಭ?
ಮುಡಿವುದಿಲ್ಲವೆ ಚೆಲುವ ಹೂಮಾಲೆಯನು ನೀನು
ಕಂದುಗೂದಲ ಹೆಳಲ ಸಿಂಗಾರಕೆ?
ನಿನ್ನ ಮುಂಗಡೆ ಧ್ವಜವನೆತ್ತಿ ಸಾಗುವರಿಲ್ಲೆ?
ಇರುಳೆಲ್ಲವೂ ಕೆಂಪು ದೀವಟಿಗೆ ಬೆಳಕಿನಲಿ ಉರಿವುದಿಲ್ಲೆ?
ಮೃತ್ಯು, ಓ, ನನ್ನ ಮೃತ್ಯು!
ಬಾ, ನಿನ್ನ ಶಂಖನಾದದ ನಿರಾತಂಕ ನಿರುಪಾಧಿಯಲಿ
ನಿದ್ದೆ ಪೆರಸಾರಿರುವ ರಾತ್ರಿಯಲ್ಲಿ.
ತೆಗೆದುಕೊ, ತೊಡಿಸೆನಗೆ ಕೆಂಪು ಗೌಸಣಿಗೆಯನು
ಕೈ ಹಿಡಿದು ಕರೆದುಕೊ; ಎಂಥ ಚೆನ್ನಿಗನು!

ಎಲ್ಲಿ, ಬಾಗಿಲದಿ ನಿನ್ನ ಸಾರಥಿ ಸಿದ್ಧನಾಗಿರಲಿ
ಕುದುರೆಗಳು ಆತುರದಿ ಕೆನೆಯುತಿರಲಿ.
ಮೇಲುದವನೋಸರಿಸಿ ನೋಡೆನ್ನ ತುಂಬಿದಭಿಮಾನದಲಿ
ಮೃತ್ಯು, ಓ, ನನ್ನ ಮೃತ್ಯು!

ರವೀಂದ್ರರ 'Gardener'-81

ಮಿಂಚು-ಹುಳ

ಸಂದಿಹ ಸೂರ್ಯನ ನೆನಪಿಗೆ ಭಾನು
ಎಣಿಸುವದಿರುಳೆಲ್ಲವು ತಾನು
ಅಗಣಿತ ತಾರಾ ಜಪಮಾಲೆಯನು.

* * *

ದೇವ ತನ್ನಯ ತಾರೆ-ದೇಗುಲದಿ ಕಾಯುವನು:
ತನ್ನ ಹಣತೆಯ ತನಗೆ ತರಲು ಮಾನವನು.

* * *

ಗಾಳಿಯಲಿ ರೆಕ್ಕೆಗಳ ಗುರುತನಿರಿಸಿಲ್ಲ
ಆದರೂ ಎಂಥ ಸುಖಿ, ಹಾರಿಬಂದಿಹೆನಲ್ಲ!

* * *

ಎಲೆಯಲಿ ಮಿನುಗುವ ಮಿಂಚು-ಹುಳ
ಸೋಜಿಗ ಪಡಿಸಿವೆ ತಾರೆಗಳ.

* * *

ಭೂಮಿಯ ಕೊನೆಯಿಲ್ಲದ ಸಾಹಸವೀ ಗಿಡಗಳು
ಕಿವಿಗೊಡುತಿಹ ಸಗ್ಗದೊಡನೆ ಎದ್ದಿವೆ ಮಾತಾಡಲು.

* * *

ನಸುಕು—ನಾನಾಬಣ್ಣದೊಂದು ಹೂ—ಬಾಡುವದು
ಆಮೇಲೆ ಬರಿಯ ಬೆಳಕಿನ ಹಣ್ಣು,—
ಸೂರ್ಯ ಮೂಡುವನು.

* * *

ದೂರದ ಸಮುದ್ರವನು ಬೆಟ್ಟ ಮುಟ್ಟುವದೆಂತೊ
ತನ್ನ ಜಲಪಾತದಿಂದ,
ಅಂತು ದೇವನ ಹಿಡಿವೆ ಹಾಡಿನಿಂದ.

ರವೀಂದ್ರರ ' Fire flies 'ದಿಂದ.

ಹೊಸ ವರುಷ

ಚೈತ್ರನ ತನಿಸೆಳಕಿನ ಸೋಂಕಿಗೆ ಮಧುಮಯುವಾಗಿದೆ ಗಾಳಿ.
ಥಳಥಳಿಸಿವೆ ಗಿಡದೆಲೆ ಹುಲ್ಲೂ ಹಸುರಿನ ಕಾಂತಿಯಲಿ.
ಯಶವೆತ್ತಿಹ ದೇವತೆ ಈ ಹೊಸ ಹಸುರಿನ ರೂಪದಲಿ,
'ಆವಿರ್' ಹೆಸರಿನಲಿ.
"ಆವಿರ್ಭ್ಯಃ ನಮೊ ದೇವತಾ . . .
ತಸ್ಯಾ ರೂಪೇಸೇಮೇ ಹರಿತಾ ಹರಿತಾಸ್ರಜಃ"
ಈ ಪಸುರಿನ ಪಚ್ಚೆಯ ದೇವತೆಗೆ
ವಂದನೆ ವರ್ಷಾರಂಭದಲಿ.

ಚಳಿಗಾಲಕೊಣಗಿ ಬರಡಾದ ಗಿಡಗಂಟೆಯಲಿ
ಹುಯ್ಯಲಿಟ್ಟಿತು ಗಾಳಿ ಈಸು ದಿವಸ;
ಜೂಜು ಕುದುರೆಯನೇರಿ ಓಡಿತು ಅನಿರ್ಬಂಧ
ಹೊಲದುದ್ದ ನೆಲದಗಲ ಆ ದಿಗಂತ.

ಇಂದು ವೈಶಾಖದೀ ಗಂಗೆ ತಿಳಿನೀರಿನಲಿ
ನಸುಕಿನಿಂದಲು ಎಸೆವ ನೆಳಲು-ಬೆಳಕು.
ಪಾರದರ್ಶಕ ಜಲವ ತೂರಿ ಹೋಗುವ ದೋಣಿ
ಚಿಮುಕಿಸುವ ಮಿಂಚು-ಮಿಣುಕು.

ಆಚೆ ದಂಡೆಗೆ ವಿವಿಧ ಬಣ್ಣದಾಕಳ ಹಿಂಡು
ಅತ್ತಿತ್ತ ಅಲೆದಾಡುತಿರುವುವೆಳಹುಲ್ಲು ಹೊಸ ಚಿಗುರು ಕಂಡು.

ಗಂಡು ಹೆಣ್ಣಿಗು ಹೀಗೆ ಬಣ್ಣ ತಿರುಗುವುದುಂಟೆ?
ಕೆಲವರೆದೆ, ಬಾಹು, ಕುತ್ತಿಗೆ, ಕಣ್ಣು-ಗೊಂಬೆಯಲಿ
ಕಂಡಿರುವೆನೊಂದೊಂದು ಮಿಂಚುಗಿರಣ.
ಅದರಿಂದ ಬೆಳಕು ಬೀಳದು, ದಾರಿಗೊಂದಿನಿತು ಬಾರದೋ ಬೆಡಗು ಬಣ್ಣ.
ಬಣ್ಣದಲೆಗಳಲವರ ಮೈ ತುಂಬಿ ತುಳುಕಿಸುತ
ವರ್ತಿಸಲಿ ನವಿಲಿನೊಲು ತುಂಬಿ ಕಣ್ಣ.

ಹೊಳೆವ ಕನ್ನಡಿಯಂತೆ ಅರಳಿದಾಕಾಶದಲಿ
ಪೃಥ್ವಿ ಪ್ರತಿಬಿಂಬ ಮೂಡಿ,
ನಗರ ಮಧ್ಯದ ಗಗನ ಮಹಲು ಮೆಟ್ಟಿಲನೇರಿ
ಬಂದನದೊ ಚಂದ್ರ, ನೋಡಿ.
ಆಗಸದ ಅಂಗಳದಿ ಚಿಕ್ಕೆ ತೂಗಾಡುತಿವೆ
ಮಿಂಚು ಹುಳ ತೊಳಗುತಿರುವಂಥ ಮೋಡಿ.

ಇಂದು ಹೊಸದಿನದಂದು
ಹೊತ್ತಿಸಿಹನಲ್ಲಿ ಅದೊ, ಆವಿರ್ ದೇವತೆ
ಪಟ್ಟಣದ ಬೋಳು ಮರಗಳ ಮೇಲು
ಹಸುರು ಮುರಿಯುವ ಲಕ್ಷ ಹೊನ್ನ ಹಣತೆ.
ಅವನು ಮುಟ್ಟಿದುದೆ ತಡ, ಬಹುರೂಪಿಣೀ ನಗರ
ಒಮ್ಮೆಲೇ ತಾಯಿಯಾಗಿ,
ಹಸಿರು ತೊಂಗಲ ನಡುವೆ ತಿರುಗುವಳು ಹಾಯಾಗಿ ಜೀವ ರಮಿಸಿ.
ಆ ದೇವತೆಯೆ ಎನ್ನ ಭಾರವಾದೆದೆಯಿಂದ
ಹಿರಿದುಕೊಂಡನು ಚುಚ್ಚಿದೊಂದೊಂದೆ ಚೂಪಾದ ಗುಂಡು ಸೂಜಿ.

ಶ್ರೀ ದಿನೇಶದಾಸ ಅವರ ಬಂಗಾಲಿ ಕವಿತೆ 'ನವವರ್ಷ'

ಮೊದಲ ಚರಣಗಳ ಅಕಾರಾದಿ

	ಪುಟ
ಅತ್ತ ಬೆಳುವೊಲ, ಇತ್ತ ಮಲೆನಾಡ ಜರಿ ಸೆರಗು	೭೧
ಅಮೃತಶಿಲೆಯಲ್ಲ, ಅರಸರಟ್ಟಹಾಸದ ಸ್ವರ್ಣ	೮೨
ಅರಿತರೂ ಅರಿವುಗೊಡದಂತೆ ಕಪ್ಪು ಮುಸುಕನು	೬೪
ಅಂತೂ ಕೊನೆಗೆ ಬಂತು ಮಳೆ	೧೬
ಆ ಕೋಣೆಯಿಂದ ಕೆಳಗಿಳಿದು ಬಂದು ಈ ಮೋಣೆಯಲ್ಲಿ ಕುಳಿತು	೩೭
ಆಗಸದ ಆಣೆಕಟ್ಟನು ಒಡೆದು ನುಗ್ಗಿದವು	೧೪
ಇದು ನೆಲದ ತುಂಡಲ್ಲ	೧೮
ಇರುವ ಅಲ್ಪದರಲ್ಲಿ ತೃಪ್ತಿಯು, ಅಧಿಕವಿದ್ದರೆ ಮೋದವು	೮೫
ಈಗ ಅಂತರ ಬಿಟ್ಟು ಮಲಗುವರು, ಇಬ್ಬರದು ಹಾಸಿಗೆ ಬೇರೆ	೮೬
ಈ ಕಾಲನೆಂಬುವ ಪ್ರಾಣಿ	೩೦
ಈ ಮನದ ಮಧ್ಯಬಿಂದುವಿನಿಂದ ಹೊರಟ	೫೮
ಈ ಮನಸಿನೊಳಗೊಬ್ಬ ಸೂರ್ಯ ಸುತ್ತಲು ಕಿರಣ	೬೩
ಉತ್ತುಂಗಿ! ಜೀವನದ ಸತ್ವದಿಂದತ್ತರಕೆ	೭೪
"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು"	೩
ಒಡಲ ನರಕದ ಭಾಂಡ ಕುದಿಸಿ ಭಟ್ಟಿಯ ತೆಗೆದ	೮೨
ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ; ನೂರು ಬಗೆ.	೭೨
ಎಣಿಸದಿದ್ದರು ಕಾಲ ಉರುಳುವದು ಚಿಕ್ಕೆಗಳ	೬೮
ಎತ್ತರದ ನಿಲವು ; ಮನದಲಿ ನೂರು ನಕ್ಷತ್ರ	೬೯
ಏಕಿನಿತು ಮೆಲ್ಲಗೆ ಕಿವಿಗೆ ಪಿಸುಗುಟ್ಟುತಿರುವೆ	೯೪
ಏನಯ್ಯ, ಕಾಲಪುರುಷ	೨೬
ಏನಾಗಬೇಕಿಹುದೊ ಎಲ್ಲ ಆಗಲಿ ಬೇಕು	೬೬
ಏನಿದೀ ಹನಿಹನಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು	೧೧
ಕಣ ಕಣದ ಗತಿ-ಮತಿಯ ಗುರುತಿಸು, ಆದರೀಗಲೆ	೫೭
ಕಣ್ಣೆರುವಷ್ಟು ನೋಟ, ಕಾಲು ಸೋಲುವ ತನಕ	೬೫
ಕಣ್ಮುಟ್ಟ ಕಂಡಿಲ್ಲ ; ಆದರು ಮನದೊಳೆಂದೊ	೭೫
ಗಗನದಿ ಸಾಗಿವೆ, ಬಾಗಿವೆ ಮೋಡ	೧೦
ಗಾಳಿ-ಬೆರಳುಗಳಿಂದ ಆ ಮಹಾಕಾಶವಿದೊ	೪೧
ಘನತೆ-ಗೌರವ-ಸಮತೆಗಿಷ್ಟಗಲ ತೆರೆದ ಕಿವಿ	೭೩
ಚಿಗುರಿತು ಈ ಹುಲುಗಲ—	೯
ಚೈತ್ರನ ತನಿಸೆಳಕಿನ ಸೋಂಕಿಗೆ ಮಧುಮಯವಾಗಿದೆ ಗಾಳಿ	೯೬
ಜಗದ ಕಡಲನು ಸುತ್ತುತಿದೆ ಹಗಲಿರುಳ ಹಡಗು	೬೧

ಜನಕೆ ಪೂಜಿಸಲೆಂದು ನಿನ್ನ ಪ್ರತಿಮೆಯನೊಂದು ೯೧
ದ.ಬಾ.ಕು. ಮೂರಕ್ಷರವೆ ಸಾಕು; ದಣಿವುದೋರದ ೭೬
ದಿನಗಳೆಲ್ಲವು ನನ್ನ ದಾರಿ ಗಾಬರಿಗೊಳಿಸಿ ೯೨
ನನಗೆ ನನ್ನವಳೆ ಹೆಂಡತಿಯಿರುವಳು ೮೪
ನಿನ್ನ ದೀಪವ ಬಾನಿನಲ್ಲಿ ನೀ ಹಿಡಿದಾಗ ೯೦
ನೂರು ವರುಷದ ಮೇಲೆ ಆ ನನ್ನ ಕವಿತೆಗಳ ೯೩
ನೂರು ಹೂಗಳ ಕಂಪು ತೇಲುತಿದೆ ಗಾಳಿಯಲಿ ೨೨
ಬಾನ ನೀಲಿಯ ಕುಡಿದು, ನಕ್ಷತ್ರಗಳ ಮುಡಿದು ೫೦
ಬಾನು ತನ್ನನವರತ ನೀಲಿಮೆಯ ದಿಟ್ಟಿಸುತ ೮೮
ಬಿಸಿಲೇರಿತು, ಬಾಯಾರಿತು ೭
ಬೆಳ್ಳಗಿದ್ದದ್ದೆಲ್ಲ ಹಾಲೆಂದು ಕುಡಿದೆವೋ ೬೭
ಭಾರತದ ನಾಲ್ವತ್ತು ಕೋಟಿಯ ನೆನೆದು ಎತ್ತಿಹೆ ಲೇಖನಿ ೫೨
ಮಾತು ಬೆಳ್ಳಿ ಕತ್ತಲೆಯ ತಳ್ಳಿ ಸುತ್ತೆಲ್ಲ ಮಿನುಗುತಿರಲು ೪೯
ಮುಕ್ಕಿ ಮೊಗೆಯುವ ಕಾಲ! ಮೊಂಡಗೊಳಿಸುವ ಸಿಂಹ-.... .... ೮೧
ಮೋಡ ಉಸುರಿತು ನನಗೆ; "ನಾಶ ಹೊಂದುವೆನು" ೮೯
ಯಾರವನು ಒಬ್ಬೊಂಟಿ ಎಚ್ಚರಿರುವವನು ೮೭
ಯಾವುದೊ ಅಮೃತಗಳಿಗೆ, ನಿಮ್ಮ ದೃಷ್ಟಿಗೆ ಬಿತ್ತು ೭೭
ಯಾವುದಕ್ಕೂ ಇವಗೆ ಸಂಪೂರ್ಣ ಸ್ವಾತಂತ್ರ್ಯ- ೨೮
ಯುಗ ಯುಗಕೂ ಉರುಳುತಿಹುದು ೨೪
ಯುದ್ಧ ಬಂದಿತು ಸಿದ್ಧರಾಗಿರಿ ೪೭
ರಂಜನಾ- ೫
ವಸುದೇವ-ದೇವಕಿಯರಂತರ್ಭಾವದಿ ಭಗವಜ್ಜ್ಯೋತಿಯು ಹೊತ್ತಿರಲು ೩೯
ಸ್ವಾಮಿಯಡಿಗೆ ಶಿರಬಾಗಿ ಬಂದೆವಿದೊ ಎಲ್ಲ ಸೀಮೆಯಿಂದ ೩೪
ಸುತ್ತು ಹತ್ತೂ ನಿಟ್ಟಿನಿಂದ ಸುತ್ತಿಗೆ ಹಿಡಿದು ೬೦
ಸಂದಿಹ ಸೂರ್ಯನ ನೆನಪಿಗೆ ಭಾನು ೯೫
ಹಚ್ಚ ಹಸುರಿನ ಹೊರೆಯ ಹೊಚ್ಚ ಹೊಸ ಪ್ರಾಯ ೫೯
ಹತ್ತಿರಿದ್ದರು ದೂರ, ಹೃದಯ ಗಹ್ವರದಲ್ಲಿ ೬೨
ಹತ್ತು ನಿಟ್ಟಿನ ಗಾಳಿ, ಬೆಳಕು, ಸವಿ, ಭಾವನೆಗೆ ೭೦
ಹಸುರಿನ ಹೂವಿನ ಹೊದರಿನ ಒಳಗೆ ೪೫

WESLEY PRESS, MYSORE

ಚಿನ್ನದಿಂ ಕಾರಿಸಿರುವರೆ
ನಿಮ್ಮ ಕವನ ಶೈಲಿ ನಾನಾ
ಕಲಿಸಿಂದಿಲ್ಲ ಹೊಮ್ಮಿದರಿಯು
ಸಕ್ಕ ಕಲ್ಪಿಸುವಿಲ್ಲ ಅವಿಸ
ಫಲಿಸಿ. ಓದುವಾಗ ನಿಮ್ಮ
ನೆನಪು ಸಾಲಾ ಬಂದು
ಕಾಡುತ್ತಿತ್ತು ಕಷ್ಟ ದಿಟ್ಟ
ಜೀವಿ ಉದ್ಧಾರ ಮಾಡಿ.
ಜೀವಿ ಜೀವಿ. ಹತ್ತಿರವಿಂದ
ಆಸ್ಕರಿವಿರಿಗೆ ಆರತಿ
ಮಾಡಿ ಸ್ವಾಮಿಗಳ ಹರಿಯ
ಯುವರ ಕವನಗಳನ್ನು
ಓದಿರಲು ಬಿಂದು

ನಿಮ್ಮ ಸಹೃದಯ

Vijaya Evening College Library

BANGALORE

This book should be returned on or before the date last stamped An overdue charge of 10 paise will be levied for each day, if the book is kept beyond that date.

25 SEP 1997		
5/9/89		
7271	23-9-19	9-9-19

Call No.: 3517

Author : [illegible]

Title : [illegible]

Signature	Borrowing Date
[illegible]	7-1-84.
Mohana .M.	11/9/[illegible]
[illegible]	21/[illegible]
7271 [illegible]	

3517